ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 2 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 137 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ನಿರ್ವಿಘ್ನವಾಗಿ ನೆರವೇರಿದ ಗಣಪತಿ ಹಬ್ಬ ■ ಪುಟ–3

ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ಮುರುಘಾ ಶರಣರ ಬಂಧನ



- ಚಳ್ಳಕೆರೆ ಡಿವೈಎಸ್ಪಿ ಕಚೇರಿಯಲ್ಲಿ ಸುದೀರ್ಘ ಕಾಲ ವಿಚಾರಣೆ; ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ, ನ್ಯಾಯಾಧೀಶರ ಮುಂದೆ ಹಾಜರು
- ಪ್ರಕರಣದ ಎರಡನೇ ಆರೋಪಿ ಹಾಸ್ಟೆಲ್ ವಾರ್ಡನ್ ರಶ್ಮಿ ಪೊಲೀಸರ ವಶದಲ್ಲಿ
- ಮುರುಘಾ ಮಠಕ್ಕೆ ಭಾರೀ ಬಂದೋಬಸ್ತ್; ಮುನ್ನೆಚ್ಚರಿಕೆಯಾಗಿ ಹೆಚ್ಚುವರಿ ಪೊಲೀಸ್ ನಿಯೋಜನೆ

ಚಿತ್ರದುರ್ಗ, ಸೆ.1–ಚಿತ್ರದುರ್ಗದ ಮುರುಘಾ ಮಠದ ಅಧೀನದ ಹಾಸ್ಟೆಲ್‌ನಲ್ಲಿದ್ದ ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋ ಪದ ಹಿನ್ನೆಲೆಯಲ್ಲಿ ಪೋಕ್ಸೋ ಕಾಯ್ದೆಯಡಿ ಡಾ. ಶಿವಮೂರ್ತಿ ಮುರುಘಾ ಶರಣರನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆ ಪೊಲೀಸರು ಗುರುವಾರ ರಾತ್ರಿ ಬಂಧಿಸಿದ್ದಾರೆ.

ಇಂದು ಬೆಳಗ್ಗೆ ಪ್ರಕರಣದ ಎರಡನೇ ಆರೋಪಿ, ಹಾಸ್ಟೆಲ್ ವಾರ್ಡನ್ ರಶ್ಮಿ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ರಾತ್ರಿ ವೇಳೆಗೆ ಚಿತ್ರದುರ್ಗ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಬಾಲಚಂದ್ರ ನಾಯಕ್ ಮತ್ತು ಮೊಳಕಾಲ್ಮೂರು ಠಾಣೆಯ ಇನ್ಸ್‌ಪೆಕ್ಟರ್ ಸತೀಶ್, ಮುರುಘಾ ಮಠಕ್ಕೆ ತೆರಳಿ ಮುರುಘಾ ಶ್ರೀಗಳನ್ನು ಬಂಧಿಸಲು ಮುಂದಾಗಿದ್ದರು. ಅಷ್ಟರಲ್ಲಿ ಪೊಲೀಸರಿಗೆ ಸಹಕರಿಸಿದ ಮುರುಘಾ ಶರಣರು, ▶ 8ನೇ ಪುಟಕ್ಕೆ

ಮುರುಘಾ ಶ್ರೀಗಳಿಗೆ ಉಸಿರಾಟ ಸಮಸ್ಯೆ

ಚಿತ್ರದುರ್ಗ, ಸೆ.1–ಮುರುಘಾ ಶರಣರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದಾರೆಂದು ಅವರ ವೈದ್ಯರಾದ ಬಸವೇಶ್ವರ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಪಾಲಾಕ್ಷಯ್ಯ ತಿಳಿಸಿದ್ದಾರೆ. ಶ್ರೀಗಳು ಬಂಧನಕ್ಕೊಳಗಾಗುತ್ತಿದ್ದಂತೆಯೇ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮುರುಘಾ ಶ್ರೀಗಳು ಉಸಿರಾಟದ ತೊಂದರೆಯಿಂದ ಬಳಲುತ್ತಿರುವ ಕಾರಣ ಅವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕು ಎಂದು ಕೋರಲಾಗುವುದು ಎಂದರು.

ಪೋಕ್ಸೊದೊಂದಿಗೆ ಅಟ್ರಾಸಿಟಿ ಸೇರ್ಪಡೆ

ಚಿತ್ರದುರ್ಗ, ಸೆ.1–ಚಿತ್ರದುರ್ಗ ಮುರುಘಾ ಶರಣರ ವಿರುದ್ಧ ಪೋಕ್ಸೋ ಕಾಯ್ದೆ ಜೊತೆಗೆ ಪರಿಶಿಷ್ಟ ಜಾತಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯನ್ನೂ ಇಂದು ಸೇರ್ಪಡೆ ಮಾಡಲಾಗಿದೆ. ಸಂತ್ರಸ್ತ ಬಾಲಕಿಯರಲ್ಲಿ ಓರ್ವ ಬಾಲಕಿ ಪರಿಶಿಷ್ಟ ಜಾತಿಗೆ ಸೇರಿದವಳಾಗಿರುವುದರಿಂದ ಈ ಕಾಯ್ದೆಯನ್ನೂ ಸೇರ್ಪಡೆಗೊಳಿಸಲಾಗಿದೆ. ಮುರುಘಾ ಶ್ರೀಗಳು ತಮ್ಮ ವಿರುದ್ಧ ಆ.26ರಂದು ದಾಖಲಾಗಿದ್ದ ಪೋಕ್ಸೋ ಆರೋಪದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಈಗಾಗಲೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಆರೋಪಿಗಳು

ಎ1 ಡಾ.ಶಿವಮೂರ್ತಿ ಮುರುಘಾ ಶರಣರು
ಎ2 ಹಾಸ್ಟೆಲ್ ವಾರ್ಡನ್ ರಶ್ಮಿ
ಎ3 ಮರಿಸ್ವಾಮಿ ಬಸವಾದಿತ್ಯ
ಎ4 ಲೀಡರ್ ಪರಮಶಿವಯ್ಯ
ಎ5 ಲಾಯರ್ ಗಂಗಾಧರಯ್ಯ

ಮುರುಘಾ ಮಠದ ಆಡಳಿತಾಧಿಕಾರಿ ಬಸವರಾಜನ್ ದಂಪತಿಗೆ ಜಾಮೀನು

ಚಿತ್ರದುರ್ಗ, ಸೆ.1–ಚಿತ್ರದುರ್ಗ ಮುರುಘಾ ಮಠದ ಅಧೀನದ ಹಾಸ್ಟೆಲ್ ವಾರ್ಡನ್ ರಶ್ಮಿ ಸಲ್ಲಿಸಿದ್ದ ದೂರು ಸಂಬಂಧ ಮಠದ ಆಡಳಿತಾಧಿಕಾರಿ ಕೆ.ಎಸ್.ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ಅವರಿಗೆ ಚಿತ್ರದುರ್ಗ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರಾದ ಅನಿತಾಕುಮಾರಿ ಜಾಮೀನು ಮಂಜೂರು ಮಾಡಿದ್ದಾರೆ. ಜಾಮೀನು ದೊರೆತ ನಂತರ ಸುದ್ದಿಗಾರರ ಜೊತೆ ▶ 8ನೇ ಪುಟಕ್ಕೆ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಯುವತಿ ಕೊಲೆ

ಜೊತೆಯಲ್ಲಿದ್ದ ಯುವಕ ಪರಾರಿ; ದೇವರಾಜ ಠಾಣೆ ಪೊಲೀಸರಿಂದ ತನಿಖೆ ಆರಂಭ


ಮೈಸೂರು, ಸೆ.1(ಆರ್‌ಕೆ)–ಮೈಸೂರಿನ ಖಾಸಗಿ ಹೋಟೆಲ್‌ನ ಕೊಠಡಿಯಲ್ಲಿ ಯುವತಿ ಹತ್ಯೆ ನಡೆದಿದ್ದು, ಪ್ರಿಯಕರನೇ ಈ ಹತ್ಯೆ ಮಾಡಿರುವ ಸಂಬಂಧ ಆಕೆಯ ಪೋಷಕರು ಪೊಲೀಸರಿಗೆ ದೂರು ನೀಡಿದ್ದಾರೆ.



ಮೈಸೂರು–ಹುಣಸೂರು ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಬೆಳಗ್ಗೆ ಈ ಹತ್ಯೆ ಬೆಳಕಿಗೆ ಬಂದಿದ್ದು, ಯುವತಿಯೊಂದಿಗೆ ಕಳೆದ ಮೂರು ದಿನಗಳಿಂದ ಕೊಠಡಿಯಲ್ಲಿದ್ದ ಆಕೆಯ ಪ್ರಿಯಕರ, ಇಂದು ಬೆಳಗ್ಗೆ 7.30ರ ಸುಮಾರಿನಲ್ಲಿ ಹೋಟೆಲ್‌ನಿಂದ ಹೊರ ಹೋಗಿದ್ದು, ಈಗ ತಲೆಮರೆಸಿಕೊಂಡಿದ್ದಾನೆ. ಮಧ್ಯಾಹ್ನದ ವೇಳೆಗೆ ವಿದ್ಯಾರ್ಥಿನಿ ಕೊಲೆಯಾಗಿರುವ ವಿಚಾರ ಬೆಳಕಿಗೆ ಬಂದಿದ್ದು, ಈಕೆಯನ್ನು ಇಂದು ಬೆಳಗ್ಗೆ ಕೊಲೆ ಮಾಡಲಾಗಿದೆಯೇ? ಅಥವಾ ▶ 2ನೇ ಪುಟಕ್ಕೆ

ಪ್ರೊ. ಬಿ.ಷೇಕ್ ಅಲಿ ಇನ್ನಿಲ್ಲ

ಮೈಸೂರು, ಸೆ.1(ಆರ್‌ಕೆ)–ಗೋವಾ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿ ಪ್ರೊ. ಬಿ.ಷೇಕ್ ಅಲಿ(98) ಅವರು ವಯೋಸಹಜ ಕಾಯಿಲೆಯಿಂದ ಇಂದು ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಹಾಸನ ಜಿಲ್ಲೆಯ ಬೆಳಗೋಡು ಮೂಲದ ಪ್ರೊ.ಷೇಕ್ ಅಲಿ ಅವರು, ಮೈಸೂರಿನ ಸರಸ್ವತಿಪುರಂ 7ನೇ ಮೇನ್, 3ನೇ ಕ್ರಾಸ್‌ನಲ್ಲಿ ವಾಸವಿದ್ದರು. ಪುತ್ರ, ಪುತ್ರಿ, ಸ್ನೇಹಿತರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶವಾಗುವಂತೆ ಸರಸ್ವತಿಪುರಂನ ಮುಸ್ಲಿಂ ವಿದ್ಯಾರ್ಥಿನಿಲಯದಲ್ಲಿ ಕೆಲಕಾಲ ಇರಿಸಿ, ಅಲ್ಲಿಯೇ ಅಂತಿಮ ವಿಧಿ–ವಿಧಾನ, ಪ್ರಾರ್ಥನೆ ನೆರವೇರಿಸಿ, ಸಂಜೆ ಟಿಪ್ಪು ಸರ್ಕಲ್ ಬಳಿಯ ಕೇಂದ್ರ ಕಾರಾಗೃಹದ ಹಿಂಭಾಗದ ಮುಖ್ಯ ಕಬರಸ್ತಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸರಸ್ವತಿಪುರಂನ ಮುಸ್ಲಿಂ ಹಾಸ್ಟೆಲ್ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಪ್ರೊ. ಷೇಕ್ ಅಲಿ ಅವರ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸಭೆ ▶ 8ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ

ಅವೈಜ್ಞಾನಿಕ ಕಾಮಗಾರಿ

- ರಾಮನಗರ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿಗೆ ಇದೇ ಕಾರಣ: ಮಾಜಿ ಸಿಎಂ ಕುಮಾರಸ್ವಾಮಿ ಆರೋಪ
- ನಾಲೆಗಳ ಒತ್ತುವರಿ ತೆರವಿಗೆ ಸಲಹೆ; ಸಂಸದ ಪ್ರತಾಪ್ ಸಿಂಹ ಏನು ದೊಡ್ಡ ಎಂಜಿನಿಯರಾ?



ಬೆಂಗಳೂರು, ಸೆ.1(ಕೆಎಂಶಿ)– ಬೆಂಗಳೂರು ಮತ್ತು ಮೈಸೂರು ನಡುವೆ ನಿರ್ಮಾಣ ಆಗುತ್ತಿರುವ ಎಕ್ಸ್‌ಪ್ರೆಸ್ ಹೈವೇ ಯೋಜನೆಯಲ್ಲಿ ಕೈಗೊಂಡಿರುವ ಅವೈಜ್ಞಾನಿಕ ಕಾಮಗಾರಿಗಳಿಂದಲೇ ರಾಮನಗರ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಅಲ್ಲದೆ, ಎಕ್ಸ್‌ಪ್ರೆಸ್ ಹೈವೇ ಹಾಗೂ ಪ್ರವಾಹದ ಬಗ್ಗೆ ಮನಸ್ಸೋ ಇಚ್ಛೆ ಮಾತನಾಡುತ್ತಿರುವ ಸಂಸದ ಪ್ರತಾಪ್ ಸಿಂಹ ವಿರುದ್ಧ ಅವರು ಮತ್ತೊಮ್ಮೆ ವಾಗ್ದಾಳಿ ನಡೆಸಿದರು. ಚನ್ನಪಟ್ಟಣದಲ್ಲಿ ಇಂದು ಮಳೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ವೇಳೆ ಹೊಂಸನಹಳ್ಳಿ ಗ್ರಾಮದಲ್ಲಿ ಮಾಧ್ಯಮಗಳ ಜತೆ ಅವರು ಮಾತನಾಡಿದರು.



ಮೊದಲು ಒತ್ತುವರಿಯಾದ ನಾಲೆ, ಕಾಲುವೆ ತೆರವು ಮಾಡಲಿ ಎಂಬ ಪ್ರತಾಪ್ ಸಿಂಹ ಟ್ವೀಟ್ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿಗಳು, ಮುಖ್ಯಮಂತ್ರಿ ಅವರು ಕೂಡ ಬೆಂಗಳೂರು ನಗರದ ವಿವಿಧ ಕಡೆ ಭೇಟಿ ನೀಡಿದ್ದಾರೆ. ಅಲ್ಲಿಯೂ ಸಹ ಮನೆಗಳಲ್ಲಿ ನೀರು ನಿಂತಿದೆ. ಯಾಕೆ ಎನ್ನುವುದನ್ನು ಪ್ರತಾಪ್‌ಸಿಂಹ ಅರ್ಥ ಮಾಡಿಕೊಳ್ಳಬೇಕು. ಇದು ಈಗ ಆಗಿರುವ ತೊಂದರೆ ಅಲ್ಲ. ರಾಜಕೀಯ ಸ್ವೇಚ್ಛಾಚಾರದಿಂದ ಆಗಿರುವ ಅನಾಹುತಗಳಿವು. ಈ ಹಿಂದಿನ ಸರ್ಕಾರಗಳಲ್ಲಿ ಆಗಿರುವ ತಪ್ಪು ತೀರ್ಮಾನಗಳಿವು. ಕುಮಾರಸ್ವಾಮಿ ಮಾಡಿರುವ ನಿರ್ಧಾರಗಳಲ್ಲ ಇವು ಎಂದು ವಾಕ್‌ಪ್ರಹಾರ ನಡೆಸಿದರು. ರಸ್ತೆಗಳಲ್ಲಿ ನೀರು ನಿಂತಿದೆಯಲ್ಲ, ▶ 2ನೇ ಪುಟಕ್ಕೆ

ನಾಳೆ ಸರಗೂರಿನ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಸೈನಿಕ ಶಾಲೆ ಉದ್ಘಾಟನೆ

ಮೈಸೂರು,ಸೆ.1(ಪಿಎಂ)–ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ (ಎಸ್‌ವಿವೈಎಂ) ಸರಗೂರಿನ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಅಧೀನದಲ್ಲಿ ಆರಂಭಿಸಿರುವ ಸೈನಿಕ ಶಾಲೆಯ ಉದ್ಘಾಟನೆ ಸೆ.3 (ಶನಿವಾರ)ರಂದು ನಡೆಯಲಿದೆ ಎಂದು ಎಸ್‌ವಿವೈಎಂ ಶಿಕ್ಷಣ ವಿಭಾಗದ ಮುಖ್ಯಸ್ಥ ಎಸ್.ಪ್ರವೀಣ್‌ಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ವಿವೈಎಂ ವತಿಯಿಂದ ಸರಗೂರಿನಲ್ಲಿ 2002ರಿಂದ ಸಿಬಿಎಸ್‌ಸಿ ಪಠ್ಯಕ್ರಮದಡಿ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ ನಡೆಯುತ್ತಿದೆ. ಇದೀಗ ಇದೇ ಶಾಲೆ ಆವರಣದಲ್ಲಿ ಸೈನಿಕ ಶಾಲೆ (ವಿಎಸ್‌ಓಇ ಸೈನಿಕ್ ಸ್ಕೂಲ್) ಆರಂಭಿಸಲಾಗಿದೆ. ಇದಕ್ಕೆ ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಸೈನಿಕ್ ಸ್ಕೂಲ್ ಸೊಸೈಟಿ ಅನುಮೋದನೆ ನೀಡಿದೆ ಎಂದರು.

ನಮ್ಮ ಸೈನಿಕ ಶಾಲೆಯ ಪಠ್ಯಕ್ರಮವು ಸಿಬಿಎಸ್‌ಸಿ ಆಗಿದ್ದು, ಈ ಪಠ್ಯಕ್ರಮದೊಂದಿಗೆ ದೈಹಿಕ ಶಿಕ್ಷಣ ಮತ್ತು ಜೀವನ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ಇರುತ್ತದೆ. ಸಾಮಾನ್ಯವಾಗಿ ಸೈನಿಕ ಶಾಲೆಗಳು ವಸತಿ ಶಾಲೆಗಳಾಗಿವೆ. ಆದರೆ ನಮ್ಮಲ್ಲಿ ವಸತಿ ಸೌಲಭ್ಯ ಇದ್ದರೂ ಅದನ್ನು ಕಡ್ಡಾಯಗೊಳಿಸಿಲ್ಲ. ಬಾಲಕರು ಮತ್ತು ಬಾಲಕಿಯರು ಇಬ್ಬರಿಗೂ ಪ್ರವೇಶ ಇರುತ್ತದೆ. ಇದು ಸಹಶಿಕ್ಷಣ ವ್ಯವಸ್ಥೆಯಡಿ ನಡೆಯಲಿದೆ. ಸದ್ಯ 6ನೇ ತರಗತಿಗೆ ಮಾತ್ರ ಪ್ರವೇಶ ಇರುವ ಹಿನ್ನೆಲೆಯಲ್ಲಿ ಪ್ರತ್ಯೇಕ ಕಟ್ಟಡದ ಅಗತ್ಯತೆ ಇಲ್ಲ. ಹಾಗಾಗಿ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಕಟ್ಟಡದಲ್ಲೇ ಸೈನಿಕ ಶಾಲೆಯೂ ನಡೆಯಲಿದೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

2022–23ನೇ ಸಾಲಿನಲ್ಲಿ 60 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ನಮ್ಮ ಸೈನಿಕ ಶಾಲೆಯಲ್ಲಿ ಅವಕಾಶವಿದೆ. ಈ ಪೈಕಿ ಶೇ.40ರಷ್ಟು (24 ಸೀಟುಗಳು) ಪ್ರವೇಶವು ಅಖಿಲ ಭಾರತ ಕೋಟಾವಾಗಿದೆ. ಈ ಸಂಬಂಧ ಎಐಎಸ್‌ಎಸ್‌ಇ ಆಯ್ಕೆ ಪ್ರಕ್ರಿಯೆ ನಡೆಸುವ ಬೋರ್ಡ್ ಆಗಿದೆ. ಅದರಂತೆ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಹರಿಯಾಣ ರಾಜ್ಯಗಳಿಂದ 11 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಅಲ್ಲದೆ, ಎರಡನೇ ಸುತ್ತಿನ ಕೌನ್ಸಿಲಿಂಗ್ ಪ್ರಗತಿಯಲ್ಲಿದೆ. ಉಳಿದ 36 ಸೀಟುಗಳನ್ನು ನಮ್ಮ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದೆ. ಈ ಕುರಿತಂತೆ ಸೆ.6ರಂದು ಪರೀಕ್ಷೆ ನಡೆಯಲಿದೆ ಎಂದು ವಿವರಿಸಿದರು.

ಪ್ರಸಕ್ತ ಸಾಲಿಗೆ 45 ಸಾವಿರ ರೂ. ಬೋಧನಾ ಶುಲ್ಕ ಹಾಗೂ 36 ಸಾವಿರ ರೂ. ಹಾಸ್ಟೆಲ್ ಶುಲ್ಕ ನಿಗದಿ ಮಾಡಲಾಗಿದೆ. ಸೆ.3ರಂದು ಬೆಳಗ್ಗೆ 10.30ಕ್ಕೆ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಆವರಣದಲ್ಲಿ ಸೈನಿಕ ಶಾಲೆಯ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಹೈದರಾಬಾದಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಮಯಾನಂದ ಜೀ ಅವರ ಸಾನ್ನಿಧ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಉದ್ಘಾಟಿಸಲಿದ್ದಾರೆ ಎಂದರು. ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಜಿ.ಕಣ್ಣನ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಎಸ್‌ವಿವೈಎಂ ಉಪಾಧ್ಯಕ್ಷ ಡಾ.ಸುಧೀರ್ ಬೆಂಗಳೂರು ಅಧ್ಯಕ್ಷತೆ ವಹಿಸಲಿದ್ದಾರೆ. ಎಸ್‌ವಿವೈಎಂ ನಿರ್ದೇಶಕರೂ ಆದ ಏರ್ ಕಮೋಡೋರ್ (ನಿವೃತ್ತ) ಆರ್.ಎನ್.ಜಯಸಿಂಹ ಉಪಸ್ಥಿತರಿರಲಿದ್ದಾರೆ ಎಂದರು. ಏರ್ ಕಮೋಡೋರ್ (ನಿವೃತ್ತ) ಆರ್.ಎನ್.ಜಯಸಿಂಹ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



> “ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯಗಳಿಗೆ ಕೈಗೆಟಕುವ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಪ್ರಾರಂಭವಾಯಿತು. ಪ್ರಸ್ತುತ ಈ ಶಾಲೆಯಲ್ಲಿ 567 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದೀಗ ಇದೇ ಶಾಲೆಯಲ್ಲಿ ಸೈನಿಕ ಶಾಲೆ ಆರಂಭಿಸಲಾಗಿದೆ. ರಾಜ್ಯದ 4ನೇ ಸೈನಿಕ ಶಾಲೆ ಇದಾಗಿದೆ. ಬಿಜಾಪುರ ಮತ್ತು ಕೊಡಗು ಜಿಲ್ಲೆಯಲ್ಲಿ ಸರ್ಕಾರದ ಅಧೀನದಲ್ಲಿ ಸೈನಿಕ ಶಾಲೆಗಳು ಈಗಾಗಲೇ ನಡೆಯುತ್ತಿದ್ದು, ಸೆ.8ರಂದು ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರದ ಅಧೀನದ ಮತ್ತೊಂದು ಸೈನಿಕ ಶಾಲೆ ಉದ್ಘಾಟನೆಗೊಳ್ಳಲಿದೆ. ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಸೈನಿಕ ಶಾಲೆಯು ಮೈಸೂರು ಜಿಲ್ಲೆಯ ಏಕೈಕ ಶಾಲೆಯಾಗಿದ್ದು, ಜೊತೆಗೆ ಎನ್‌ಜಿಓ ವತಿಯಿಂದ ನಡೆಸಲ್ಪಡುವ ರಾಜ್ಯದ ಏಕೈಕ ಸೈನಿಕ ಶಾಲೆ ನಮ್ಮದಾಗಿದೆ.
>
> –ಎಸ್.ಪ್ರವೀಣ್‌ಕುಮಾರ್, ಎಸ್‌ವಿವೈಎಂ ಶಿಕ್ಷಣ ವಿಭಾಗದ ಮುಖ್ಯಸ್ಥ

ಶಾಸಕ ಜಿ.ಟಿ.ದೇವೇಗೌಡರಿಂದ ಡಿ.ಸಾಲುಂಡಿ ಗ್ರಾಮದಲ್ಲಿ ಮಳೆ ಹಾನಿ ಪರಿಶೀಲನೆ

ಹಾನಿಗೀಡಾದ 14 ಮನೆಗಳಿಗೆ ಪರಿಹಾರ ವಿತರಿಸಲು ಅಧಿಕಾರಿಗಳಿಗೆ ಜಿಟಿಡಿ ಸೂಚನೆ

ಮೈಸೂರು,ಸೆ.1(ಆರ್‌ಕೆಬಿ)–ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದಲ್ಲಿ ಹಾನಿಗೀಡಾಗಿರುವ ಮನೆಗಳನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಗುರುವಾರ ಪರಿಶೀಲಿಸಿದರು.

ಗ್ರಾಮದಲ್ಲಿ 14 ಮನೆಗಳಿಗೆ ಹಾನಿಯಾಗಿದ್ದು, ಕೂಡಲೇ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳುವಂತೆ ಅವರು ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಯಿಂದ ಕ್ಷೇತ್ರದಲ್ಲಿ ಕೆರೆಗಳು ಕೋಡಿ ಬಿದ್ದು, ಜಮೀನುಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಹಾನಿಗೀಡಾಗಿರುವ ಬೆಳೆ ಬಗ್ಗೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ನಿಖರ ಮಾಹಿತಿ ಪಡೆದು, ಬೆಳೆ ಪರಿಹಾರ ಕುರಿತಂತೆ ವರದಿ ಸಲ್ಲಿಸಲು ಸೂಚನೆ ನೀಡಿದರು. ಮನೆಗಳಿಗೆ ನೀರು ನುಗ್ಗಿ ಆಗಿರುವ ನಷ್ಟದ ಅಂದಾಜು ಸಿದ್ಧಪಡಿಸಿ, ಪರಿಹಾರ ಕೂಡಲೇ ನೀಡುವಂತೆ ತಿಳಿಸಿದರು.

ಮಳೆಯಿಂದಾಗಿ ಗ್ರಾಮಗಳಲ್ಲಿ ನೀರಿನ ಹಳ್ಳ, ಕಾಲುವೆಗಳು ಮುಚ್ಚಿ ಹೋಗಿವೆ. ಹೀಗಾಗಿ ಕಾಲುವೆ ಮತ್ತು ಹಳ್ಳಗಳಲ್ಲಿ ನೀರು ಸರಾಗವಾಗಿ ಹರಿಯಲು ಕ್ರಮ ವಹಿಸುವಂತೆ ಸೂಚಿಸಿದರು. ಡಿ.ಸಾಲುಂಡಿ ಗ್ರಾಮದಲ್ಲಿ ಹಾನಿಯಾಗಿರುವ ಬಸವನಾಯ್ಕರ ಪತ್ನಿ ಮಹದೇವಮ್ಮ, ಉರಗನಾಯಕರ ಪುತ್ರ ಬಸವಲಿಂಗನಾಯಕ, ಕುಳ್ಳನಾಯಕರ ಪುತ್ರ ಚಿಕ್ಕನಾಯಕ, ಮರಿನಾಯಕರ ಪುತ್ರ ಚಿಕ್ಕನಾಯಕ, ಮಲ್ಲಿಕಾರ್ಜುನರ ಪತ್ನಿ ರೇಣುಕಾ, ಪಿರಶೆಟ್ಟಿ ಪುತ್ರ ಚಿಕ್ಕಶೆಟ್ಟಿ, ದಾಸೇಗೌಡರ ಪುತ್ರ ದೊಡ್ಡೇಗೌಡ, ಶಿವಣ್ಣರ ಪತ್ನಿ ಪಾರ್ವತಿ, ಬಣ್ಣೇಗೌಡರ ಪುತ್ರ ಬಸಪ್ಪ, ಮರಿಬೇಗೌಡರ ಪುತ್ರ ಜವರೇಗೌಡ, ಮರಿಬಸವನಾಯಕರ ಪುತ್ರ ಬಸಪ್ಪ, ಬವಳಿಗೌಡರ ಪುತ್ರ ನಿಂಗೇಗೌಡ, ಚಿಕ್ಕತಮ್ಮನಾಯಕರ ಪುತ್ರ ಶಂಭುಲಿಂಗನಾಯಕ, ಲೇಟ್ ಗೋಪಾಲಯ್ಯನವರ ಪತ್ನಿ ಕಾಳಮ್ಮನವರ ಮನೆಗಳಿಗೆ ಕೂಡಲೇ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಟಿಡಿ ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಕೋಟೆಹುಂಡಿ ಮಹದೇವು, ತಾಲೂಕು ಪಂಚಾಯಿತಿ ಇ.ಓ ಗಿರೀಶ್, ಉಪತಹಶೀಲ್ದಾರ್ ಮಂಜು, ಎಇಇ ಮಮತಾ, ಆರ್‌ಐ ಲೋಹಿತ್ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಡಿ.ಸಾಲುಂಡಿ ಗ್ರಾಮದಲ್ಲಿ ಮಳೆಯಿಂದ ಹಾನಿಗೀಡಾದ ಮನೆಗಳನ್ನು ಶಾಸಕ ಜಿ.ಟಿ.ದೇವೇಗೌಡ ಪರಿಶೀಲನೆ ನಡೆಸಿದರು.

ಗೌರಿ ಹಬ್ಬಕ್ಕೆ ಮಾವಿನ ಎಲೆ ತರಲು ಹೋದ ಗೃಹಿಣಿಯ ಸರ ಕಳವು

ಮೈಸೂರು,ಸೆ.1–ಗೌರಿ ಹಬ್ಬಕ್ಕೆ ಮಾವಿನ ಎಲೆ ತರಲು ಹೋದ ಗೃಹಿಣಿಯ ಮಾಂಗಲ್ಯ ಸರ ಕಳವು ಮಾಡಲಾಗಿದೆ. ಕುವೆಂಪುನಗರ ನಿವಾಸಿ ಹೆಚ್.ಎಂ. ಮಂಜುಳ ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ಇವರು ಆ.29 ರಂದು ರಾತ್ರಿ 10.15ರ ಸುಮಾರಿನಲ್ಲಿ ಕುವೆಂಪುನಗರ ಕಾಂಪ್ಲೆಕ್ಸ್ ಬಳಿಯಿಂದ ಮಾವಿನ ಎಲೆ ತೆಗೆದುಕೊಂಡು ಹೋಗುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಖದೀಮರು ಇವರ 90 ಸಾವಿರ ರೂ. ಮೌಲ್ಯದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಚಿವ ವಿ.ಸೋಮಣ್ಣ ವಿರುದ್ಧ ಮಾಜಿ ಸಿಎಂ ಸಿದ್ದರಾಮಯ್ಯ ಟೀಕಾಪ್ರಹಾರ

ವೀರಶೈವ–ಲಿಂಗಾಯತ ಮುಖಂಡರ ಖಂಡನೆ

ಮೈಸೂರು,ಸೆ.1(ಪಿಎಂ)–ವಸತಿ ಸಚಿವ ವಿ.ಸೋಮಣ್ಣ ಬಗ್ಗೆ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಹಗುರವಾಗಿ ಮಾತನಾಡಿದ್ದಾರೆ ಎಂದು ದೂರಿರುವ ವೀರಶೈವ–ಲಿಂಗಾಯತ ಸಮುದಾಯದ ಮುಖಂಡರು, ಸಿದ್ದರಾಮಯ್ಯನವರ ಧೋರಣೆ ಇದೇ ರೀತಿ ಮುಂದುವರೆದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೈಮುಲ್ ನಿರ್ದೇಶಕ ಓಂಪ್ರಕಾಶ್, ನಮ್ಮ ಸಮುದಾಯದ ಹಿರಿಯ ನಾಯಕರೂ ಆದ ಸಚಿವ ವಿ.ಸೋಮಣ್ಣ ಅವರ ವಿರುದ್ಧ ಅತ್ಯಂತ ಕೀಳು ಮಟ್ಟದ ಭಾಷೆ ಬಳಸಿ ಏಕವಚನದಲ್ಲಿ ಸಿದ್ದರಾಮಯ್ಯ ಮಾತನಾಡಿದ್ದಾರೆ. ಇದು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ ಎಂದು ಕಿಡಿಕಾರಿದರು.

ಕಳೆದ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಗ್ಗೆ ಏಕವಚನದಲ್ಲಿ ಮಾತನಾಡುತ್ತಿದ್ದ ಸಿದ್ದರಾಮಯ್ಯ ಅವರಿಗೆ ವೀರಶೈವ–ಲಿಂಗಾಯತ ಸಮುದಾಯದ ಮತದಾರರು ತಕ್ಕಪಾಠ ಕಲಿಸಿದ್ದಾರೆ. ವೀರಶೈವ–ಲಿಂಗಾಯತ ಸಮುದಾಯ ಕಾಂಗ್ರೆಸ್ ಪಕ್ಷದಿಂದ ದೂರು ಸರಿಯುತ್ತಿದ್ದು, ಇದಕ್ಕೆ ಸಿದ್ದರಾಮಯ್ಯನವರ ಇಂತಹ ವರ್ತನೆಯೇ ಕಾರಣ ಎಂದು ದೂರಿದರು.

ರಾಜಕೀಯವಾಗಿ ಪುನರ್ಜನ್ಮ ನೀಡಿದ ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯಲ್ಲಿ ವಿ.ಸೋಮಣ್ಣ ಬಂದು ಚುನಾವಣಾ ಪ್ರಚಾರ ಮಾಡದಿದ್ದರೆ ಅಂದೇ ಸಿದ್ದರಾಮಯ್ಯನವರ ರಾಜಕೀಯ ಭವಿಷ್ಯ ಮುಗಿದು ಹೋಗುತ್ತಿತ್ತು. ಇನ್ನಾದರೂ ಸಿದ್ದರಾಮಯ್ಯನವರು ವಿ.ಸೋಮಣ್ಣನವರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ, ಮಲೆ ಮಹದೇಶ್ವರ ಬೆಟ್ಟದ ಧರ್ಮದರ್ಶಿ ಮಂಡಳಿ ಮಾಜಿ ಅಧ್ಯಕ್ಷ ಆಲನಹಳ್ಳಿ ಮಹದೇವಸ್ವಾಮಿ, ನಗರ ಬಿಜೆಪಿ ಕಾರ್ಯದರ್ಶಿ ಎಸ್.ಎಂ.ಶಿವಪ್ರಕಾಶ್, ಖಜಾಂಚಿ ಖಂಡೇಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಲಾವೃತ ಸಂಗಪ್ಪನದೊಡ್ಡಿಗೆ ಸಂಸದ ಪ್ರತಾಪ್‌ಸಿಂಹ ಭೇಟಿ; ಸ್ಥಳ ಪರಿಶೀಲನೆ

ಮಾಹಿತಿ ನೀಡಿದರೆ ಸರಿಪಡಿಸಿಕೊಡುವ ಭರವಸೆ

ಮೈಸೂರು, ಸೆ.1(ಆರ್‌ಕೆಬಿ)– ರಾಮನಗರದ ರಾಮದೇವರಬೆಟ್ಟದ ಕಡೆಯಿಂದ ಹರಿದು ಬಂದ ನೀರಿನಿಂದಾಗಿ ಜಲಾವೃತವಾಗಿದ್ದ ಸಂಗಬಸಪ್ಪನದೊಡ್ಡಿಗೆ ಸಂಸದ ಪ್ರತಾಪ್‌ಸಿಂಹ ಗುರುವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು.



ಯೋಜನಾ ನಿರ್ದೇಶಕ ಶ್ರೀಧರ್, ಡಿಬಿಎಲ್ ಯೋಜನಾ ವ್ಯವಸ್ಥಾಪಕ ಗೋವಿಂದ್, ಸಾಜಿ ರತ್ನಾಕರ್ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಆಗಮಿಸಿರುವ 'ಡ್ರೈನ್ ಎಕ್ಸ್‌ಪರ್ಟ್'ಗಳು ಹಾಗೂ ಇನ್ನಿತರೆ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಮಳೆ ನೀರಿನಿಂದ ಉಂಟಾಗಿರುವ ಸಮಸ್ಯೆಗಳನ್ನು ಸರಿಪಡಿಸುವ ಕಾರ್ಯದಲ್ಲಿ ನಿರತರಾದರು. ಈ ಭಾಗದಲ್ಲಿ ಎಲ್ಲಿ ನೀರು ನಿಲುಗಡೆಯಾಗುತ್ತಿದೆ ಎಂದು ಸ್ಥಳ ತೋರಿಸಿದರೆ ಅಲ್ಲಿ ತಕ್ಷಣವೇ ಸರಿಪಡಿಸಲಾಗುವುದು ಎಂದು ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರಾಗಿ ಸಂಜಯ್ ಕೆ.ಶೆಟ್ಟಿ ಆಯ್ಕೆ

ಮೈಸೂರು, ಸೆ.1–ಮೈಸೂರು ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ (ಮೈಸೂರು ಸ್ಪೋರ್ಟ್ಸ್ ಕ್ಲಬ್)ನ 2022–23ನೇ ಸಾಲಿನ ಅಧ್ಯಕ್ಷರಾಗಿ ಸಂಜಯ್ ಕೆ.ಶೆಟ್ಟಿ ಆಯ್ಕೆಯಾಗಿದ್ದಾರೆ.




ಸಂಜಯ್ ಕೆ.ಶೆಟ್ಟಿ ಎಂ.ಸಿ.ಮಲ್ಲಿಕಾರ್ಜುನ್ ಅಶಿನ್ ಪಾಳೇಗಾರ್

ಸಂಜಯ್ ಕೆ.ಶೆಟ್ಟಿ 281, ಮತಗಳನ್ನು ಪಡೆದರೆ, ಅವರ ಪ್ರತಿಸ್ಪರ್ಧಿ ವೈ.ಪಿ.ಉದಯ್‌ಶಂಕರ್ 264 ಮತಗಳನ್ನು ಪಡೆದರು. ಉಪಾಧ್ಯಕ್ಷರಾಗಿ ಎಂ.ಸಿ.ಮಲ್ಲಿಕಾರ್ಜುನ್(331) ಆಯ್ಕೆಯಾಗಿದ್ದು, ಅವರ ಪ್ರತಿಸ್ಪರ್ಧಿ ವಿ.ಸುನೀಲ್ 214 ಮತಗಳನ್ನು ಪಡೆದರು. ಗೌರವ ಕಾರ್ಯದರ್ಶಿಯಾಗಿ ಅಶ್ವಿನ್ ಆರ್.ಪಾಳೇಗಾರ್(294) ಆಯ್ಕೆಯಾದರೆ, ಅವರ ಪ್ರತಿಸ್ಪರ್ಧಿ ಟಿ.ಹೆಚ್.ಸಂಜಯ್ ಅರಸ್ 251 ಮತಗಳನ್ನು ಪಡೆದರು. ಸಮಿತಿ ಸದಸ್ಯರಾಗಿ ಕ್ಯಾಪ್ಟನ್ ಜಗದೀಶ್ ರಾಮನ್(518), ಡಾ.ಎಂ.ಜಿ.ಸತೀಶ್‌ಕುಮಾರ್ (517), ಬಿ.ಎನ್.ಸುಧೀಂದರ್ (504), ಎಂ.ಡಿ.ಚಂದ್ರಶೇಖರ್ (499), ಹಮೀರ್ ಸಿಂಜಿ ರಾಣ (478), ವಿ.ಎಂ. ಬ್ರಿಜೇಶ್ ಅರಸ್ (463), ಎ.ಎಸ್.ಬಾಲು (427) ಆಯ್ಕೆಯಾಗಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಾರ್ಯಾಗಾರ

ಮೈಸೂರು,ಸೆ.1–ಕರಾಮುವಿಯಿಂದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. ಆಸಕ್ತರು ಸೆ.6ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2515944 ಅನ್ನು ಸಂಪರ್ಕಿಸಬಹುದು.

ವಿ.ಆರ್.ತಂಗವೇಲ್ ಮುದಲಿಯಾರ್ ನಿಧನ



ಮೈಸೂರು: ನಿವೃತ್ತ ರೈಲ್ವೆ ಅಧಿಕಾರಿ ಹಾಗೂ ಕುವೆಂಪುನಗರದ ಸಿಐಟಿಬಿ ಬಡಾವಣೆಯ 2ನೇ ಹಂತದ (ವಿವೇಕಾನಂದ ಸರ್ಕಲ್ ಬಳಿ) ನಿವಾಸಿ ವಿ.ಆರ್.ತಂಗವೇಲ್ ಮುದಲಿಯಾರ್ ಅವರು (90) ಆಗಸ್ಟ್ 28ರಂದು ನಿಧನರಾದರು. ಇವರು ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ವರ್ಗ, ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಆ.29 ರಂದು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು.

ಒಂದನೇ ಪುಟದಿಂದ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಯುವತಿ ಕೊಲೆ

ನಿನ್ನೆಯೇ ಕೊಲೆ ನಡೆದಿದೆಯೇ? ಎಂಬುದು ತನಿಖೆ ನಂತರ ತಿಳಿಯಬೇಕಾಗಿದೆ. ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕು, ರಾವಂದೂರು ಹೋಬಳಿ, ಹರಳಹಳ್ಳಿ ಗ್ರಾಮದ ರವಿ ಎಂಬುವರ ಪುತ್ರಿ ಅಪೂರ್ವ ಶೆಟ್ಟಿ(21) ಪ್ರಿಯಕರನಿಂದಲೇ ಹತ್ಯೆಗೀಡಾದವಳಾಗಿದ್ದು, ಆಕೆಯನ್ನು ಪ್ರಿಯಕರ ಆಶಿಕ್(26) ಹತ್ಯೆ ಮಾಡಿದ್ದಾನೆ ಎಂದು ಪೊಲೀಸರಲ್ಲಿ ದೂರು ದಾಖಲಾಗಿದೆ. ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಖಾಸಗಿ ಕಾಲೇಜಿನಲ್ಲಿ ಅಂತಿಮ ವರ್ಷದ ಇಂಜಿನಿಯರ್ ಪದವಿ ಓದುತ್ತಿದ್ದ ವಿದ್ಯಾರ್ಥಿನಿ ಅಪೂರ್ವ ಶೆಟ್ಟಿ, ಆಗಸ್ಟ್ 29ರಂದು ರಾತ್ರಿ ಪ್ರಿಯಕರ ಆಶಿಕ್ ಜೊತೆ ವಿನೋಬ ರಸ್ತೆಯಲ್ಲಿರುವ ಹೋಟೆಲ್‌ವೊಂದರ 2ನೇ ಮಹಡಿಯ ಕೊಠಡಿಯಲ್ಲಿ ವಾಸ್ತವ್ಯ ಹೂಡಿದ್ದರು. ಕೊಠಡಿ ಪಡೆಯುವಾಗ ಆಶಿಕ್, ಹಿನಕಲ್ ಗ್ರಾಮ ಎಂದು ವಿಳಾಸ ನೀಡಿದ್ದಾನೆ. ಇಂದು ಬೆಳಗ್ಗೆ 7.30 ಗಂಟೆ ವೇಳೆಗೆ ಒಬ್ಬನೇ ಹೊರಗೆ ಹೋಗಿದ್ದ ಎಂದು ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕಳೆದ ಮೂರು ದಿನದಿಂದಲೂ ಈ ಪ್ರೇಮಿಗಳು ಹೋಟೆಲ್‌ನಲ್ಲೇ ವಾಸ್ತವ್ಯವಿದ್ದು, ಕೆಲ ಸಮಯ ಆಶಿಕ್ ಮಾತ್ರ ಹೊರ ಹೋಗಿ ಬರುತ್ತಿದ್ದ. ಅದೇ ರೀತಿ ಇಂದು ಬೆಳಗ್ಗೆ 7.30ರ ಸುಮಾರಿನಲ್ಲಿ ಆಶಿಕ್ ಒಬ್ಬನೇ ಹೋಟೆಲ್‌ನಿಂದ ಹೊರ ಹೋಗಿದ್ದನ್ನು ಸಿಬ್ಬಂದಿ ಗಮನಿಸಿದ್ದಾರೆ. ಮಧ್ಯಾಹ್ನವಾದರೂ ಆತ ವಾಪಸ್ ಬಂದಿಲ್ಲ. ಕೊಠಡಿಯಲ್ಲಿ ವಿದ್ಯಾರ್ಥಿನಿಯೊಬ್ಬಳೇ ಇದ್ದಾಳೆ ಎಂಬುದನ್ನು ಅರಿತಿದ್ದ ಸಿಬ್ಬಂದಿ, ಬೆಳಗ್ಗೆ ಉಪಹಾರಕ್ಕಾಗಲೀ, ಮಧ್ಯಾಹ್ನ ಊಟಕ್ಕಾಗಲೀ ಆಕೆ ಹೊರ ಬಂದಿಲ್ಲ. ಅಲ್ಲದೇ ಪಾರ್ಸಲ್ ತರಿಸಿಕೊಂಡು ಕೂಡ ಆಹಾರ ಸೇವಿಸಿಲ್ಲ. ಹೀಗಾಗಿ ಸಿಬ್ಬಂದಿಯು ಇಂಟರ್ ಕಾಂ ಮೂಲಕ ಆಕೆಯನ್ನು ಸಂಪರ್ಕಿಸಲು ಯತ್ನಿಸಿದಾಗ ಪ್ರತಿಕ್ರಿಯೆ ಬರಲಿಲ್ಲ ಎನ್ನಲಾಗಿದ್ದು, ಇದರಿಂದ ಸಂಶಯಗೊಂಡು ಸೂಕ್ಷ್ಮವಾಗಿ ಹೊರಗಿನಿಂದ ಕೊಠಡಿಯನ್ನು ಪರಿಶೀಲನೆ ಮಾಡಿದಾಗ ಆಕೆ ಮೃತಪಟ್ಟಿರುವುದು ಕಂಡು ಬಂದಿದೆ. ತಕ್ಷಣವೇ ಹೋಟೆಲ್‌ನ ವ್ಯವಸ್ಥಾಪಕರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಧಾವಿಸಿದ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ ಹಾಗೂ ಸಿಬ್ಬಂದಿ ಕೊಠಡಿಯ ಬಾಗಿಲು ತೆರೆಸಿ ನೋಡಿದಾಗ ವಿದ್ಯಾರ್ಥಿನಿ ಮೂಗಿನಲ್ಲಿ ರಕ್ತ ಹಾಗೂ ಬಾಯಿಯಲ್ಲಿ ನೊರೆ ಬಂದ ಕುರುಹುಗಳು ಕಂಡು ಬಂದಿವೆ. ಈಕೆ ಜೊತೆಗಿದ್ದ ಆಶಿಕ್ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ಆತನೇ ಅಪೂರ್ವ ಶೆಟ್ಟಿಯನ್ನು ಹತ್ಯೆ ಮಾಡಿ ಪರಾರಿಯಾಗಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಪಿರಿಯಾಪಟ್ಟಣ ತಾಲೂಕಿನ ಯುವತಿ ಅಪೂರ್ವ ಶೆಟ್ಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಅನುಕೂಲವಾಗಲಿ ಎಂಬ ನಿಟ್ಟಿನಲ್ಲಿ ಮೈಸೂರಿನ ವಿಜಯನಗರದ ಪಿಜಿಯೊಂದರಲ್ಲಿ ವಾಸ್ತವ್ಯ ಹೂಡಿದ್ದಳು ಎನ್ನಲಾಗಿದೆ. ಈಕೆ ಆಶಿಕ್‌ನನ್ನು ಪ್ರೀತಿಸುತ್ತಿರುವುದು ಪೋಷಕರಿಗೆ ಗೊತ್ತಾಗಿ ಒಮ್ಮೆ ಈ ಸಂಬಂಧ ಗಲಾಟೆಯೂ ಆಗಿತ್ತು. ಅಲ್ಲದೇ ವಿದ್ಯಾರ್ಥಿನಿಯ ಪೋಷಕರು ತಮ್ಮ ಮಗಳು ಮತ್ತು ಆಶಿಕ್‌ಗೆ ಎಚ್ಚರಿಕೆಯನ್ನೂ ನೀಡಿದ್ದರು ಎಂದು ಹೇಳಲಾಗಿದೆ. ಆದರೂ ಇವರಿಬ್ಬರ ಒಡನಾಟ ಮುಂದುವರೆದಿತ್ತು. ಇದೀಗ ವಿದ್ಯಾರ್ಥಿನಿ ಹತ್ಯೆ ನಡೆದಿದ್ದು ಯಾವ ಕಾರಣಕ್ಕಾಗಿ ಹತ್ಯೆ ಮಾಡಲಾಗಿದೆ ಎಂಬುದು ಆಶಿಕ್ ಬಂಧನದ ನಂತರ ತಿಳಿಯಬೇಕಾಗಿದೆ.

ಅವೈಜ್ಞಾನಿಕ ಕಾಮಗಾರಿ

ಅದಕ್ಕೆ ಕಾರಣ ಯಾರು? ಅಕ್ರಮವಾಗಿ ನಿರ್ಮಾಣ ಆಗಿರುವುದನ್ನು ನಾವು ತೆರವು ಮಾಡಿ ಸುತ್ತೇವೆ. ಅದು ಒಂದು ಭಾಗ. ಆದರೆ, ಎಕ್ಸ್‌ಪ್ರೆಸ್ ಹೈವೇ ಕಾಮಗಾರಿ ಪ್ರಾರಂಭ ಆದ ಮೇಲೆ ಈ ಸಮಸ್ಯೆ ಸೃಷ್ಟಿಯಾಗಿದೆ. ಪ್ರತಾಪ್ ಸಿಂಹ ಏನು ದೊಡ್ಡ ಎಂಜಿನಿಯರ್ ಏನ್ರೀ? ಎಂದು ಅವರು ಖಾರವಾಗಿ ಪ್ರತಿಕ್ರಿಯಿಸಿದರು.

ಅದೆಲ್ಲೋ ಬರವಣಿಗೆ ಮಾಡಿಕೊಂಡು ಇದ್ದ ವ್ಯಕ್ತಿ ಪ್ರತಾಪ್ ಸಿಂಹ ಈಗ ನರೇಂದ್ರ ಮೋದಿ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅವರಿಂದ ನಾನು ಕಲಿಯಬೇಕಾ? ಅವರು ಸುಖಾಸುಮ್ಮನೆ ನನ್ನನ್ನು ಕೆರಳಿಸುವುದು ಬೇಡ. ಹೆದ್ದಾರಿಯಲ್ಲಿ ನೀರು ನಿಂತದ್ದು ಒತ್ತುವರಿಯಿಂದನಾ? ಅದು ಆಗಿರುವುದು ಕಳಪೆ ಕಾಮಗಾರಿಯಿಂದ ಎಂದು ಮಾಜಿ ಮುಖ್ಯಮಂತ್ರಿಗಳು ಕಿಡಿಕಾರಿದರು. ಎಕ್ಸ್‌ಪ್ರೆಸ್ ಹೈವೇ ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿದೆ. ಅದು ಯಾಕೆ ನಿಂತಿದೆ ಎನ್ನುವುದನ್ನು ಎಷ್ಟು ಸಲ ಹೇಳಲಿ. ಸಂಸದ ಪ್ರತಾಪ್ ಸಿಂಹ ಎಷ್ಟು ಕಡೆ ಹೋಗಿದ್ದಾರೆ. ಫೋಟೋ ತೆಗೆಸಿಕೊಳ್ಳಲು ಬಂದಿದ್ದರಲ್ಲ ಈಗ ಎಷ್ಟು ಕಡೆ ಬಂದಿದ್ದಾರೆ? ಇವರ ಹತ್ತಿರ ನಾನು ರಾಜಕೀಯ ಕಲಿಯಬೇಕಿಲ್ಲ. ಜನರ ಬದುಕೇನು ಎಂದು ಈತನಿಂದ ಕಲಿಯಬೇಕಿಲ್ಲ. ಜನರ ಕಷ್ಟ–ಸುಖ ನೋಡಿ ರಾಜಕೀಯ ಮಾಡಿದ್ದರೆ ವಸ್ತುಸ್ಥಿತಿ ಏನೆಂದು ಗೊತ್ತಾಗುತ್ತಿತ್ತು. ಕೇವಲ ಬಿಜೆಪಿ, ಮೋದಿ ಹೆಸರಿನಲ್ಲಿ ರಾಜಕೀಯ ಮಾಡಿ ಎಂಪಿ ಆಗಿದ್ದಾರೆ. ಕಷ್ಟಪಟ್ಟು ಎಂಪಿ ಸ್ಥಾನ ಪಡೆದಿಲ್ಲ ಎಂದು ಅವರು ಪ್ರತಾಪ್ ಸಿಂಹ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾಳೆ ಉದ್ಯೋಗ ಮೇಳ

ಮೈಸೂರು, ಸೆ.1(ಪಿಎಂ)–ಸೇವಾ ಚಿಲುಮೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸೆ.3 ರಂದು ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೇಂದ್ರನಗರ (ಕೆಸರೆ) ಮುಖ್ಯ ರಸ್ತೆಯಲ್ಲಿರುವ ಕೆಪಿಟಿಸಿಎಲ್ ಸಮುದಾಯ ಭವನದಲ್ಲಿ ಅಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ. ವಿವಿಧ ಕ್ಷೇತ್ರಗಳ 45 ಕಂಪನಿಗಳು ಮೇಳದಲ್ಲಿ ಪಾಲ್ಗೊಳ್ಳುತ್ತಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಐಟಿಐ–ಡಿಪ್ಲೋಮಾ ಸೇರಿದಂತೆ ಇನ್ನಿತರ ವಿದ್ಯಾರ್ಹತೆ ಹೊಂದಿರುವವರು ಮೇಳದಲ್ಲಿ ಪಾಲ್ಗೊಳ್ಳಬಹುದು. ಉದ್ಯೋಗಾಂಕ್ಷಿಗಳು ಸ್ಥಳದಲ್ಲೇ ನೋಂದಣಿ ಮಾಡಿಕೊಂಡು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ನೋಂದಣಿ ಉಚಿತ ಎಂದರು. ಟ್ರಸ್ಟ್‌ನ ಸದಸ್ಯ ರೋಹಿತ್ ಸುದ್ದಿಗೋಷ್ಠಿಯಲ್ಲಿದ್ದರು.

ಶೀಘ್ರವೇ ನಾಡಪ್ರಭು ಕೆಂಪೇಗೌಡರ 108 ಅಡಿ ಪ್ರತಿಮೆ ಅನಾವರಣ

ಥೀಮ್ ಪಾರ್ಕ್ ಮುಖ್ಯಮಂತ್ರಿ ಬೊಮ್ಮಾಯಿ ಶಂಕುಸ್ಥಾಪನೆ

ಪೂರ್ವಭಾವಿಯಾಗಿ ರಾಜ್ಯಾದ್ಯಂತ ಪವಿತ್ರ ಮೃತ್ತಿಕೆ, ಜಲ ಸಂಗ್ರಹ ಅಭಿಯಾನಕ್ಕೂ ಚಾಲನೆ

ಬೆಂಗಳೂರು, ಸೆ.1(ಕೆಎಂಶಿ)– ಒಂದೆರಡು ತಿಂಗಳಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಯ ಉದ್ಘಾಟನೆಗೆ ಪೂರ್ವಭಾವಿಯಾಗಿ ರಾಜ್ಯಾದ್ಯಂತದಿಂದ ಪವಿತ್ರ ಮೃತ್ತಿಕೆ (ಮಣ್ಣು) ಮತ್ತು ಜಲವನ್ನು ಸಂಗ್ರಹಿಸುವ ವಿಶಿಷ್ಟ ಅಭಿಯಾನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಚಾಲನೆ ನೀಡಿದರು.

ಇದರ ಅಂಗವಾಗಿ ವಿಮಾನ ನಿಲ್ದಾಣದ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ನಾಡಪ್ರಭು ಕೆಂಪೇಗೌಡ ಥೀಮ್ ಪಾರ್ಕ್ ನಿರ್ಮಾಣಕ್ಕೂ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಮಾತನಾಡಿ, 'ಇತಿಹಾಸ ಅರಿಯದವರು ಇತಿಹಾಸ ಸೃಷ್ಟಿಸಲಾರರು. ರಾಜ್ಯ ಸರಕಾರವು ವಿಧಾನ ಸೌಧದ ಆವರಣದಲ್ಲೂ 50 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪಿಸಲಾಗುತ್ತಿದೆ. ಜೊತೆಗೆ ಲಾಲ್ ಬಾಗ್ ಆವರಣದಲ್ಲೂ ನಾಡಪ್ರಭುವಿನ ಪ್ರತಿಮೆ ಸ್ಥಾಪನೆಯಾಗಲಿದೆ ಎಂದು ಘೋಷಿಸಿದರು.




ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆ ಮತ್ತು ಥೀಮ್ ಪಾರ್ಕ್ ಸ್ಥಾಪನೆಗೆ ಸರಕಾರವು 84 ಕೋಟಿ ರೂ. ವಿನಿಯೋಗಿಸುತ್ತಿದೆ. ಈ ಪ್ರತಿಮೆಗೆ ಕೆಂಪೇಗೌಡರ ಆಶಯಗಳನ್ನು ಸಂಕೇತಿಸುವಂತೆ 'ಪ್ರಗತಿ ಪ್ರತಿಮೆ' (Statue of Prosperity) ಎಂದು ನಾಮಕರಣ ಮಾಡಲಾಗುತ್ತಿದೆ ಎಂದು ನುಡಿದರು.

ಅಭಿಯಾನವು ರಾಜ್ಯದ ಎಲ್ಲರನ್ನೂ ಒಳಗೊಳ್ಳಲಿದ್ದು, ನವ ಕರ್ನಾಟಕ ನಿರ್ಮಾಣದ ದೊಡ್ಡ ಹೆಜ್ಜೆಯಾಗಿದೆ. ಇದು ಸರಕಾರದ ಸಮಗ್ರ ಅಭಿವೃದ್ಧಿ ಸಂಕಲ್ಪದ ಸಂಕೇತವಾಗಿದೆ ಎಂದು ಅವರು ಬಣ್ಣಿಸಿದರು.

ಸಚಿವ ಮತ್ತು ನಾಡಪ್ರಭು ಕೆಂಪೇಗೌಡ ಪಾರಂಪರಿಕ ಅಭಿವೃದ್ಧಿ ತಾಣಗಳ ಪ್ರಾಧಿಕಾರದ ಉಪಾಧ್ಯಕ್ಷ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ಬೆಂಗಳೂರಿನ ಇಂದಿನ ಕೀರ್ತಿಗೆ ಈ ನಗರಕ್ಕೆ ಬುನಾದಿ ಹಾಕಿದ ಕೆಂಪೇಗೌಡರೇ ಕಾರಣ. ಅವರ ಪ್ರತಿಮೆ ಉದ್ಘಾಟನೆಗೆ ಪೂರ್ವಭಾವಿಯಾಗಿ ಇಂದಿನಿಂದ 45 ದಿನಗಳ ಕಾಲ ರಾಜ್ಯ ಮಟ್ಟದ ಅಭಿಯಾನ ನಡೆಯಲಿದೆ. ಇದರ ಅಂಗವಾಗಿ ಎಲ್ಲ ಹಳ್ಳಿಗಳ ವ್ಯಾಪ್ತಿಯ ಕೆರೆಕಟ್ಟೆಗಳು ಮತ್ತು ನದಿಗಳಿಂದ ಪವಿತ್ರವಾದ ಮಣ್ಣು ಮತ್ತು ಜಲ ಸಂಗ್ರಹಿಸಲಾಗುವುದು. ಬಳಿಕ ಪ್ರಧಾನಿ ಮೋದಿ ಪ್ರತಿಮೆ ಲೋಕಾರ್ಪಣೆ ಮಾಡಲಿದ್ದಾರೆ. ಪ್ರಧಾನಿಯವರ ಸಮಯ ನೋಡಿಕೊಂಡು ನವೆಂಬರ್ 1ರಂದು ಅನಾವರಣ ಮಾಡುವ ಉದ್ದೇಶ ಇದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.09.2022 ಶುಕ್ರವಾರ, ಮಳೆ ನಕ್ಷತ್ರ : ಪುಬ್ಬ, 31.08.2022 ರಿಂದ 13.09.2022

ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ

ತಿಥಿ: ಷಷ್ಠೀ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಮೈಸೂರು ಗಣೇಶ ಉತ್ಸವ ಸಮಿತಿ:** ಗಣೇಶ ಉತ್ಸವ, ಸಂಜೆ 5.30ರಿಂದ ಮೈಸೂರಿನ ಕಲಾ ತಂಡಗಳಿಂದ ಸಂಗೀತ ಮತ್ತು ನೃತ್ಯ, ಸಂಜೆ 7ರಿಂದ ವಿಲಾಸ್ ನಾಯಕ್ ಅವರಿಂದ ಲೈವ್ ಚಿತ್ರಕಲೆ, ಸಂಜೆ 8ರಿಂದ ಕಳರಿ ಗುರು ಕೃಷ್ಣ ಪ್ರತಾಪ್, ಬಳಗದಿಂದ ಕಳರಿಪಯಟ್ಟು, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ವಿದ್ವಾನ್ ಗಣೇಶ ಉಡುಪ, ಜಿ.ದಕ್ಷಿಣಾಮೂರ್ತಿ ಅವರಿಂದ ಕಾವ್ಯವಾಚನ, ಸಂಜೆ 6.45ರಿಂದ ಅಕ್ಕರೈ ಸಹೋದರಿಯರಿಂದ ದ್ವಂದ್ವ ಗಾಯನ, ವಿದ್ವಾನ್ ವಿಠ್ಠಲರಂಗನ್–ವಯೋಲಿನ್, ವಿದ್ವಾನ್ ಕೆ.ಯು.ಜಯಚಂದ್ರರಾವ್–ಮೃದಂಗ, ವಿದ್ವಾನ್ ವಾಳ್ಳೆಪಲ್ಲಿ ಕೃಷ್ಣಕುಮಾರ್–ಘಟ, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ, ಸಂಜೆ 7ರಿಂದ ಉಮಾಪತಿ ತಂಡದವರಿಂದ ಸುಗಮ ಸಂಗೀತ ಹಾಗೂ ಶಿಷ್ಯ ವೃಂದದವರಿಂದ ಕೀಬೋರ್ಡ್ ವಾದನ, ಸ್ಥಳ: ಗಣಪತಿ ದೇವಸ್ಥಾನ ಟ್ರಸ್ಟ್, ಕೆ.ಆರ್. ಮೊಹಲ್ಲಾ, ತ್ಯಾಗರಾಜ ವೃತ್ತ.

■ **ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ :** ಕೃಷಿ ಯಶಸ್ವಿನಿ ಕಾರ್ಡ್ ಬಿಡುಗಡೆ ಮತ್ತು ಕೃಷಿ ಸಾಧಕ ರೈತ ಮಹಿಳೆಯರಿಗೆ ಸನ್ಮಾನ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 11ಕ್ಕೆ.

■ **ನಕ್ಷತ್ರ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ :** ಬೀಜಿಯವರ 'ದೇವರ ಆತ್ಮಹತ್ಯೆ' ನಾಟಕ ಪ್ರದರ್ಶನ, ನಿರ್ದೇಶನ : ರಮೇಶ್ ಕೆ. ಬೆಣಕಲ್, ಉಪಸ್ಥಿತರು : ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್, ಚಲನಚಿತ್ರ ನಿರ್ಮಾಪಕ ಲಯನ್ ಡಾ. ಎಸ್. ವೆಂಕಟೇಶ್, ಜಿಆರ್‌ಎಎಂ ಕಾರ್ಯನಿರ್ವಾಹಕ ನಿರ್ದೇಶಕ ಬಸವರಾಜು ಆರ್. ಶ್ರೇಷ್ಠ, ರಂಗಕರ್ಮಿ ಜೀವನ್‌ಕುಮಾರ್ ಹೆಗ್ಗೋಡು, ನಕ್ಷತ್ರ ಮಹಿಳಾ ಘಟಕದ ಅಧ್ಯಕ್ಷೆ ಎಂ.ಎಂ. ರೇಖಾ, ನಕ್ಷತ್ರ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಸತೀಶ್ ಪೊನ್ನಾಚಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 10.00ಡಾ.ಎಸ್. ವಿಜಯರಾಘವನ್ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ, ಜೀವನ್ಮುಖಿ, ಪ್ರಸ್ತುತಿ–ಕೆ.ಬಿ. ಮೀನಾ, 4.30ವೃತ್ತಿ ಮಾರ್ಗದರ್ಶನ– ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಇಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿ.ರವಿಕುಮಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, 9.00 ವಿಜ್ಞಾನ ಭಾರತಿ–ಬಾಹ್ಯಾಕಾಶದಲ್ಲಿ ಇತ್ತೀಚೆಗೆ ಸ್ಥಾಪನೆಗೊಂಡ ಜೇಮ್ಸ್ ವೆಬ್ ದೂರದರ್ಶಕ ಕುರಿತು ಡಾ.ಎಸ್.ಎ.ಮೋಹನ ಕೃಷ್ಣ ಅವರೊಂದಿಗೆ ಸಂದರ್ಶನ

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ನಿರ್ವಿಘ್ನವಾಗಿ ನೆರವೇರಿದ ಗಣಪತಿ ಹಬ್ಬ

- ನಾನಾ ನಮೂನೆಯ ಗಣೇಶನ ಆಕರ್ಷಣೆ
- ಎಲ್ಲೆಡೆ ವಿಶೇಷ ಪೂಜೆ; ಪ್ರಸಾದ ವಿನಿಯೋಗ
- ಗಣೇಶನೊಂದಿಗೆ ಪುನೀತ್ ರಾಜ್‌ಕುಮಾರ್



ಅಗ್ರಹಾರದ ನೂರೊಂದು ಗಣಪತಿ ದೇವಾಲಯದಲ್ಲಿ ವಿಶೇಷ ಅಲಂಕಾರ.



ಅರಮನೆಯಲ್ಲಿ ರಾಜಮನೆತನದವರು ಪ್ರತಿಷ್ಠಾಪಿಸಿದ್ದ ಗಣೇಶನನ್ನು ವಿಸರ್ಜನೆ ಮಾಡುತ್ತಿರುವುದು.



ಆರ್‌ಎಸ್‌ಎಸ್ ಕಚೇರಿ ಮಾಧವ ಕೃಪದಲ್ಲಿ ವಿಶೇಷ ಪೂಜೆ.

ಮೈಸೂರು,ಸೆ.1(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ 2 ವರ್ಷದ ನಂತರ ಗಣೇಶ ಹಬ್ಬವನ್ನು ಸಡಗರ–ಸಂಭ್ರಮದಿಂದ ಆಚರಿಸಲಾಯಿತು. ಎಲ್ಲೆಡೆ ನಾನಾ ನಮೂನೆಯ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಘ್ನ ವಿನಾಯಕನ ಆರಾಧನೆ ಮೂಲಕ ಭಕ್ತಿ ಮೆರೆದರು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷದಿಂದ ಸಾರ್ವಜನಿಕ ಸ್ಥಳದಲ್ಲಿ ಗಣೇಶನಮೂರ್ತಿ ಪ್ರತಿಷ್ಠಾಪಿಸಲು ಅವಕಾಶವಿರಲಿಲ್ಲ. ಈ ಬಾರಿ ಗಣೇಶ ಹಬ್ಬ ಆಚರಣೆಗೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರಿನ ಬಹುತೇಕ ಎಲ್ಲಾ ಬಡಾವಣೆಗಳಲ್ಲೂ ಗಣೇಶನಮೂರ್ತಿ ಪ್ರತಿಷ್ಠಾಪಿಸಿ, ಹಬ್ಬ ಆಚರಿಸಲಾಯಿತು.

ದೇವಾಲಯಗಳಲ್ಲೂ ಸಂಭ್ರಮ: ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಾಲಯ, ಅರಮನೆ ಉತ್ತರ ದ್ವಾರದ ಗಣಪತಿ ದೇವಾಲಯ ಹಾಗೂ ಮೈಸೂರಿನ ವಿವಿಧೆಡೆ ಇರುವ ಗಣಪತಿ ದೇವಾಲಯಗಳಿಗೆ ವಿಶೇಷ ಅಲಂಕಾರ ಮಾಡಿ, ಗಣೇಶ ಚತುರ್ಥಿ ಆಚರಿಸಲಾಯಿತು. ನೂರೊಂದು ಗಣಪತಿ ದೇವಾಲಯವನ್ನು ನಾನಾ ರೀತಿಯ ಹೂವಿನಿಂದ ಅಲಂಕಾರ ಮಾಡಲಾಗಿತ್ತು. ಅಲ್ಲದೆ, 101 ಗಣಪತಿ ಮೂರ್ತಿಗೂ ಹಾಲಾಭಿಷೇಕ ನೆರವೇರಿಸಿ, ವಿವಿಧ ಫಲ–ಪುಷ್ಪಗಳನ್ನು ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಾಲಯಕ್ಕೆ ಬೆಳಗ್ಗಿನಿಂದ ಸಂಜೆವರೆಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, 101 ಗಣಪತಿ ದರ್ಶನ ಪಡೆದರು.

ಅರಮನೆಯ ಉತ್ತರ ದ್ವಾರದಲ್ಲಿರುವ ಗಣಪತಿ ದೇವಾಲಯದಲ್ಲೂ ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ದೇವಾಲಯದ ಪ್ರಾಂಗಣವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಅಲ್ಲದೇ ದೇವಾಲಯದ ಗರ್ಭಗುಡಿಯಲ್ಲಿರುವ ಗಣೇಶನ ಮೂರ್ತಿಗೆ ಮುಂಜಾನೆಯಿಂದಲೇ ವಿವಿಧ ಅಭಿಷೇಕ ನೆರವೇರಿಸಿ, ಬೆಣ್ಣೆ ಅಲಂಕಾರ ಮಾಡಲಾಗಿತ್ತು. ಅಲ್ಲದೆ ಗರ್ಭಗುಡಿಯ ಪ್ರಾಂಗಣವನ್ನು ಬಣ್ಣದ ಹೂವುಗಳಿಂದ ಶೃಂಗರಿಸಲಾಗಿತ್ತು.

ನಗರದ ವಿವಿಧೆಡೆಯಿರುವ ಗಣಪತಿ ದೇವಾಲಯಗಳಲ್ಲೂ ಬೆಳಗ್ಗಿನಿಂದ ಸಂಜೆವರೆಗೂ ವಿಶೇಷ ಪೂಜಾ ಕೈಂಕರ್ಯ ಜರುಗಿದವು. ಅಪಾರ ಸಂಖ್ಯೆಯ ಭಕ್ತರು ದೇವಾಲಯದಲ್ಲಿ ದರ್ಶನ ಪಡೆದರು.

ನಟ ಪುನೀತ್ ರಾಜ್‌ಕುಮಾರ್ ಜೊತೆ ಗಣಪ: ಈ ಬಾರಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶನ ಜೊತೆಗೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಪುತ್ಥಳಿ ಹೆಚ್ಚಾಗಿ ಕಂಡು ಬಂದವು. ನಗರ ಪ್ರದೇಶ ಮಾತ್ರವಲ್ಲದೇ ಗ್ರಾಮೀಣ ಪ್ರದೇಶದಲ್ಲೂ ಗಣಪನೊಂದಿಗೆ ಪುನೀತ್‌ರಾಜ್‌ಕುಮಾರ್ ಮೂರ್ತಿ ಇರಿಸಿದ್ದು ವಿಶೇಷ.

ಪ್ರಸಾದ ವಿನಿಯೋಗ: ಇದೇ ಮೊದಲ ಬಾರಿಗೆ ಗಣಪತಿ ಹಬ್ಬದ ಸಂಭ್ರಮದಲ್ಲಿ ಹಲವೆಡೆ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗಿಸಲಾಯಿತು. ಈ ಹಿಂದೆ ಪೂಜೆಗೆಂದು ಬಂದವರಿಗೆ ಮಾತ್ರ ಪ್ರಸಾದ ನೀಡಲಾಗುತ್ತಿತ್ತು. ಆದರೆ ಈ ಬಾರಿ ದಾರಿಹೋಕರನ್ನು ಕರೆದು ಪ್ರಸಾದದ ರೂಪದಲ್ಲಿ ಕೇಸರಿ ಬಾತ್, ರೈಸ್ ಬಾತ್, ಉಸಲಿ (ಕಡಲೆಕಾಳಿನ ಪ್ರಸಾದ) ನೀಡಲಾಯಿತು.

ಅರಮನೆಯಲ್ಲೂ: ಮೈಸೂರು ಅರಮನೆಯಲ್ಲೂ ರಾಜವಂಶಸ್ಥರು ಗಣೇಶನ ಪ್ರತಿಷ್ಠಾಪಿಸಿ ಪೂಜಿಸಿದ್ದರು. ಬಳಿಕ ಸಂಜೆ ಗಣೇಶನನ್ನು ಅರಮನೆ ಜಯಮಾರ್ತಾಂಡ ದ್ವಾರದ ಬಳಿ ಇರುವ ಕಾರಂಜಿಯಲ್ಲಿ ಶಾಸ್ತ್ರೋಕ್ತವಾಗಿ ವಿಸರ್ಜಿಸಲಾಯಿತು.

ಆರ್‌ಎಸ್‌ಎಸ್ ಕಚೇರಿ: ಮೈಸೂರಿನ ಆರ್‌ಎಸ್‌ಎಸ್ ಕಚೇರಿ ಮಾಧವ ಕೃಪದಲ್ಲಿಯೂ ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಮೈಸೂರು ಗಣೇಶ ಉತ್ಸವ ಸಮಿತಿಯಿಂದ ಆಯೋಜಿಸಿರುವ ಗಣೇಶ ಉತ್ಸವದಲ್ಲಿ ದೇಶದ 21 ಪವಿತ್ರ ಸ್ಥಳಗಳಿಂದ ಸಂಗ್ರಹಿಸಿದ ಮಣ್ಣು ಹಾಗೂ 7 ಪವಿತ್ರ ನದಿಗಳಿಂದ ಗೌರಿಯೊಂದಿಗಿರುವ ಗಣೇಶ ಮೂರ್ತಿ ವಿಶೇಷವಾಗಿದ್ದು, ಗಣೇಶನ ಕೈಯ್ಯಲ್ಲಿ ಭಗವಧ್ವಜ ಹಿಡಿದುಕೊಂಡಿರುವಂತೆ ಅಲಂಕಾರ ಮಾಡಲಾಗಿದೆ. ಉತ್ಸವದ ಹಿನ್ನೆಲೆಯಲ್ಲಿ ಮೊದಲ ದಿನ ವಿದುಷಿ ಟಿ.ಎಸ್. ಶ್ರೀಲಕ್ಷ್ಮೀ ಕುಮಾರ್ ಮತ್ತು ಶಿಷ್ಯ ವೃಂದದಿಂದ ಭರತನಾಟ್ಯ, ವಿದುಷಿ ನಾಗಲಕ್ಷ್ಮೀ ನಾಗಾರ್ಜುನ್ ಮತ್ತು ತಂಡದಿಂದ ಗಣೇಶ ವಂದನ ಹಾಗೂ ಡಾ.ವಿ.ಮಾಲಿನಿ, ವಿನಾಯಕ ವಿಜಯ ಹರಿಕಥೆ ನಡೆಸಿಕೊಟ್ಟರು.

ಇಂದು ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಮಿತ್ರ ನವೀನ್ ತಂಡದ ವತಿಯಿಂದ ಗಣೇಶನ ಆಧ್ಯಾತ್ಮಿಕ, ಸಾತ್ವಿಕ ಹಾಗೂ ಪೌರಾಣಿಕ ಕಥೆಗಳನ್ನು ಭರತನಾಟ್ಯದ ಮೂಲಕ ಪ್ರದರ್ಶಿಸಲಾಯಿತು. ಅವರಿಗೆ ಎಂ.ಆರ್.ರಾಜೇಶ್, ವಿದ್ವಾನ್ ದಾಸಪ್ಪ, ಹಾಗೂ ನವೀನ್ ಅಂದಗಾರ ಸಾಥ್ ನೀಡಿದರು. ನಂತರ ಕರ್ನಾಟಕ ಸರ್ಕಾರ ವಾದ್ಯ ವೃಂದ (ಪೊಲೀಸ್ ಬ್ಯಾಂಡ್)ದವರು ಮಾ. ಆರ್.ಮೋಹನ್ ನೇತೃತ್ವದಲ್ಲಿ ಹನುಮಂತರಾಜು, ಆರ್.ದಾಸಪ್ಪ, ವಿ.ಸತೀಶ್, ಮಂಜುನಾಥ್, ಶಿವಕುಮಾರ್, ಕಾರ್ತಿಕ್, ಎಂ.ತ್ಯಾಗರಾಜು, ಎಂ.ವಿ.ಶಾಂತಕುಮಾರ್, ಎಸ್.ಪದ್ಮನಾಭ, ಮಧುಸೂಧನ್, ವಿಕ್ರಮ್ ಭಾರದ್ವಾಜ್, ಯಶಸ್ವಿ, ಚಂದ್ರಕುಮಾರ್, ಅರುಣ್‌ಕುಮಾರ್ ಹಾಗೂ ಹರೀಶ್ ಕರ್ನಾಟಕ ಸಂಗೀತ ನುಡಿಸುವ ಮೂಲಕ ಸಾರ್ವಜನಿ ಕರನ್ನು ಮಂತ್ರ ಮುಗ್ಧರನ್ನಾಗಿಸಿದರು. ನಾಳೆ(ಸೆ.2) ಸೂರ್ಯ ಗಾಯತ್ರಿ ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಖ್ಯಾತ ಚಿತ್ರ ಕಲಾವಿದ ವಿಲಾಸ್ ನಾಯಕ್ ಅವರ ವಿಶೇಷ ಕಾರ್ಯಕ್ರಮ ಜರುಗಲಿದೆ ಹಾಗೂ ಕೃಷ್ಣ ಪ್ರತಾಪ್ ತಂಡದಿಂದ ಕಳರಿಪಯಟ್ಟು ಪ್ರದರ್ಶನವೂ ಇದೆ.

ಪ್ರತಿ ಮನೆ–ಮನಗಳಲ್ಲಿ ಗಣೇಶನ ಆರಾಧನೆ: ಭಕ್ತಿಭಾವ



ಪ್ರತಿಯೊಬ್ಬರೂ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದರಿಂದ ಮುಂದಿನ ಪೀಳಿಗೆಗೆ ಪರಿಸರಸ್ನೇಹಿ ವಾತಾವರಣವನ್ನು ಬಳುವಳಿಯಾಗಿ ನೀಡಬಹುದು. – ಕೆ.ಎನ್.ಅಶ್ವತ್ಥನಾರಾಯಣ, ಲತಾ, ಜೆ.ಪಿ.ನಗರ, ಮೈಸೂರು



ಮೈಸೂರು ವಿಜಯನಗರ 1ನೇ ಹಂತದ ನಾಗೇಂದ್ರಕುಮಾರ್ ಮನೆಯಲ್ಲಿ ಕುಟುಂಬ ವರ್ಗ ಗಣಪತಿಯನ್ನು ವಿಶೇಷವಾಗಿ ಅಲಂಕರಿಸಿ, ಪೂಜಿಸಿದರು.



ಎಂ.ಆರ್ಯನ್, 3ನೇ ತರಗತಿ, ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಸ್ಕೂಲ್, ವಿಜಯನಗರ, ಮೈಸೂರು.



ಎಸ್.ಬಿ.ಪೂರ್ವಿ, ಶ್ರೀನಿವಾಸ ಅಗ್ರಹಾರ, ರಾಮಾನುಜ ರಸ್ತೆ, ಮೈಸೂರು.




ಜಿ.ಡಿ.ಸುಮಂತ್, ಕೆ.ಆರ್.ನಗರ



ಎಂ.ಧವನ್, ಪ್ರಮತಿ ಹಿಲ್ ವ್ಯೂ ಅಕಾಡೆಮಿ, ಮೈಸೂರು



ಕೆ.ಎಂ.ಪ್ರಸನ್ನ, ಶೃತಿ ಎ.ನಾಯಕ್, ಚಿರಂತನ, ಇಂಪನ, ಹಿನಕಲ್



ವಿದ್ಯಾ ವಿನಾಯಕ ಗೆಳೆಯರ ಬಳಗ, ಜನತಾ ನಗರ.



ಹುಣಸೂರಿನ ಗೋಕುಲ ಬಡಾವಣೆಯ ರತ್ನಪುರಿ ರಸ್ತೆಯ ಯುವಕರಿಂದ ಗಣಪತಿ ಪ್ರತಿಷ್ಠಾಪನೆ.



ನೇತ್ರದಾನ ಮಹಾದಾನ ಎಂಬ ಘೋಷವಾಕ್ಯದೊಂದಿಗೆ ಜನರಿಗೆ ಅರಿವು ಮೂಡಿಸಲು ಗಣಪತಿ ಹಬ್ಬದ ಮೂಲಕ ನಮ್ಮ ಮನೆಯಲ್ಲಿ ಪ್ರಯತ್ನಿಸಿದ್ದೇವೆ. ಮರಣಾ ನಂತರ ನಮ್ಮ ಕಣ್ಣುಗಳು ಅಮರವಾಗಲಿ ಹಾಗೂ ಜಗತ್ತಿನಲ್ಲಿರುವ ಅಂಧರು ನಮ್ಮ ಸುಂದರವಾದ ಜಗತ್ತನ್ನು ನೋಡುವಂತಾಗಲಿ. –ಮಾಧವ ಭೀ, ಮುಜುಮದಾರ್, ಬಿಇಎಂಎಲ್ ಬಡಾವಣೆ, ಶ್ರೀರಾಂಪುರ 2ನೇ ಹಂತ ಮೈಸೂರು.



ಲಲಿತಾ, ಎನ್.ಆರ್.ಮೊಹಲ್ಲಾ, ಮೈಸೂರು.



ಶಿವರಾಂಪೇಟೆ ಬಿದರ ಕೃಷ್ಣಪ್ಪ, ದೇವರಾಜ ಅರಸು ರಸ್ತೆ ಮೈಸೂರು.



ಸಿದ್ದಲಿಂಗಪುರ ಬೇಕರಿ ರಸ್ತೆ ಯುವಕರ ಬಳಗದಿಂದ ಗಣಪತಿ ಪ್ರತಿಷ್ಠಾಪನೆ.



ಸಂಧ್ಯಾ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು.



ಎಸ್.ಚೈತ್ರಾ ತಮ್ಮ ಮನೆಯಲ್ಲಿ ಚಾಕೊಲೇಟ್ ಗಣೇಶನನ್ನು ಪ್ರತಿಷ್ಠಾಪಿಸಿ, ಪೂಜೆ ಬಳಿಕ ವಿಸರ್ಜಿಸಿದರು.



ಗಣೇಶನ ಪೂಜೆ ಸಂಭ್ರಮದಲ್ಲಿ ಶ್ರೀಮತಿ ಕಾತ್ಯಾಯಿನಿ ಶಂಕರಪ್ಪ, ಅನ್ವಿ, ತೇಜಸ್ವಿ ಸಿದ್ದಾರ್ಥನಗರ.



ಸಿಂಹದಮರಿ ಸೇವಾ ಟ್ರಸ್ಟ್‌ನಿಂದ 1ನೇ ವರ್ಷದ ಗಣಪತಿ ಮಹೋತ್ಸವವನ್ನು ದೇವರಾಜ ಅರಸು ರಸ್ತೆ ಕಾಫಿ ಡೇ ಮುಂಭಾಗ ಭಕ್ತಿಭಾವದಿಂದ ಬುಧವಾರ ಆಚರಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ರಿಚರ್ಡ್‌ಸನ್ : ನಿನ್ನೆ, ನನ್ನ ಹೆಂಡತಿ ಕಣ್ಣಿಗೆ ಧೂಳು ಬಿತ್ತು. ನಾನೂರು ರೂಪಾಯಿ ಖರ್ಚಾಯಿತು.

ಜಾನ್ಸನ್ : ಅದೇನು ಮಹಾ, ನನ್ನ ಹೆಂಡತಿ ಕಣ್ಣಿಗೆ ನೆಕ್ಲೇಸು ಬಿತ್ತು. ನಲವತ್ತು ಸಾವಿರ ರೂಪಾಯಿ ಖರ್ಚಾಯಿತು.

ಮೈಸೂರು ಮಿತ್ರ

ಶುಕ್ರವಾರ, 2 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಪರರನ್ನು ಅರಿತವನೇ ಜಾಣ, ತನ್ನನ್ನು ಅರಿತವನೇ ಜ್ಞಾನಿ –ಲಾವೋತ್ಸೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಲ್ಲವನೇ ಬಲ್ಲ ಬೆಲ್ಲದ ಸವಿಯ

ನಿಮ್ಮ ಪತ್ರಗಳು

ನಕಲಿ ವಿಶ್ವವಿದ್ಯಾಲಯಗಳು ಅಪಾಯಕಾರಿ

ಮಾನ್ಯರೆ,

ಭಾರತ ಪ್ರಾಚೀನ ಕಾಲದಿಂದಲೂ ತನ್ನ ಶಿಕ್ಷಣಕ್ಕೆ ವಿಶ್ವದಲ್ಲೇ ಹೆಸರುವಾಸಿ. ಪ್ರಾಚೀನ ಕಾಲದ ಗುರುಕುಲ ಪದ್ಧತಿಯ ಶಿಕ್ಷಣ ಇಂದಿಗೂ ಸಹ ಪ್ರಸ್ತುತವಾಗಿದೆ. ನಮ್ಮ ದೇಶದ ನಳಂದ ಮತ್ತು ತಕ್ಷಶಿಲೆ ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣದ ಗುಣಮಟ್ಟಕ್ಕೆ ವಿಶ್ವದಲ್ಲಿ ಜನಪ್ರಿಯವಾಗಿದ್ದವು.

ನಳಂದ ವಿಶ್ವವಿದ್ಯಾಲಯದಲ್ಲಿ 100000 ಶಿಕ್ಷಕರು ಮತ್ತು 1000000 ದಷ್ಟು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು. ನಳಂದ ವಿಶ್ವವಿದ್ಯಾಲಯ 7 ಶತಮಾನಗಳ ಕಾಲ ಅಸ್ತಿತ್ವದಲ್ಲಿತ್ತು. 11ನೇ ಶತಮಾನದಲ್ಲಿ ದಾಳಿಕೋರರಿಂದ ಸಂಪೂರ್ಣವಾಗಿ ನಾಶಗೊಂಡಿತು. ದಾಳಿಕೋರರು ನಳಂದ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದಾಗ ಗ್ರಂಥಾಲಯ ಸುಮಾರು ಆರು ತಿಂಗಳುಗಳ ಕಾಲ ಉರಿದಿದ್ದು, ಆ ಗ್ರಂಥಾಲಯದಲ್ಲಿನ ಪುಸ್ತಕಗಳ ಪ್ರಮಾಣವನ್ನು ತಿಳಿಸುತ್ತದೆ.

ಇಂತಹ ಇತಿಹಾಸವಿರುವ ಭಾರತದಲ್ಲಿ ಕರ್ನಾಟಕ ಸೇರಿದಂತೆ ದೇಶದೆಲ್ಲೆಡೆ 21 ನಕಲಿ ವಿಶ್ವವಿದ್ಯಾಲಯಗಳಿರುವುದು ಶಿಕ್ಷಣ ಕ್ಷೇತ್ರಕ್ಕೆ ಅಪಾಯಕಾರಿಯಾಗಿದೆ. ಈ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಯುಜಿಸಿ ಅದೇಶಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಇಂತಹ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರಕುವುದು ಅಸಾಧ್ಯವಾಗಿರುತ್ತದೆ. ಇಲ್ಲಿ ಕಲಿತ ವಿದ್ಯಾರ್ಥಿಗಳಿಂದ ದೇಶಕ್ಕೆ ಯಾವುದೇ ಕೊಡುಗೆ ನೀಡಲು ಸಾಧ್ಯವಿಲ್ಲ. ಇಲ್ಲಿ ಪಡೆದ ಪದವಿಗಳಿಗೆ ಯಾವುದೇ ಮಾನ್ಯತೆಯಿರುವುದಿಲ್ಲ ಮತ್ತು ಉದ್ಯೋಗ ದೊರಕುವುದು ಕಷ್ಟವಾಗಿದೆ.

ಈ ಪಟ್ಟಿಯಲ್ಲಿ ಕರ್ನಾಟಕದ ಗೋಕಾಕ್‌ನ ಬಡಗಣವಿ ಸರ್ಕಾರ್ ಮುಕ್ತ ವಿವಿ, ದೆಹಲಿಯಲ್ಲಿ 8, ಮಹಾರಾಷ್ಟ್ರದಲ್ಲಿ 1, ಕೇರಳದಲ್ಲಿ 1, ಪುದುಚೇರಿಯಲ್ಲಿ 1, ಪಶ್ಚಿಮ ಬಂಗಾಳದಲ್ಲಿ 2, ಉತ್ತರ ಪ್ರದೇಶದಲ್ಲಿ 4, ಆಂಧ್ರಪ್ರದೇಶದಲ್ಲಿ 1 ನಕಲಿ ವಿಶ್ವವಿದ್ಯಾಲಯಗಳ ಯುಜಿಸಿ ಮಾನ್ಯತೆಯನ್ನು ರದ್ದುಪಡಿಸಿದೆ. ನಕಲಿ ವಿಶ್ವವಿದ್ಯಾಲಯಗಳು ದೇಶದ ಶಿಕ್ಷಣ ಕ್ಷೇತ್ರಕ್ಕೆ ಮಾರಕವಾಗಿದ್ದು ಇಂತಹ ವಿಶ್ವವಿದ್ಯಾಲಯಗಳನ್ನು ಸರ್ಕಾರ ರದ್ದುಪಡಿಸಬೇಕು.

–ರಾಸುಮ ಭಟ್, ಚಿಕ್ಕಮಗಳೂರು.

ರೈಲ್ವೆ ಸ್ಟೇಷನ್‌ನಲ್ಲಿ ದ್ವಿಚಕ್ರ ವಾಹನ ಪಾರ್ಕಿಂಗ್ ಸ್ಥಳವನ್ನು ವಿಸ್ತರಿಸಿ

ಮಾನ್ಯರೆ,

ದಿನನಿತ್ಯ ಕೆಲಸಕ್ಕಾಗಿ ಹಾಗೂ ಕಾಲೇಜಿಗಾಗಿ ರೈಲಿನಲ್ಲಿ ಸಂಚರಿಸುವವರ ಸಂಖ್ಯೆ ಮೈಸೂರಲ್ಲಿ ಹೆಚ್ಚಿದ್ದು, ಎಷ್ಟೋ ಮಂದಿ ತಮ್ಮ ದ್ವಿಚಕ್ರ ವಾಹನವನ್ನು ಮೈಸೂರು ರೈಲು ನಿಲ್ದಾಣದ ಆವರಣದಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ಪಾರ್ಕ್ ಮಾಡಿ ಹೋಗುತ್ತಾರೆ. ಪಾರ್ಕಿಂಗ್ ಮಾಡಲು ಹೆಚ್ಚು ಸ್ಥಳವಿಲ್ಲದ ಕಾರಣ ಒಂದರ ಹಿಂದೆ, ಅಕ್ಕ ಪಕ್ಕದಲ್ಲಿ ಬೇರೆ ವಾಹನಗಳಿಗೆ ಅಂಟಿಕೊಂಡ ಹಾಗೆ ಪಾರ್ಕಿಂಗ್ ಮಾಡಲಾಗುತ್ತದೆ. ಇದರಿಂದ ಬೇರೆಯವರು ತಮ್ಮ ವಾಹನ ತೆಗೆಯಲು ಬಂದಾಗ ತುಂಬಾ ತೊಂದರೆ ಉಂಟಾಗುತ್ತಿದೆ. ಆದ್ದರಿಂದ ದ್ವಿಚಕ್ರ ವಾಹನ ಪಾರ್ಕ್ ಮಾಡುವ ಸ್ಥಳವನ್ನು ವಿಸ್ತರಿಸಿ ಇಲ್ಲವೆ ರೈಲ್ವೆ ಸ್ಟೇಷನ್‌ನ ಹಿಂಭಾಗದಲ್ಲಿ ವಾಹನ ಪಾರ್ಕ್ ಮಾಡಲು ರೈಲ್ವೆ ಅಧಿಕಾರಿಗಳು ಅನುಮತಿ ನೀಡಬೇಕು ಎಂಬುದು ನಮ್ಮ ಮನವಿ.–**ಸಿಂಚನ, ಮಹಾರಾಣಿ ಮಹಿಳಾ ಕಲಾ ಕಾಲೇಜು.**

ಎಲ್ಲಾ ನೌಕರರನ್ನು ಖಾಯಂಗೊಳಿಸಿ

ಮಾನ್ಯರೆ,

ಸೆ.6ರಂದು ಸರಕಾರಿ ನೌಕರರಿಗೆ ಹೊಸ ವೇತನ ಆಯೋಗದ ಬಗ್ಗೆ ಸರಕಾರ ನಿರ್ಧಾರ ಪ್ರಕಟಿಸಲಿದೆ ಎಂದು ಸುದ್ದಿ ಮೂಲಗಳಿಂದ ತಿಳಿದುಬಂದಿದೆ. (ಅಂದು ಅತ್ಯುತ್ತಮ ಸೇವೆ ಸಲ್ಲಿಸಿದ ನೌಕರರಿಗೆ ಸರ್ವೋತ್ತಮ ಪ್ರಶಸ್ತಿಯನ್ನು ಸರ್ಕಾರ ವಿತರಿಸಲಿದೆ.)

ಆದರೆ ಈಗ ಸರಕಾರದ ಎಲ್ಲ ಇಲಾಖೆಗಳಲ್ಲಿ ಹೊರ ಗುತ್ತಿಗೆ, ಒಳಗುತ್ತಿಗೆ, ಅತಿಥಿ ಉಪನ್ಯಾಸಕರು, ಶಿಕ್ಷಕರು ಮುಂತಾದ ವಿವಿಧ ಬಗೆಯ ನೌಕರರು ಕೆಲಸ ಮಾಡುತ್ತಿದ್ದಾರೆ. ಕೆಲವರಂತೂ ಎರಡು ದಶಕಗಳು ಮತ್ತು ಅದಕ್ಕೂ ಹೆಚ್ಚು ಸಮಯದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹೊರ ಗುತ್ತಿಗೆಯನ್ನು ನೀಡಿರುವ ಸಂಸ್ಥೆಗೆ ಸರ್ಕಾರ ಹಣ ಬಿಡುಗಡೆ ಮಾಡದೇ ಇದ್ದರೆ ಅವರೂ ಈ ನೌಕರರಿಗೆ ವೇತನ ಕೊಡುವುದಿಲ್ಲ. ಸರಕಾರ ಆಯಾ ವರ್ಗಕ್ಕೆ ನಿಗದಿಪಡಿಸಿದಷ್ಟು ವೇತನವನ್ನಂತೂ ಕೊಡುವುದೇ ಇಲ್ಲ. ಈಗ ಸರಕಾರ ನಡೆಯುತ್ತಿರುವುದೇ ಈ ಬಗೆಯ ನೌಕರರಿಂದ ! ಇವರು ವೃತ್ತಿಯಲ್ಲಿರುವಾಗ ಮರಣ ಹೊಂದಿದರೆ ಮೂರು ಕಾಸೂ ಸಿಗುವುದಿಲ್ಲ. ವಯೋನಿವೃತ್ತಿ ಹೊಂದಿದರೆ ಅವರು ಖಾಲಿ ಕೈಯ್ಯಲ್ಲಿ ಮನೆಗೆ ಹೋಗಬೇಕು. ಒಂದೇ ರೀತಿಯ ಪಾಠ ಮಾಡುವ ಉಪನ್ಯಾಸಕರಿಗೂ, ಅತಿಥಿ ಉಪನ್ಯಾಸಕರಿಗೂ ವೇತನದಲ್ಲಿ ಅಗಾಧ ಅಂತರವಿದೆ. ಈ ವ್ಯವಸ್ಥೆಯ ಆರಂಭದಲ್ಲಿ ಉಪನ್ಯಾಸಕರು ಮುಜುಗರ ಪಟ್ಟಿದ್ದೂ ಉಂಟು. ಆಗ ಇದು ತಾತ್ಕಾಲಿಕ ವ್ಯವಸ್ಥೆ ಎಂಬ ಅಭಿಪ್ರಾಯ ಇತ್ತು. ಆದರೆ ಈಗ ಇದೇ ವ್ಯವಸ್ಥೆ ಆಗಿದೆ.

ಈ ಸಂದಿಗ್ಧದಲ್ಲಿ ವೇತನ ಆಯೋಗ ರಚಿಸಿ (ಚುನಾವಣೆ ಬರುತ್ತಿರುವ ಕಾರಣ) ವೇತನ ಹೆಚ್ಚು ಮಾಡಿದರೆ, ಈ ಅಂತರ, ಅತೃಪ್ತಿ ಹೆಚ್ಚಾಗುತ್ತದೆ. ಅನಗತ್ಯವಾಗಿ ಸರಕಾರ ಸಾಕಷ್ಟು ದೊಡ್ಡ ಸಂಖ್ಯೆಯ ಜನರ ಮತ್ತು ಅವರ ಕುಟುಂಬದವರ ವಿರೋಧ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈಗಿರುವ ಎಲ್ಲ ಎಡಬಿಡಂಗಿ ವ್ಯವಸ್ಥೆಯ ನೌಕರರನ್ನು ಖಾಯಂಗೊಳಿಸಿ, ಆ ನಂತರ ವೇತನ ಆಯೋಗ ರಚಿಸುವುದು ಸೂಕ್ತ. ಆವರೆಗೆ ಮಧ್ಯಂತರ ತಾತ್ಕಾಲಿಕ ಪರಿಹಾರವನ್ನೂ ಕೊಡದೇ ಇರುವುದೇ ಸರಿಯಾದ ಕ್ರಮ.

–ಕೆ.ವೆಂಕಟರಾಜು, ಚಾಮರಾಜನಗರ

ಹೊಸ ಆಸ್ಪತ್ರೆಗೆ ಸಾರಿಗೆ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಗಡಿನಾಡು ಜಿಲ್ಲೆ ಚಾಮರಾಜನಗರಕ್ಕೆ ನೂತನ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ನಿರ್ಮಾಣ ಮಾಡಿರುವುದು ಈ ಭಾಗದ ಜನರಿಗೆ ಆರೋಗ್ಯ ಸೇವೆ ಒದಗಿಸಲು ಬಹಳ ಅನುಕೂಲವಾಗಿದೆ. ಆದರೆ ಈ ನೂತನ ಆಸ್ಪತ್ರೆಗೆ ಪ್ರತಿನಿತ್ಯ ನೂರಾರು ರೋಗಿಗಳು ಬರುತ್ತಿದ್ದು, ಜನರಿಗೆ ಆಸ್ಪತ್ರೆಗೆ ಹೋಗಲು ಸಾರಿಗೆ ಸೌಲಭ್ಯ ಸಮರ್ಪಕವಾಗಿಲ್ಲ. ಹೊಸ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಸೌಲಭ್ಯವಿಲ್ಲದೇ ರೋಗಿಗಳು ಹಳೆ ಆಸ್ಪತ್ರೆಯನ್ನೆ ಅವಲಂಬಿಸಿದ್ದಾರೆ. ಈ ಮಧ್ಯೆ ಸಮರ್ಪಕ ಸಾರಿಗೆ ಇಲ್ಲದೇ ಜನರು ಹೈರಾಣಾಗಿದ್ದಾರೆ. ಆದ್ದರಿಂದ ಈ ಕೂಡಲೇ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುವುದು ಈ ಭಾಗದ ಜನರ ಒತ್ತಾಯವಾಗಿದೆ.

–ಗಿರೀಶ್ ಬೆಂಡರವಾಡಿ, ಚಾಮರಾಜನಗರ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಆಹಾರ ನಿಯಮಗಳು

ಭಗವದ್ಗೀತೆ ಮಹಾಭಾರತದಲ್ಲಿ ಭೀಷ್ಮ ಪರ್ವದ ಆರಂಭದಲ್ಲಿದೆ. ಸೈನ್ಯಗಳಲ್ಲಿ ತನ್ನ ಬಂಧು ಮಿತ್ರರನ್ನು ಕಂಡು ಕರ್ತವ್ಯ ವಿಮುಖನಾಗಲು ಹೊರಟಿದ್ದ ಅರ್ಜುನನ ಭ್ರಾಂತಿಯನ್ನು ಹೋಗಲಾಡಿಸಿ ಕರ್ತವ್ಯದಲ್ಲಿ ನಿರತನಾಗುವಂತೆ ಮಾಡುವುದು ಭಗವದ್ಗೀತೆಯ ಮುಖ್ಯೋದ್ದೇಶವಾಗಿತ್ತೆಂಬುದು ಸ್ಪಷ್ಟ. ಅದಕ್ಕೆ ಶ್ರೀ ಕೃಷ್ಣನ ಕೆಲವೇ ಮಾತುಗಳು ಸಾಕಾಗಿದ್ದುವು. ಏಳು ನೂರು ಶ್ಲೋಕಗಳು, ಹದಿನೆಂಟು ಅಧ್ಯಾಯಗಳು ಬೇಕಾಗಿರಲಿಲ್ಲ. ಆದರೆ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಶ್ರೀ ಕೃಷ್ಣನು ಅರ್ಜುನನನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಕಲ ಮಾನವರಿಗೆ ಅನ್ವಯಿಸುವ ಯೋಗಶಾಸ್ತ್ರವನ್ನು ಬೋಧಿಸಿದ್ದಾನೆ. ಇದರಿಂದ ಈ ಭಗವದ್ಗೀತೆ ದೇಶ ಕಾಲಗಳ ಮಿತಿಯನ್ನು ಮೀರಿ ಸಾರ್ವತ್ರಿಕವೂ ಸಾರ್ವಕಾಲಿಕವೂ ಆಗಿದೆ. ಇದರ ಪ್ರಸ್ತುತತೆ ಎಂದೂ ಅಳಿಯುವುದಿಲ್ಲ ಎಂಬುದು ಗೀತೆಯ ಅಧ್ಯಯನವನ್ನು ಗಂಭೀರವಾಗಿ ಮಾಡಿದವರ ಅಭಿಪ್ರಾಯ. ಇದರ ಹದಿನೆಂಟು ಅಧ್ಯಾಯಗಳನ್ನೂ ಒಂದೊಂದು ಯೋಗವೆಂದು ಕರೆಯುವ ರೂಢಿಯಿದೆ. ಶ್ರೀ ಕೃಷ್ಣನನ್ನು ಯೋಗೇಶ್ವರ ಎಂದು ಭಗವದ್ಗೀತೆಯಲ್ಲಿ ಕರೆದಿರುವುದನ್ನು ಕಾಣಬಹುದು.

ನಾನಾ ವಿಷಯಗಳು

ಭಗವದ್ಗೀತೆಯಲ್ಲಿ ಮಾನವ ಜೀವನದ ಅನೇಕ ಆಯಾಮಗಳ ಮೇಲೆ ಬೆಳಕನ್ನು ಚೆಲ್ಲುವ ವಿಷಯಗಳಿವೆ. ಒಂದೊಂದು ದೃಷ್ಟಿಯ ಪ್ರಕಾರ ನಾನಾ ರೀತಿಯಾಗಿ ಕಾಣುವ ಈ ಗ್ರಂಥದ ವಿವರಣೆಗಾಗಿ ನೂರಾರು ಅಥವಾ ಸಾವಿರಾರು ವ್ಯಾಖ್ಯಾನಗಳೂ ವಿಮರ್ಶೆಗಳೂ ವಿಶ್ವದ ಹಲವಾರು ಭಾಷೆಗಳಲ್ಲಿ ರಚಿತವಾಗಿವೆ. ಕೆಲವರಿಗೆ ಇದು ಅಧ್ಯಾತ್ಮ ಸಾಧನೆಗಾಗಿ ಹೇಳಿ ಮಾಡಿಸಿದ ಗ್ರಂಥ. ಇನ್ನಿತರರಿಗೆ ಇದು ಯೋಗಾಭ್ಯಾಸದ ಕೈಪಿಡಿ. ಹಲವರಿಗೆ ಇದು ಭಕ್ತಿಯನ್ನು ಉಪದೇಶಿಸುವ ಕಥಾನಕ. ಸಂಸ್ಥೆಗಳ ನಿರ್ವಹಣೆ (Management) ಯನ್ನು ಕಲಿಸುವ ವರಿಗೂ ಇದು ಮಾರ್ಗದರ್ಶಕ. ಈ ಕಾರಣದಿಂದ ಬದುಕಿನಲ್ಲಿ ಯಾವುದೇ ಸಮಸ್ಯೆ ಎದುರಾದಾಗ ಭಗವದ್ಗೀತೆಯನ್ನು ಓದಿದರೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ ಎನಿಸುತ್ತದೆ. ಈ ಗ್ರಂಥದಲ್ಲಿ ಯೋಗಿಯ ದೃಷ್ಟಿಯಿಂದ ಹೇಳಿರುವ ಆಹಾರದ ನಿಯಮಗಳು ಸಾಮಾನ್ಯ ಮಾನವರಿಗೂ ಅನ್ವಯಿಸುತ್ತವೆ. ಆದ್ದರಿಂದ ಅವನ್ನು ತಿಳಿದುಕೊಳ್ಳುವುದು ನಮಗೂ ಆವಶ್ಯಕ.

ಆಹಾರದ ವೈವಿಧ್ಯ

ಆಹಾರವು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಬಗೆ ಎಂದು ಭಗವದ್ಗೀತೆ ತಿಳಿಸುತ್ತದೆ. ಅವುಗಳ ವಿಶಿಷ್ಟ ಗುಣಗಳು ಅಥವಾ ಲಕ್ಷಣಗಳೇನು? ಈ ಪ್ರಶ್ನೆಗೆ ಭಗವದ್ಗೀತೆ ಉತ್ತರವನ್ನು ಕೊಟ್ಟಿದೆ.

ಆಯುಸ್ಸತ್ತ್ವ ಬಲಾರೋಗ್ಯ ಸುಖಪ್ರೀತಿ ವಿವರ್ಧನಾಃ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕಪ್ರಿಯಾಃ॥ (17.8)

ಯಾವ ಆಹಾರಗಳು ಆಯುಸ್ಸು ದೀರ್ಘವಾಗುವುದಕ್ಕೂ, ಮನಸ್ಸಿನ ಪ್ರಶಾಂತತೆಗೂ, ಶರೀರದ ಬಲವೂ ಆರೋಗ್ಯವೂ ಸುಖವೂ ಪ್ರೀತಿಯೂ ಬೆಳೆಯುವುದಕ್ಕೂ ಕಾರಣವಾಗುವುವೋ ಅವು ಸಾತ್ತ್ವಿಕರಿಗೆ ಇಷ್ಟವಾಗುತ್ತವೆ. ಈ ಸಾತ್ತ್ವಿಕ ಆಹಾರಗಳು ರಸಭರಿತವೂ ಸ್ನೇಹಯುತವೂ ಸ್ಥೈರ್ಯವನ್ನು ಕೊಡುವುವೂ, ಹೃದಯಕ್ಕೆ ಹಿತವೂ ಆಗಿರುತ್ತವೆ.

ಕಟ್ವಮ್ಲಲವಣಾತ್ಯುಷ್ಣ ತೀಕ್ಷ್ಣ ರೂಕ್ಷವಿದಾಹಿನಃ।
ಆಹಾರಾ ರಾಜಸಸ್ಯೇಷ್ಟಾ ದುಃಖಶೋಖಾಮಯಪ್ರದಾಃ॥ (17.9)

ಅತಿಯಾಗಿ ಖಾರ, ಹುಳಿ, ಉಪ್ಪು ಹಾಕಿರುವ, ಹೆಚ್ಚು ಬಿಸಿಯಾಗಿರುವ, ನಾಲಿಗೆಯನ್ನು ಕೊರೆಯುವ, ಒರಟಾದ ಮತ್ತು ಹೊಟ್ಟೆಯನ್ನು ಸುಡುವ ಆಹಾರಗಳು ರಾಜಸಗುಣದ ಜನರಿಗೆ ಇಷ್ಟವಾಗುತ್ತವೆ. ರಾಜಸಾಹಾರಗಳು ಸ್ವಲ್ಪ ಕಾಲಾ ನಂತರ ನೋವನ್ನು, ಶೋಕವನ್ನೂ ರೋಗಗಳನ್ನು ಉಂಟು ಮಾಡುತ್ತವೆ.

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್॥

ಆಹಾರವು ತಾಜಾ ಆಗಿರುವ ಕಾಲ ಗತಿಸಿ ಹಳೆಯದಾಗಿರುವುದು, ಮಾಡಿದಾಗ ಇದ್ದ ರಸವನ್ನೂ ರುಚಿಯನ್ನೂ ಕಳೆದುಕೊಂಡಿರುವುದು, ಇಷ್ಟವಾಗದ ದುರ್ವಾಸನೆಯಹನ್ನು ಹೊಂದಿರುವುದು, ಹಳಸಿರುವುದು, ಎಂಜಲಾಗಿರುವುದು, ಅಪವಿತ್ರವಾಗಿರುವುದು ಆದ ಆಹಾರ ತಾಮಸ ಜನರಿಗೆ ಇಷ್ಟವಾಗುತ್ತದೆ.

ಈ ಆಹಾರಗಳು ಯಾವುವೆಂದು ಎಲ್ಲರಿಗೂ ಅರ್ಥವಾಗುತ್ತದೆ. ಆದರೆ ನಾಲಗೆಯ ಚಾಪಲ್ಯದಿಂದ ತಿಳಿದೂ ತಿಳಿದೂ ರಾಜಸ ಮತ್ತು ತಾಮಸ ಆಹಾರಗಳನ್ನು ತಿಂದು ಅಸ್ವಸ್ಥರೂ ರೋಗಿಗಳೂ ಆಗುತ್ತಿರು ತ್ತೇವೆ ಎಂಬುದು ಅನುಭವ ಸಿದ್ಧವಾಗಿದೆ. ಅನೇಕರಿಗೆ ಆಗಲೇ ಸಿದ್ಧಪಡಿಸಿದ ಉತ್ತಮ ಭೋಜನಕ್ಕಿಂತ ಹಿಂದಿನ ದಿನದ ತಂಗಳೇ ಇಷ್ಟವಾಗುವುದೂ ಉಂಟು.

ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆ ಎಲ್ಲರಿಗೂ ಗೊತ್ತು. ದಾರಿಯಲ್ಲಿ ಹೋಗುವಾಗ ಬೀದಿ ಬದಿಯಲ್ಲೇ ಬೇಯಿಸಿ ಮಾರುವ ಆಹಾರ ಬಾಯಿಗೆ ರುಚಿ ಎನಿಸಬಹುದು. ಜನರನ್ನು ಸೆಳೆಯಲು ಮಾರಾಟಗಾರರು ಆ ಪದಾರ್ಥಗಳನ್ನು ತಯಾರಿಸುತ್ತಾರೆ. ಆದರೆ ಅವು ದುಃಖ ಶೋಕಾಮಯಪ್ರದ ಎಂಬುದು ಯಾರಿಗೂ ತಿಳಿದಿಲ್ಲ?

ಉತ್ತಮ ಆಹಾರವಾದರೂ ಮಿತಿ ಮೀರಿ ತಿಂದಾಗ ತೊಂದರೆಯನ್ನೇ ಉಂಟು ಮಾಡುತ್ತದೆ. ಒಂದು ಹೊತ್ತು ಉಂಡವನು ಯೋಗಿ, ಎರಡು ಹೊತ್ತು ಉಂಡವನು ಭೋಗಿ, ಮೂರು ಹೊತ್ತು ಉಂಡವನು ರೋಗಿ, ನಾಲ್ಕು ಹೊತ್ತು ಉಂಡವನನ್ನು ಎತ್ತಿಕೊಂಡು ಹೋಗಿ ಎಂಬ ನಾಣ್ಣುಡಿಯನ್ನು ಯಾರು ತಿಳಿದಿಲ್ಲ? ಇದನ್ನು ಭಗವದ್ಗೀತೆ ವಿಶದವಾಗಿ ಹೇಳಿದೆ –

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥ (6.16)

ಅಧಿಕವಾಗಿ ತಿನ್ನುವವನಿಗೆ ಯೋಗವು ದಕ್ಕುವುದಿಲ್ಲ. ಅತ್ಯಲ್ಪವಾಗಿ ತಿನ್ನುವವನಿಗೆ ಅಥವಾ ಆಹಾರವನ್ನೇ ತಿನ್ನದವನಿಗೆ ಯೋಗ ದಕ್ಕಲಾರದು. ಅತಿಯಾಗಿ ನಿದ್ದೆ ಮಾಡುವವನಿಗೆ ಮತ್ತು ನಿದ್ದೆಯನ್ನು ಮಾಡದೆ ಎದ್ದಿರುವವನಿಗೆ ಯೋಗಸಿದ್ಧಿಯು ಸದಾ ದುರ್ಲಭ.

ಯೋಗಾಭ್ಯಾಸವನ್ನು ಮಾಡುವವರು ಶರೀರದ ಸ್ವಾಸ್ಥ್ಯಕ್ಕೆ ಬೇಕಾಗುವಷ್ಟು ಸಾತ್ತ್ವಿಕಾಹಾರವನ್ನು ತೆಗೆದುಕೊಳ್ಳಬೇಕು. ಶರೀರಮಾದ್ಯಂ ಖಲು ಧರ್ಮಸಾಧನಮ್ ಎನ್ನುತ್ತಾನೆ ಮಹಾಕವಿ ಕಾಳಿದಾಸ. ಶರೀರವು ಚೆನ್ನಾಗಿದ್ದರೆ ಮಾತ್ರ ಧರ್ಮದ ಸಾಧನೆ ಶಕ್ಯ. ಆದರೆ ಶರೀರ ಪೋಷಣೆ ಮಾಡುವೆನೆಂದು ಅತಿಯಾಗಿ ತಿಂದರೆ ಸ್ಥೌಲ್ಯವು ಬಂದು ರೋಗಕ್ಕೆ ಅಡ್ಡಿಯಾಗಬಹುದು. ಅನೇಕ ರೋಗಗಳಿಗೆ ಅತಿಯಾದ ಆಹಾರವೇ ಕಾರಣವೆಂದು ವೈದ್ಯರು ಹೇಳುತ್ತಾರೆ. ಹಿತಭುಕ್ ಮಿತಭುಕ್ ಎಂಬ ಸೂತ್ರವನ್ನು ಮರೆಯಬಾರದು. ಇದನ್ನೇ ಭಗವದ್ಗೀತೆಯು ಲಘ್ವಾಶೀ ಎಂಬ ಮಾತಿನಿಂದ ಹೇಳಿದೆ. ಆಹಾರವು ಜಠರದಲ್ಲಿ ಜೀರ್ಣವಾಗದೆ ಉಳಿಯುವುದೇ ಅನೇಕ ರೋಗಗಳ ಕಾರಣ. ಜೀರ್ಣಿಸಿಕೊಳ್ಳಲಾಗದ ಆಹಾರವನ್ನಂತೂ ಮುಟ್ಟಲೇಬಾರದು. ತಾಮಸಾಹಾರವನ್ನು ತಿಂದು ಯಾವಾಗಲೂ ತೂಕಡಿಸುವ ಸೋಮಾರಿಗಳನ್ನೂ ನಾವು ನೋಡುತ್ತೇವೆ.

ಇದನ್ನೇ ಮುಂದುವರಿಸಿ ಕೃಷ್ಣನು ಹೇಳುವ ಮಾತು –

ಯುಕ್ತಾಹಾರ ವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತ ಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ॥ (6.17)

ಯಾವನ ಆಹಾರವೂ ವಿಹಾರವೂ ಯುಕ್ತವಾದ ಕಾಲದಲ್ಲೂ ಮಿತಿಯಲ್ಲೂ ಇರುವುದೋ, ಯಾವನು ತನ್ನ ಕೆಲಸಗಳಲ್ಲಿ ಯೋಗ್ಯವಾದ ಚಲನವಲನಗಳನ್ನೇ ಮಾಡುವನೋ, ಯಾವನ ನಿದ್ದೆ ಮತ್ತು ಎಚ್ಚೆತ್ತುಕೊಳ್ಳುವಿಕೆ ಯೋಗ್ಯಕಾಲದಲ್ಲಿ ಆಗುವುದೋ ಅಂಥವನಿಗೆ ಮಾತ್ರ ಯೋಗವು ಎಲ್ಲ ದುಃಖಗಳನ್ನು ನಿವಾರಿಸುವುದು.

ಯೋಗಿಯು ಉಪವಾಸವನ್ನೇ ಮಾಡುತ್ತಿರಬೇಕೆಂದು ಕೃಷ್ಣನು ಹೇಳಿಲ್ಲ. ಅವನು ಆಟದಲ್ಲಿ ನೋಟದಲ್ಲಿ ಎಂದೂ ವಿಹರಿಸಬಾರದೆಂದೂ ಕೃಷ್ಣನು ನುಡಿದಿಲ್ಲ. ಆದರೆ ಅವು ಯುಕ್ತವಾಗಿರಬೇಕು ಎಂದು ಎಚ್ಚರಿಸಿದ್ದಾನೆ. ಯಾವುದೂ ಅತಿಯಾಗುವುದು ಬೇಡ, ಮಿತಿಯಲ್ಲಿರಲಿ ಎಂಬುದು ಅವನ ಉಪದೇಶ.

'ಆಹಾರ ಶುದ್ಧೌ ಸತ್ತ್ವಶುದ್ಧಿಃ' ಆಹಾರ ಶುದ್ಧವಾಗಿದ್ದರೆ ಮನಸ್ಸೂ ಶುದ್ಧವಾಗಿರುತ್ತದೆ. ರೋಗಗಳಿಂದ ದೂರವಾಗಿರಲು, ಇಂದ್ರಿಯ ನಿಗ್ರಹವನ್ನು ಸಾಧಿಸಲು ಆಹಾರದ ಶುದ್ಧಿಯೂ ಮಿತಿಯೂ ಅತ್ಯಾವಶ್ಯಕ. ಇಷ್ಟ ಬಂದಂತೆ ತಿನ್ನುತ್ತೇನೆ, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುತ್ತೇನೆ ಎಂದು ಕೊಳ್ಳುವವನು ತನಗೆ ತಾನೇ ಮೋಸ ಮಾಡಿಕೊಳ್ಳುವ ಆತ್ಮವಂಚಕನಾಗುತ್ತಾನೆ. ಇಂಥವನನ್ನು ಭಗವದ್ಗೀತೆಯು ಮಿಥ್ಯಾಚಾರ ಎಂದು ಕರೆದಿದೆ.

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ । (3.6)

ಆದ್ದರಿಂದ ಭಗವದ್ಗೀತೆಯು ಹೇಳಿದಂತೆ ಬದುಕನ್ನು ನಡೆಸಬೇಕೆಂದು ಬಯಸುವವನು ಆಹಾರದ ನಿಯಮಗಳನ್ನು ಗುಣದಲ್ಲೂ ಪರಿಮಿತಿಯಲ್ಲೂ ಪಾಲಿಸಬೇಕು.

ಕಾನೂನು ದುರ್ಬಲಗೊಳಿಸಲಾಗಿದೆಯೇ...? ಈ ಪ್ರಶ್ನೆ ಜನಸಾಮಾನ್ಯರನ್ನು ಕಾಡುವಂತಾಗಿದೆ

ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಬೇಸರ

ಮೈಸೂರು,ಸೆ.1(ಪಿಎಂ)– ಮುರುಘಾ ಮಠದ ಶ್ರೀ ಡಾ.ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಕಾನೂನು ದುರ್ಬಲಗೊಳಿಸಲಾಗಿದೆಯೇ? ಎಂಬ ಪ್ರಶ್ನೆ ಜನಸಾಮಾನ್ಯರನ್ನು ಕಾಡುವಂತಾಗಿದೆ ಎಂದು ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಮಠ ಅಥವಾ ಸ್ವಾಮೀಜಿ ಕಾನೂನಿಗಿಂತ ದೊಡ್ಡವರಲ್ಲ. ಆರೋಪ ಬಂದಾಗ ಸ್ವೀಕರಿಸಿ, ಈ ನಾಡಿನ ಕಾನೂನು ಗೌರವಿಸಬೇಕು. ಇಂದು ಈ ಪ್ರಕರಣದಲ್ಲಿ ಸಾಮಾನ್ಯ ಜನತೆಯಲ್ಲಿ ಹಲವು ಅನುಮಾನ ಮೂಡಿದೆ. ಉಳ್ಳವರಿಗೇ ಒಂದು, ಬಡವರಿಗೇ ಮತ್ತೊಂದು ಕಾನೂನು ಇದೆಯೇ? ಎಂಬ ಪ್ರಶ್ನೆ ಜನತೆಯಲ್ಲಿ ಮೂಡಿದೆ ಎಂದರು.

ಪೋಕ್ಸೋ ಕಾಯ್ದೆ ಪ್ರಬಲವಾದದ್ದು. ಈ ಕಾಯ್ದೆಯಡಿ ಪ್ರಕರಣ ದಾಖಲಾದ ಕೂಡಲೇ ಆರೋಪಿ ಬಂಧಿಸಬೇಕು. ನೊಂದವರಿಗೆ ನ್ಯಾಯ ಕೊಡಿಸುವಲ್ಲಿ ಸರ್ಕಾರ, ಬಲಿಷ್ಠ ರಾಜಕಾರಣ ಹಾಗೂ ಮಠ ಎಲ್ಲೋ ಒಂದು ಕಡೆ ಕಾನೂನು ಕುಗ್ಗಿಸುವ ಕೆಲಸ ಮಾಡುತ್ತಿವೆಯೇ? ಎಂದು ನಾಡಿನ ಜನತೆಯಲ್ಲಿ ಪ್ರಶ್ನೆ ಮೂಡಿದೆ ಎಂದರು.

ಮುರುಘಾ ಶ್ರೀಗಳ ಬಗ್ಗೆ ಅಪಾರವಾದ ಗೌರವಿದೆ. ಆದರೆ ಇಂತಹ ಸಂದರ್ಭದಲ್ಲಿ ಯಾವುದೇ ರೀತಿ ರಾಜಕಾರಣ ಮಾಡುವುದಾಗಲೀ, ಕಾನೂನು ದುರ್ಬಲಗೊಳಿಸುವುದಾಗಲೀ ಅಥವಾ ನೊಂದ ಹೆಣ್ಣು ಮಕ್ಕಳಿಗೆ ಭಯ ಹುಟ್ಟಿಸುವ ರೀತಿಯಲ್ಲಿ ನಡೆದುಕೊಳ್ಳುವುದಾಗಲೀ, ಮಾಡಿದರೆ ಈ ನಾಡು ಮತ್ತು ಸಂವಿಧಾನಕ್ಕೆ ಅಪಚಾರ ಮಾಡಿದಂತೆ. ಈ ನಿಟ್ಟಿನಲ್ಲಿ ಪ್ರಗತಿಪರ ಸಂಘಟನೆಗಳ ವತಿಯಿಂದ ನಾಳೆ ಬೆಂಗಳೂರು ಮತ್ತು ಚಿತ್ರದುರ್ಗದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಶೀಘ್ರದಲ್ಲಿ ಮೈಸೂರಿನಲ್ಲೂ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಪೋಕ್ಸೋ ಕಾಯ್ದೆಯನ್ನು ಸುಖಾಸುಮ್ಮನೆ ಬಳಸುವಂತಿಲ್ಲ. ಸಾಬೀತಾಗಿಲ್ಲವೆಂದರೆ ಕಾಯ್ದೆ ಬಳಿಸಿದವರು ಜೈಲು ಪಾಲಾಗಬೇಕಾಗುತ್ತದೆ. ಸಾಬೀತಾದರೆ ಆರೋಪಿ ಜೈಲು ಸೇರಬೇಕು. ಈ ಕಾಯ್ದೆ ಬಳಸುವುದು ಅಷ್ಟು ಸುಲಭವಲ್ಲ. ಜಿಲ್ಲಾಧಿಕಾರಿಗಳ ಆದೇಶ ಮೇರೆಗೆ ವೈದ್ಯಕೀಯ ತಪಾಸಣೆ ಆದ ಬಳಿಕ ಈ ಕಾಯ್ದೆಯಡಿ ಪ್ರಕರಣ ದಾಖಲಾಗುತ್ತದೆ. ನೊಂದ ಹೆಣ್ಣು ಮಕ್ಕಳ ಪರವಾಗಿ ನಾಡಿನ ಜನ ಹಾಗೂ ನಾವೆಲ್ಲಾ ನಿಲ್ಲಬೇಕಿರುವುದು ನಮ್ಮ ಧರ್ಮ ಎಂದರು. ಕಾವಿ, ಮಠ, ಪೀಠ ಎಲ್ಲಕ್ಕಿಂತಲೂ ದೊಡ್ಡದು ಈ ದೇಶದ ಸಂವಿಧಾನ. ಸಾಮಾನ್ಯ ಜನ ನ್ಯಾಯಾಲಯದ ಮೇಲೆ ನಂಬಿಕೆ ಹೊಂದಿದ್ದಾರೆ. ಆದರೆ ನ್ಯಾಯಾಲಯ ಶ್ರೀಗಳ ನಿರೀಕ್ಷಣಾ ಜಾಮೀನು ಕುರಿತು ಇಂದು ವಿಚಾರಣೆ ಕೈಗೆತ್ತಿಕೊಂಡಿದೆ.



ಆರೋಪಿ ಬಂಧಿಸದೇ ನಿರೀಕ್ಷಣಾ ಜಾಮೀನು ಸಂಬಂಧ ವಿಚಾರಣೆಗೆ ತೆಗೆದುಕೊಂಡಿರುವ ಇತಿಹಾಸವಿಲ್ಲ. ಇಲ್ಲೇ ಗೊತ್ತಾಗುತ್ತದೆ ಕಾನೂನು ದುರ್ಬಲ ವಾಗುತ್ತಿರುವುದು ಎಂದು ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಪ್ರತಿಪಾದಿಸಿದರು.

ಯಾವುದೇ ಆರೋಪಿಯನ್ನು ಬಂಧಿಸಿ, ಸ್ಥಳ ಮಹಜರು ಮಾಡಬೇಕು. ಆದರೆ ಆರೋಪಿಯನ್ನು ಬಂಧಿಸದೇ ಸ್ಥಳ ಮಹಜರು ಮಾಡುವುದು ಪೋಕ್ಸೋ ಕಾಯ್ದೆಗೆ ವಿರುದ್ಧ ನಡೆ. ಕಾನೂನು ಗೌರವಿಸಿ ಕಾನೂನಂತೆ ಕ್ರಮ ಜರುಗಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಉಗ್ರ ಹೋರಾಟ ಅನಿವಾರ್ಯವಾಗಲಿದೆ. ಶ್ರೀಗಳು ತಾವೇ ಕಾನೂನಿಂತೆ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಬೇಕು. ಪ್ರಭಾವ ಉಂಟು ಮಾಡಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಅವರು ಆರೋಪ ಮುಕ್ತವಾಗಿ ಬಂದರೆ ನಾವೇ ವಿಜೃಂಭಣೆಯಿಂದ ಅವರನ್ನು ಸ್ವಾಗತ ಮಾಡುತ್ತೇವೆ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸಂತ್ರಸ್ತ ಬಾಲಕಿಯರು ದಲಿತ ಮತ್ತು ಹಿಂದುಳಿದ ಸಮುದಾಯಗಳಿಗೆ ಸೇರಿದ್ದಾರೆ. ಬಹುತೇಕ ಮಹಿಳಾ ಸಂಘಟನೆಗಳು ಸಂತ್ರಸ್ತ ಬಾಲಕಿಯರ ಪರವಾದ ದನಿ ಎತ್ತಿಲ್ಲ. ಮೇಲ್ವರ್ಗದವರಿಗೆ ಈ ರೀತಿ ಆಗಿದ್ದರೆ ಇಷ್ಟೊತ್ತಿಗಾಗಲೇ ಇಡೀ ದೇಶದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿತ್ತು. ಈ ಪ್ರಕರಣದಲ್ಲಿ ಕಾನೂನು ಕ್ರಮ ಜರುಗಿಸುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ಸರ್ಕಾರ ಬೇಜವಾಬ್ದಾರಿತನದಿಂದ ವರ್ತಿಸುತ್ತಿದೆ ಎಂದು ಕಿಡಿಕಾರಿದರು.

ಒಕ್ಕೂಟದ ಮುಖಂಡರಾದ ತುಂಬಲ ರಾಮಣ್ಣ, ದ್ಯಾವಪ್ಪ ನಾಯಕ, ಪ್ರಭಾಕರ್ ಹುಣಸೂರು, ನರಸಿಂಹಮೂರ್ತಿ, ಸೋಮಯ್ಯ ಮಲಿಯೂರು ಸುದ್ದಿಗೋಷ್ಠಿಯಲ್ಲಿದ್ದರು.

ಪೋಕ್ಸೋ ಪ್ರಕರಣದಲ್ಲಿ ಯಾರೂ ತಪ್ಪಿಸಿಕೊಳ್ಳಲಾಗಲ್ಲ




ಸಂಸದ ಶ್ರೀನಿವಾಸ ಪ್ರಸಾದ್ ಪ್ರತಿಕ್ರಿಯೆ

ಮೈಸೂರು, ಸೆ.1–ಪೋಕ್ಸೋ ಪ್ರಕರಣಗಳ ಬಗ್ಗೆ ಸುಪ್ರೀಂಕೋರ್ಟ್ ಸ್ಪಷ್ಟವಾಗಿ ನಿರ್ದೇಶನ ನೀಡಿದೆ. ಇಲ್ಲಿ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಮತ್ತು ನ್ಯಾಯಯುತ ತನಿಖೆಯಿಂದ ಮಾತ್ರ ಸತ್ಯವನ್ನು ಬಹಿರಂಗಪಡಿಸಬಹುದು. ಪೊಲೀಸ್ ಇಲಾಖೆ ಮತ್ತು ಎಡಿಜಿಪಿ ಅಲೋಕ್‌ಕುಮಾರ್ ನ್ಯಾಯಯುತ ತನಿಖೆ ನಡೆಸುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದು ಚಾಮರಾಜನಗರ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ತಿಳಿಸಿದ್ದಾರೆ. ಚಿತ್ರದುರ್ಗ ಮುರುಘಾ ಮಠಾಧೀಶ ಡಾ.ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಸುಪ್ರೀಂ ಕೋರ್ಟ್‌ನ ಪ್ರಕಾರ ಪೋಕ್ಸೋ ಪ್ರಕರಣಗಳಲ್ಲಿ ದಲಿತ ಅಥವಾ ಇತರ ಜಾತಿ ಭೇದವಿಲ್ಲದೆ ವಿಸ್ತೃತ ತನಿಖೆ ಮುಖ್ಯವಾಗಿದೆ. ಈಗಾಗಲೇ ಸಂತ್ರಸ್ತರು ಸಿಆರ್‌ಪಿಸಿ ಸೆಕ್ಷನ್ 164 ರ ಅಡಿಯಲ್ಲಿ ತಮ್ಮ ಹೇಳಿಕೆಯನ್ನು ನೀಡಿದ್ದಾರೆ. ಅದನ್ನು ನ್ಯಾಯಾಧೀಶರ ಕೋಟೆಯಲ್ಲಿ ಸಂಪೂರ್ಣವಾಗಿ ವಿಡಿಯೋ ರೆಕಾರ್ಡ್ ಮಾಡಲಾಗಿದೆ. ಇಲ್ಲಿ ತನಿಖೆಗೆ ಒತ್ತಡ ಹೇರುವ ಪ್ರಶ್ನೆಯೇ ಇಲ್ಲ ಎಂದು ಶ್ರೀನಿವಾಸ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

ವೇಗದ ನಡಿಗೆಯಲ್ಲಿ ಕೆ.ಜಿ.ಕೊಪ್ಪಲು ಕಿಶನ್‌ಗೆ ಚಿನ್ನ



ಮೈಸೂರು,ಸೆ.1–ಇತ್ತೀಚೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ಸ್ಟೇಟ್ ಜೂನಿಯರ್ ಅಂಡ್ ಸಿನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಕ್ರೀಡಾಕೂಟದ ಜೂನಿಯರ್ ವಿಭಾಗದಲ್ಲಿ 5 ಸಾವಿರ ಮೀಟರ್ ವೇಗದ ನಡಿಗೆ ಸ್ಪರ್ಧೆಯಲ್ಲಿ ಮೈಸೂರಿನ ಕೆ.ಜಿ.ಕೊಪ್ಪಲಿನ ಯುವಕ ಆರ್.ಕಿಶನ್ ಸ್ಪರ್ಧಿಸಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದುಕೊಂಡಿದ್ದಾನೆ. ಕೆಜಿ. ಕೊಪ್ಪಲ್‌ನ ನಿವಾಸಿ ರಮೇಶ್ ಮತ್ತು ಶೀಲಾ ದಂಪತಿ ಪುತ್ರನಾಗಿದ್ದು, ಮೈಸೂರು ವಿವಿ ಪುನೀತ್ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾನೆ.

ಲಾರಿ ಡಿಕ್ಕಿ: ಐದು ಎತ್ತು ಸಾವು

ಮಂಡ್ಯ, ಸೆ.1– ಮೂರು ಎತ್ತಿನಗಾಡಿಗೆ ತರಕಾರಿ ತುಂಬಿದ್ದ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ 5 ಎತ್ತುಗಳು ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂವರು ರೈತರು ಮತ್ತು ಒಂದು ಎತ್ತು ಗಾಯಗೊಂಡಿರುವ ಘಟನೆ ಗುರುವಾರ ರಾತ್ರಿ ಜಿಲ್ಲೆಯ ಪಾಂಡವಪುರ ತಾಲೂಕಿನ ಮಹದೇವಪುರದಲ್ಲಿ ನಡೆದಿದೆ. ನಾಗಮಂಗಲ ಕಡೆಯಿಂದ ತರಕಾರಿ ತುಂಬಿಕೊಂಡು ಬರುತ್ತಿದ್ದ ಲಾರಿ, ಚಾಮರಾಜನಗರ–ಜೇವರ್ಗಿ ಹೆದ್ದಾರಿಯಲ್ಲಿ ಹೋಗುತ್ತಿದ್ದ ಎತ್ತಿನಗಾಡಿಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ 5 ಎತ್ತು ಸಾವನ್ನಪ್ಪಿದ್ದು, ಮೂವರು ರೈತರು ಗಾಯಗೊಂಡಿದ್ದಾರೆ. ಗಾಯಗೊಂಡವರ ಬಗ್ಗೆ ಮಾಹಿತಿ ತಿಳಿದು ಬಂದಿಲ್ಲ. ಘಟನೆ ನಡೆದ ಕೂಡಲೇ ಲಾರಿ ಚಾಲಕ ಪರಾರಿಯಾಗಿದ್ದಾನೆ. ಈ ಸಂಬಂಧ ಪಾಂಡವಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ 61ನೇ ಪಾರಂಪರಿಕ ಸಂಗೀತೋತ್ಸವಕ್ಕೆ ಚಾಲನೆ

ಮೈಸೂರು,ಸೆ.1(ಎಂಕೆ)–ನಗರದ ವಿವಿ ಮೊಹಲ್ಲಾ 8ನೇ ಕ್ರಾಸ್‌ನಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್(ಶ್ರೀ ಪ್ರಸನ್ನ ವಿದ್ಯಾ ಗಣಪತಿ ಮಂಡಳಿ ಚಾರಿಟಬಲ್ ಟ್ರಸ್ಟ್) ಆಯೋಜಿಸಿರುವ '61ನೇ ಪಾರಂಪರಿಕ ಸಂಗೀತೋತ್ಸವ' ವನ್ನು ದಿ ಪ್ರಿಂಟರ್ಸ್(ಮೈಸೂರು) ನಿರ್ದೇಶಕ ಶಾಂತ ಕುಮಾರ್ ಗುರುವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬೆಂಗಳೂರು ರಾಜಕೀಯ ಹಾಗೂ ಕೈಗಾರಿಕೆಯಿಂದ ರಾಜಧಾನಿಯಾಗಿದ್ದರೆ, ಸಂಗೀತ ಪರಂಪರೆಯನ್ನು ಹೊಂದಿರುವ ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿದೆ. 61 ವರ್ಷಗಳ ಕಾಲ ಸಭಾಂಗಣವಿಲ್ಲದೆ, ಟಿಕೆಟ್ ಇಲ್ಲದೆ ಸಂಗೀತೋತ್ಸವ ನಡೆಸಿಕೊಂಡು ಬಂದಿರುವುದು ದಾಖಲೆಯಾಗಿದೆ ಎಂದು ಶ್ಲಾಘಿಸಿದರು.





ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ರಮೇಶ್ ನರಸಯ್ಯ ಮಾತನಾಡಿ, ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಅರಮನೆ ವೇದಿಕೆ ಹೊರತುಪಡಿಸಿದರೆ, ವಿವಿ ಮೊಹಲ್ಲಾ 8ನೇ ಕ್ರಾಸ್‌ನಲ್ಲಿ ನಡೆಯುವ ಪಾರಂಪರಿಕ ಸಂಗೀತೋತ್ಸವದಲ್ಲಿಯೇ ದೇಶದ ಖ್ಯಾತ ಕಲಾವಿದರ ನೋಡಲು ಹಾಗೂ ಅವರ ಸಂಗೀತ ಕೇಳಲು ಸಾಧ್ಯ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾರ್ವಜನಿಕವಾಗಿ ಗಣೇಶ ಉತ್ಸವ ಆಚರಣೆಯನ್ನು ಸಂಘಟನಾ ಅಸ್ತ್ರವನ್ನಾಗಿಸಿಕೊಳ್ಳಲಾಗಿತ್ತು. ಹಾಗೆಯೇ ಇಲ್ಲಿಯೂ ಗಣೇಶ ಹಬ್ಬದ ವೇಳೆ ಪ್ರಖ್ಯಾತ ಕಲಾವಿದರನ್ನು ಒಂದೆಡೆ ಸೇರಿಸುವ ಹಾಗೂ ಸಂಗೀತ ಪ್ರಿಯರನ್ನು ಸಂಘಟಿಸುವ ಕೆಲಸ ನಡೆಯುತ್ತಿದೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಮಾಜಿ ಶಾಸಕ ವಾಸು ಮಾತನಾಡಿ, ಪಾರಂಪರಿಕ ಸಂಗೀತೋತ್ಸವ ಸಂಘಟಕರು ಸಂಗೀತ ವಿವಿ ಸಿಂಡಿಕೇಟ್ ಸದಸ್ಯರಾಗಿದ್ದರೆ ಚೆನ್ನಾಗಿರುತ್ತಿತ್ತು. ಸಂಗೀತ ವಿವಿಯಲ್ಲಿ ಪ್ರತಿನಿತ್ಯ ಮುಷ್ಕರ, ಸಂಬಳ ಇಲ್ಲದೆ ಪರದಾಡುತ್ತಿರುವ ಸಿಬ್ಬಂದಿ ಗೋಳನ್ನೆ ನೋಡುವುದಾಗಿದೆ. ಕುಲಪತಿ ಹಾಗೂ ಕುಲಸಚಿವರನ್ನು ಬಿಟ್ಟರೇ ಮತ್ಯಾರು ಖಾಯಂ ನೌಕರರಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂಗೀತ ಕಾರ್ಯಕ್ರಮ: ಬಳಿಕ ವಿದ್ವಾನ್ ಟಿ.ಎಂ. ಕೃಷ್ಣ, ವಿದುಷಿ ಅಕ್ಕರೈ ಶುಭಲಕ್ಷ್ಮಿ, ವಿದ್ವಾನ್ ಕೆ.ಯು. ಜಯಚಂದ್ರರಾವ್, ವಾಜಪಲ್ಲಿ ಕೃಷ್ಣಕುಮಾರ್ ಅವರಿಂದ ಸುಗಮ ಸಂಗೀತ ಗಾಯನ ಕಾರ್ಯಕ್ರಮ ನಡೆಯಿತು. ಎಸ್‌ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷ ಎಂ.ಜಗನ್ನಾಥ್ ಶೆಣೈ, ಕಾರ್ಯದರ್ಶಿ ಸಿ.ಆರ್.ಹಿಮಾಂಶು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ಸಸ್ಪೆನ್ಸ್ ಥ್ರಿಲ್ಲರ್ ರಣವ್ಯೂಹ ಟ್ರೈಲರ್

ಚಕ್ರವ್ಯೂಹ, ಪದ್ಮವ್ಯೂಹದಂಥ ಚಿತ್ರಗಳ ಸಾಲಿಗೆ ಈಗ 'ರಣವ್ಯೂಹ' ಚಿತ್ರವು ಸೇರ್ಪಡೆಯಾಗಿದೆ. ಇನ್ನೇನು ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಟ್ರೈಲರ್ ಹಾಗೂ ಹಾಡುಗಳ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದಲ್ಲಿ ನಡೆಯಿತು. ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಭಾ.ಮಾ. ಹರೀಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು. ಶ್ರೀ ಶಿರಡಿಸಾಯಿ ಮೂವೀಸ್ ಬ್ಯಾನರ್ ಅಡಿಯಲ್ಲಿ ಎಂ.ಜಿ.ವೇಣುಕುಮಾರ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಶ್ರೀಪತಿ ಪೂಜಾರಿ-ಶೃತಿ ಹರೀಶ್-ಮಂಜುಳಾ ಚಿತ್ರದ ಸಹ ನಿರ್ಮಾಪಕರಾಗಿದ್ದಾರೆ. ಎಸ್.ಎಸ್. ಶಂಕರ್‌ನಾಗ್ ನಿರ್ದೇಶನ ಈ ಚಿತ್ರಕ್ಕಿದೆ.



ಚಿತ್ರದಲ್ಲಿ ಪ್ರತಿಯೊಂದು ಪಾತ್ರವೂ ವಿಭಿನ್ನವಾಗಿದ್ದು, ಎಲ್ಲಾ ಪಾತ್ರಗಳಿಗೂ ಹೊಸತನವಿರುತ್ತದೆ. ಒಬ್ಬ ಮನುಷ್ಯನಲ್ಲಿ ಆಂತರಿಕವಾಗಿ ಒಂದು ಯೋಚನೆ ಇರುತ್ತದೆ. ಒಳ್ಳೆಯವನು, ಕೆಟ್ಟವನು ಅಂತ ಹೊರಗಡೆಯಿಂದ ಹೇಳಲಾಗುವುದಿಲ್ಲ. ಹೋಗ್ತಾ ಹೋಗ್ತಾ ಅವನ ಕ್ಯಾರೆಕ್ಟರ್ ಬದಲಾವಣೆ ಆಗುತ್ತಾ ಹೋಗುತ್ತದೆ. ಕೊನೆಗೆ ಏನಾಗುತ್ತದೆ ಎಂಬುದನ್ನು ಕುತೂಹಲಕರ ಅಂಶಗಳ ಜೊತೆಗೆ ಹೇಳಲಾಗಿದೆ. ಒಬ್ಬ ಮನುಷ್ಯನನ್ನು ಮೇಕಪ್‌ನಲ್ಲೇ ರೀಕ್ರಿಯೇಟ್ ಮಾಡಬಹುದು ಎನ್ನುವಂಥ ಹಲವಾರು ಹೊಸ ವಿಚಾರಗಳನ್ನು ಕಮರ್ಷಿಯಲ್ ಆಗಿ ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿ ತೋರಿಸಲಾಗಿದೆ.

ಮಹಾಭಾರತ ಖ್ಯಾತಿಯ 'ಅವಿನಾಶ್' ಚಿತ್ರದ ನಾಯಕನಾಗಿದ್ದು, ಯಶಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕರ ಪತ್ನಿ ಸ್ಮಿತಾ ತನಿಖಾಧಿಕಾರಿಯಾಗಿ ಅಭಿನಯಿಸಿದ್ದಾರೆ. ಉಳಿದಂತೆ ಅವೀನ್, ಅಕ್ಷ್, ವಿಸ್ಮಿತರಾಜ್, ಪ್ರೇಮ ಕನ್ನಡರಾಜು ಮುಂತಾದವರು ನಟಿಸಿದ್ದಾರೆ. ಮೂರು ಹಾಡುಗಳಿಗೆ ಆರೋನಾ ಕಾರ್ತಿಕ್ ವೆಂಕಟೇಶ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಕೃಷ್ಣನಾಯ್ಕರ್, ಕಥೆ ವಿನಯಕುಮಾರ್ ಅವರದಾಗಿದೆ. ಬೆಂಗಳೂರು, ಉಡುಪಿ, ಮಂಗಳೂರು ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.



'ರಣವ್ಯೂಹ' ಚಿತ್ರದ ನಾಯಕಿ ಯಶಾ



ವಿಭಿನ್ನ ಲುಕ್‌ನಲ್ಲಿ 'ಊಜಾ' ಚಿತ್ರದ ಬೆಡಗಿ ಶ್ರದ್ಧಾ ದಾಸ್


ಸ್ಟೀಫನ್ ನಿರ್ದೇಶನದಲ್ಲಿ ದೀಪು ಗೆಳೆಯರ ಬಳಗ

ಸಂಗೀತ ಸಂಯೋಜಕರಾಗಿದ್ದ ಸ್ಟೀಫನ್ ಪ್ರಯೋಗ್ "ದೀಪು ಗೆಳೆಯರ ಬಳಗ" ಕಿರುಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶಕನ ಪಟ್ಟ ಅಲಂಕರಿಸಿದ್ದಾರೆ. ಇತ್ತೀಚೆಗೆ ಈ ಕಿರುಚಿತ್ರದ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು.

ನಾನು ಸಂಗೀತ ನಿರ್ದೇಶಕನಾಗಿ ಹಲವು ಸಿನಿಮಾಗಳಿಗೆ ಕೆಲಸ ಮಾಡಿದ್ದೇನೆ. "ಪ್ಯಾರಿಸ್ ಪ್ರಣಯ" ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ರಾಜ್ಯಪ್ರಶಸ್ತಿ ಸಹ ಬಂದಿದೆ. ತಮಿಳಿನಲ್ಲೂ ಕೆಲವು ಚಿತ್ರಗಳಿಗೆ ಸಂಗೀತ ಮಾಡಿದ್ದೇನೆ. ಕೊರೊನಾ ಸಮಯದಲ್ಲಿ ನನಗೆ ನಿರ್ದೇಶನದತ್ತ ಒಲವಾಯಿತು. ನ್ಯೂಯಾರ್ಕ್ ಫಿಲಂ ಅಕಾಡೆಮಿಯಲ್ಲಿ ಆನ್‌ಲೈನ್ ಮೂಲಕ ನಿರ್ದೇಶನ ಕಲಿತೆ. ಆನಂತರ ನಾಲ್ಕೈದು ಕಥೆ ರೆಡಿಮಾಡಿಕೊಂಡು ನನ್ನ ಸ್ನೇಹಿತರ ಬಳಿ ಚರ್ಚಿಸಿದೆ. ಎಲ್ಲರೂ ಈ ಕಥೆಯನ್ನೇ ಆಯ್ಕೆ ಮಾಡಿದರು. ರಂಗಭೂಮಿಯ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಇದರಲ್ಲಿ ಬರುವ ಕೆಲವು ಸನ್ನಿವೇಶಗಳನ್ನು ನಾನು, ನಿಜಜೀವನದಲ್ಲಿ ಅನುಭವಿಸಿದ್ದೇನೆ ಎಂದರು ನಿರ್ದೇಶಕ ಸ್ಟೀಫನ್ ಪ್ರಯೋಗ್.

ದೀಪು ಪಾತ್ರ ಮಾಡಿರುವ ರೂಪಾಂತರ ತಂಡದ ವರುಣ್‌ಕುಮಾರ್, ಪ್ರಶಾಂತ್, ಭರತ್‌ಕುಮಾರ್, ಉಮಾ ಹಾಗೂ ಸತೀಶ್‌ಚೌಹಾನ್ ತಮ್ಮ ಪಾತ್ರ ಹಾಗೂ ಕಿರುಚಿತ್ರದ ಬಗ್ಗೆ ಮಾಹಿತಿ ನೀಡಿದರು. ಸ್ಟೀಫನ್ ಪ್ರಯೋಗ್ ಕಥೆ, ಚಿತ್ರಕಥೆ ಬರೆದು, ಸಂಗೀತದ ಜೊತೆ ನಿರ್ದೇಶಿಸಿರುವ ಈ ಕಿರುಚಿತ್ರಕ್ಕೆ ಗಂಗಾಧರ್ ತಲಕಾಡ್ ಹಾಗೂ ಪ್ರಶಾಂತ್ ತಲಕಾಡ್ ಛಾಯಾಗ್ರಹಣವಿದೆ. ವರುಣ್‌ಕುಮಾರ್, ವಿಸ್ಮಿತ್‌ರಾಜ್, ಪ್ರಶಾಂತ್, ಉಮಾ, ಸತೀಶ್‌ಚೌಹಾನ್, ಭರತ್, ಕೆ.ಎಸ್.ಡಿ.ಎಲ್. ಚಂದ್ರು, ಭರತ್‌ಕುಮಾರ್, ವೆಂಕಟಾಚಲ, ರಾಜಕುಮಾರ್ ಅಸ್ಕಿ ಹಾಗೂ ದೇಸಿಮೋಹನ್ ಇತರರು ಅಭಿನಯಿಸಿದ್ದಾರೆ.





ಓದೆಲಾ ರೈಲ್ವೇ ಸ್ಟೇಷನ್ ವಸಿಷ್ಠ ಘರ್ಜನೆ

ತೀಕ್ಷ್ಣವಾದ ನೋಟ, ಗಮನ ಸೆಳೆಯುವ ಅಭಿನಯ, ಕೇಳುಗರನ್ನು ಮಂತ್ರ ಮುಗ್ಧರನ್ನಾಗಿ ಮಾಡುವ ಕಂಚಿನ ಕಂಠದ ಗಾಯಕ ಕಂ ನಾಯಕ ವಸಿಷ್ಠಸಿಂಹ ಅವರೀಗ 'ಓದೆಲಾ ರೈಲ್ವೇ ಸ್ಟೇಷನ್' ಚಿತ್ರದ ಮೂಲಕ ತೆಲುಗು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿರೋದು ಗೊತ್ತೇ ಇದೆ. ಆ ಚಿತ್ರ ಈಗ ಬಿಡುಗಡೆಯಾಗಿದೆ.


ಈ ಸಿನಿಮಾದಲ್ಲಿ ವಸಿಷ್ಠಸಿಂಹ, ತಿರುಪತಿ ಎಂಬ ರಗಡ್ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದುವರೆಗೂ ಮಾಡಿರದಂತಹ ವಿಶಿಷ್ಟ ಪಾತ್ರದಲ್ಲಿ ವಸಿಷ್ಠಸಿಂಹ ಕಾಣಿಸಿಕೊಂಡಿದ್ದು, ಚೊಚ್ಚಲ ತೆಲುಗು ಸಿನಿಮಾದಲ್ಲಿ ಸಿಂಹ ಗೆದ್ದಿದ್ದಾರೆ. ಈ ಚಿತ್ರದಲ್ಲಿ ವಸಿಷ್ಠಸಿಂಹ ನಾಯಕನಾಗಿ, ಖಳನಾಯಕನಾಗಿ ಎರಡು ಶೇಡ್‌ಗಳಲ್ಲಿ ಅಬ್ಬರಿಸಿದ್ದಾರೆ.

ಅಂದ ಹಾಗೆ 'ಓದೆಲಾ ರೈಲ್ವೇ ಸ್ಟೇಷನ್' ನೈಜ ಘಟನೆಯಾಧಾರಿತ ಚಿತ್ರವಾಗಿದ್ದು, ಕರೀಂ ನಗರದಲ್ಲಿ ನಡೆದಂಥ ಘಟನೆಯೊಂದನ್ನು ಇಟ್ಟುಕೊಂಡು ಈ ಚಿತ್ರದ ಕಥಾಹಂದರ ಹೆಣೆಯಲಾಗಿದೆ. ಯುವ ನಿರ್ದೇಶಕ ಅಶೋಕ್ ತೇಜ ಅವರು ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದು, ಹೆಬಾಪಟೇಲ್, ವಸಿಷ್ಠಸಿಂಹ ಜೊತೆ ನಾಯಕಿಯಾಗಿ ನಟಿಸಿದ್ದಾರೆ. ಈಗಾಗಲೇ ಗಾಯಕನಾಗಿ ತೆಲುಗು ಚಿತ್ರರಂಗಕ್ಕೆ ಪರಿಚಿತರಾಗಿದ್ದ ವಸಿಷ್ಠಸಿಂಹ ಈಗ ನಾಯಕನಾಗಿ ತೆಲುಗು ಚಿತ್ರಪ್ರೇಮಿಗಳ ಮನ ಗೆದ್ದಿದ್ದಾರೆ. ಸದ್ಯ ವಸಿಷ್ಠಸಿಂಹ ಲವ್..ಲೀ, ಹೆಡ್‌ಬುಷ್, ಸಿಂಬಾ, ತಲ್ವಾರ್‌ಪೇಟೆ, ಡೆವಿಲ್ ಸೇರಿದಂತೆ ಸಾಕಷ್ಟು ಕನ್ನಡ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ.



ಸಿನಿಪದಬಂಧ-023

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ವಿಷ್ಣುವರ್ಧನ್-ದೇವಯಾನಿ ಜೋಡಿಯ 1999ರ ಚಿತ್ರ (4)
3. ಶರತ್ ಬಾಬು-ಸುಹಾಸಿನಿ-ರಮೇಶ್ ತ್ರಿಕೋನ ಪ್ರೇಮದ ಚಿತ್ರ (6)
5. ಧನಂಜಯ-ಶ್ರುತಿ ಹರಿಹರನ್ ಜೋಡಿಯ ಚಿತ್ರ (2)
7. ಕನ್ನಡದ ಒಬ್ಬ ನಿರ್ದೇಶಕ-ನಟಿ ರಕ್ಷಿತಾರ ಪತಿ (2)
9. ಕಾಶಿನಾಥ್-ದೊಡ್ಡಣ್ಣ ಅಭಿನಯದ 1998ರ ಹಾಸ್ಯಮಯ ಚಿತ್ರ (4)
10. ರಾಮ್ ಕುಮಾರ್ ನಾಯಕ-ಅಶ್ವಥ್-ಬಾಲಣ್ಣ-ಪಂಡರಿಬಾಯಿ ಚಿತ್ರ (4)
12. ರಿಷಬ್ ಶೆಟ್ಟಿ ನಟನೆ ಮತ್ತು ನಿರ್ಮಾಣದ 2021ರ ಚಿತ್ರ (2)
15. ಪ್ರೀತಮ್ ಗುಬ್ಬಿ ನಿರ್ದೇಶನದಲ್ಲಿ ಯಶ್-ದೀಪಾ ಸನ್ನಿಧಿ ಜೋಡಿಯ ಚಿತ್ರ (2)
16. ಶಿವಕುಮಾರ್-ಡೈಸಿ ಬೋಪಣ್ಣ ಜೋಡಿಯ 2006ರ ಚಿತ್ರ (6)
17. ಒಂದು ಗಂಡು ಹೆಣ್ಣು ಈ ಸೃಷ್ಟಿಯ ಕಣ್ಣು..... ಈ ಚಿತ್ರದ ಹಾಡು (4)

ಮೇಲಿನಿಂದ ಕೆಳಕ್ಕೆ

1. ಶಿವರಾಜ್ ಕುಮಾರ್-ನಿವೇದಿತಾ ಜೈನ್-ರಮೇಶ್ ಅಭಿನಯದ ಚಿತ್ರ (9)
2. ---ಗೀತ, ರಾಜಕುಮಾರ್-ಗಾಯತ್ರಿ ಜೋಡಿಯ 1980ರ ಚಿತ್ರ (3)
3. ಕುಮಾರ್ ಬಂಗಾರಪ್ಪ-ಚಂದ್ರಿಕಾ ನಟಿಸಿರುವ 1992ರ ಚಿತ್ರ (5)
4. ಹರ್ಷ-ನೇಹಾ ಪಾಟೀಲ್-ಚಿಕ್ಕಣ್ಣ ನಟಿಸಿರುವ 2017ರ ಚಿತ್ರ (3)
6. ಕಾಶಿನಾಥ್-ಪಂಚಮಿ ಜೋಡಿಯ 1992ರ ಚಿತ್ರ (9)
8. --- ಮುರಾರಿ, ಉಪೇಂದ್ರ-ಸುದೀಪ್ ಜೋಡಿಯ ಚಿತ್ರ (3)
9. ತಾರಾ ಶ್ರೇಷ್ಠ ನಟಿ ರಾಷ್ಟ್ರ ಪ್ರಶಸ್ತಿ ಪಡೆದ 2004ರ ಚಿತ್ರ (3)
11. "ಜೋಕೆ ನಾನು ಬಳ್ಳಿಯ ಮಿಂಚು" ಎಂದು- ಈಶ್ವರಿ ಹಾಡಿದ್ದು ಈ ಚಿತ್ರಕ್ಕೆ (5)
13. ಕೃಷ್ಣ-ಲೀಲಾ ಚಿತ್ರದಲ್ಲಿ ಅಜಯ್ ರಾವ್ ಗೆ ನಾಯಕಿ ಈಕೆ (3)
14. ಶ್ರೀನಾಥ್-ಮಂಜುಳಾ ಜೋಡಿಯ 1976ರ ಚಿತ್ರ (3)

ಸಿನಿ ಪದಬಂಧ 022ರ ಸರಿ ಉತ್ತರ

ಮು	ಗು	ಳು	ನ	ಗೆ		ಮು	ಸ್ಸಂ	ಜೆ	ಮಾ	ತು
ಸು					ಯು					ತ್ತೂ
ಕು	ಟುಂ	ಬ		ಜು	ಗಾ	ರಿ		ಬಂ	ಗಾ	ರಿ
		ದಂ			ದಿ			ಧ		
ಬ		ಕ	ತಂ	ಆ		ಕ	ದ	ನ		ಪೈ
ಚ್ಚ				ಕಾ	ಮ	ನ				ಲ್ವಾ
ನ್		ಬ	ದ್ಮಾ	ಶ್		ಸು	ಮ	ನ		ನ್
		ಡ			ಸಂ			ಗಾ		
ಅ	ಸ್ಥಿ	ವ		ಜೋ	ಗ	ಯ್ಯ		ರಿ	ವಾ	ಸ
ಣ್ಣಾ					ಮ					ತ್ಕಾ
ಜಿ	ಗ	ರ್	ಥಂ	ಡ		ಭ	ಲೇ	ಚ	ತು	ರ

ವಿಜೇತರು: ಪ್ರಕೃತ್ ಜಿ,
ನಂ.4199, 2ನೇ ಕ್ರಾಸ್, ಆನಂದಪುರ,
ನಂಜನಗೂಡು, ಮೈಸೂರು ಜಿಲ್ಲೆ

ಒಂದೊಳ್ಳೆ ಲವ್ ಸ್ಟೋರಿಗೆ ಶಿವಣ್ಣ ಶಹಭಾಷ್!



'ಒಂದೊಳ್ಳೆ ಲವ್ ಸ್ಟೋರಿ' ಟ್ರೇಲರ್‌ಗೆ ಸೆಂಚುರಿ ಸ್ಟಾರ್ ಶಿವಣ್ಣನ ಮೆಚ್ಚುಗೆ ಮಾತುಗಳು. 'ಒಂದೊಳ್ಳೆ ಲವ್ ಸ್ಟೋರಿ' ಹೆಸರೇ ಹೇಳುವಂತೆ ಇದೊಂದು ಹೊಸಬರ ಪ್ರಯತ್ನ. ಮೈಸೂರು ಮೂಲದವರಾದ ನಿರಂಜನ್ ಬಾಬು ಈ ಚಿತ್ರವನ್ನು ಪಿನಾಕಿನ ಸಿನೇಮಾಸ್ ಬ್ಯಾನರಿನಡಿ ನಿರ್ಮಿಸಿದ್ದಾರೆ.

ಚಿತ್ರದ ಟ್ರೇಲರ್ ನೋಡಿ ಮೆಚ್ಚಿರುವ ಶಿವಣ್ಣ ಹೊಸಬರ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಕಳೆದ ವರ್ಷ ಜುಲೈನಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ಮೊದಲ ಪ್ರತಿ ಬಿಡುಗಡೆ ಮಾಡಿದ್ದರು. 'ಒಂದೊಳ್ಳೆ ಲವ್‌ಸ್ಟೋರಿ' ಹೆಸರೇ ಹೇಳುವಂತೆ ಪಕ್ಕಾ ಲವ್ ಸ್ಟೋರಿ ಸಿನಿಮಾ. ಈಗಾಗಲೇ ಕನ್ನಡ ಚಿತ್ರರಂಗದಲ್ಲಿ ಅನೇಕ ಲವ್ ಸ್ಟೋರಿಗಳು ಬಂದಿವೆ. ಆದರೆ ಇದು ಟೈಟಲ್‌ಗೆ ತಕ್ಕಂತೆ 'ಒಂದೊಳ್ಳೆ ಲವ್‌ಸ್ಟೋರಿ'. ಜನರು ಕೂಡಾ ಥಿಯೇಟರ್‌ನಿಂದ ಹೊರಬಂದಾಗ ಖಂಡಿತ ಇದು 'ಒಂದೊಳ್ಳೆ ಲವ್ ಸ್ಟೋರಿ' ಎಂದು ಉದ್ಗರಿಸುತ್ತಾರೆ ಎಂದು ಚಿತ್ರತಂಡ ವಿಶ್ವಾಸ ವ್ಯಕ್ತಪಡಿಸಿದೆ.

ಗೌರಿ ಗಣೇಶ ಹಬ್ಬದ ದಿವಸ ಪಿಆರ್‌ಕೆ ಆಡಿಯೋ ಯೂಟ್ಯೂಬ್‌ನಲ್ಲಿ 'ಒಂದೊಳ್ಳೆ ಲವ್‌ಸ್ಟೋರಿ' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. 2:16 ನಿಮಿಷ ಅವಧಿಯ ಈ ಟ್ರೇಲರ್ ಬಹಳ ಅದ್ಭುತವಾಗಿದೆ. ವಿನೋದ್ ಮಂಡ್ಯ ಅವರ ಕ್ಯಾಮರಾ ಕೈಚಳಕವನ್ನು ಟ್ರೇಲರ್‌ನಲ್ಲಿ ಕಾಣಬಹುದು. ಚಿತ್ರದಲ್ಲಿ ಲವ್ ಜೊತೆಗೆ ಸೆಂಟಿಮೆಂಟ್ ಕೂಡಾ ಇದೆ. ಸಿನಿಪ್ರಿಯರು ಕೂಡ ಟ್ರೇಲರ್‌ಗೆ ಮೆಚ್ಚುಗೆ ವ್ಯಕ್ತಪಡಿಸಿ ಕಮೆಂಟ್ ಮಾಡುತ್ತಿದ್ದಾರೆ. ಸಿನಿಮಾಟೋಗ್ರಫಿ ಬಹಳ ಚೆನ್ನಾಗಿದೆ. ಟ್ರೇಲರ್ ನೋಡಿದರೆ ಇದು ಹೊಸ ಕಂಟೆಂಟ್‌ನಂತೆ ಕಾಣುತ್ತದೆ ಎಂದು ಕೆಲವರು ಕಮೆಂಟ್ ಮಾಡಿದ್ದಾರೆ.

ಪಿನಾಕಿನಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ 'ಒಂದೊಳ್ಳೆ ಲವ್‌ಸ್ಟೋರಿ' ಚಿತ್ರವನ್ನು ಮೈಸೂರು ಮೂಲದವರಾದ ನಿರಂಜನ್ ಬಾಬು ನಿರ್ಮಿಸಿದ್ದಾರೆ. ಪ್ರವೀಣ್ ಸುತಾರ್ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಹಾಡುಗಳಿಗೆ ಆಕಾಶ್ ಜಾಧವ್ ಸಂಗೀತ ನೀಡಿದ್ದಾರೆ. ರಾಜ್ ಶಿವು ಅವರ ಸಂಕಲನ ಇದೆ.

ಅಶ್ವಿನ್ ಜೊತೆಗೆ ಧನುಶ್ರೀ ನಾಯಕಿಯಾಗಿ ನಟಿಸಿದ್ದಾರೆ ಇವರೊಂದಿಗೆ ನಿರಂಜನ್ ಬಾಬು, ಕೈಲಾಶ್ ಪಾಲ್, ನಿಶಾ ಹೆಗ್ಡೆ, ಕೆಎಸ್‌ಜಿ ವೆಂಕಟೇಶ್, ವಿಂಧುಜಾ ಹಾಗೂ ಇನ್ನಿತರರು ಚಿತ್ರದಲ್ಲಿ ನಟಿಸಿದ್ದಾರೆ.

ಧಮಾಕ ಚಿತ್ರಕ್ಕೆ ಅಭಿಷೇಕ್ ಸಾಥ್



ಧಮಾಕ ಸೆ.2ರಂದು ಪ್ರೇಕ್ಷಕರಿಗೆ ಮನರಂಜನೆಯ ಕಚಗುಳಿ ಇಡಲು ಬರ್ತಿದೆ. ಈ ಚಿತ್ರಕ್ಕೆ ಯಂಗ್ ರೆಬಲ್ ಸ್ಟಾರ್ ಅಭಿಷೇಕ್ ಅಂಬರೀಶ್ ಸಾಥ್ ಕೊಟ್ಟಿದ್ದಾರೆ. ಚಿತ್ರದ ನಾಯಕ ಶಿವರಾಜ್ ಕೆ.ಆರ್. ಪೇಟೆಯ ಆಪ್ತ ಗೆಳೆಯರಾಗಿರುವ ಅಭಿಷೇಕ್ ಗೆಳೆಯನ, ಅವನ ಸಿನಿಮಾ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

ಮೊನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಭಿಷೇಕ್, ಶಿವರಾಜ್ ಒಳ್ಳೇ ಪ್ರತಿಭಾವಂತ. ಶಿವಣ್ಣ... ಶಿವಣ್ಣ... ಅಂತ ನಾವು ಅವರನ್ನು ಪ್ರೀತಿಯಿಂದ ಕರೆಯುತ್ತೇವೆ. ಶಿವಣ್ಣ ಒಂದೇ ಟ್ರ್ಯಾಕ್‌ನಲ್ಲಿ ನಡೆಯೋಲ್ಲ. ವಿಭಿನ್ನ ಪಾತ್ರಗಳನ್ನು ಮಾಡ್ತಾ ಬೇರೆಬೇರೆ ಟ್ರ್ಯಾಕ್‌ನಲ್ಲಿ ನಡೆಯುತ್ತಾರೆ. ಆರ್ಟಿಸ್ಟ್ ಆಗಿ ಸಕ್ಸಸ್ ಕಂಡವರು. ಈಗ ಹೀರೋ ಆಗಿಯೂ ಸಕ್ಸಸ್ ಕಾಣ್ತಿದ್ದಾರೆ. ನಮ್ಮ ಮಂಡ್ಯ ಜಿಲ್ಲೆಯ ಮಗ. ಧಮಾಕಾ ಟ್ರೇಲರ್ ನೋಡಿದೆ. ತುಂಬಾ ಚೆನ್ನಾಗಿ ಮೂಡಿಬಂದಿದೆ. ಇಡೀ ತಂಡಕ್ಕೆ ಒಳ್ಳೆದಾಗಲಿ ಎಂದರು.

ನಾಯಕ ಶಿವರಾಜ್ ಕೆ.ಆರ್.ಪೇಟೆ ಮಾತನಾಡಿ, ಮಂಡ್ಯ ಅಂದ ತಕ್ಷಣ ನೆನಪಾಗುವುದು ಕಲಿಯುಗ ಕರ್ಣ ಅಂಬರೀಶಣ್ಣ. ಅಭಿಷೇಕ್ ಅವರಲ್ಲಿ ನಾನು ಅಂಬರೀಶಣ್ಣನನ್ನು ನೋಡ್ತಾ ಇದ್ದೇನೆ. ತಂದೆಯಷ್ಟೇ ಅವರು ಎಲ್ಲರಿಗೂ ಪ್ರೀತಿ ಕೊಡುತ್ತಾರೆ. ನಮ್ಮ ಸಿನಿಮಾಗೆ ಬಂದು ಶುಭ ಹಾರೈಸಿದ್ದಕ್ಕೆ ಅವರಿಗೆ ಧನ್ಯವಾದ ಎಂದರು.

ಶಿವರಾಜ್ ಕೆ.ಆರ್.ಪೇಟೆ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಈ ಚಿತ್ರದಲ್ಲಿ ಇವರ ಜೊತೆಯಾಗಿ ನಯನಾ ನಟಿಸಿದ್ದಾರೆ ಸಿದ್ದು ಮೂಲಿಮನಿ, ಪ್ರಿಯಾ ಆಚಾರ್, ಮೋಹನ್ ಜುನೇಜಾ, ಕೋಟೆ ಪ್ರಭಾಕರ್, ಅರುಣಾ ಬಾಲರಾಜ್ ಮುಂತಾದವರು ಚಿತ್ರದಲ್ಲಿದ್ದಾರೆ ಚಿತ್ರವನ್ನು ಎಸ್.ಆರ್.ಮೀಡಿಯಾ ಪ್ರೊಡಕ್ಷನ್ ಬ್ಯಾನರ್‌ನಡಿ ಸುನೀಲ್.ಎಸ್.ರಾಜ್ ಮತ್ತು ಅನ್ನಪೂರ್ಣ ಪಾಟೀಲ್ ನಿರ್ಮಾಣ ಮಾಡಿದ್ದು, ಲಕ್ಷ್ಮೀರಮೇಶ್ ಈ ಚಿತ್ರದ ನಿರ್ದೇಶಕರು. ಚಿತ್ರಕ್ಕೆ ಹಾಲೇಶ್ ಎಸ್. ಛಾಯಾಗ್ರಹಣ, ವಿಕಾಸ್ ವಸಿಷ್ಠ ಸಂಗೀತ ಮತ್ತು ವಿನಯ್ ಕೂರ್ಗ್ ಸಂಕಲನವಿದೆ.

ಮಡಿಕೇರಿಯಲ್ಲಿ ಭಾರೀ ಮಳೆ

ತುಂಬಿ ಹರಿದ ಚರಂಡಿ, ರಾಜಕಾಲುವೆಗಳು, ಜನವಸತಿ ಪ್ರದೇಶ ಜಲಾವೃತ



- ಮನೆಗಳಿಗೆ ನೀರು ನುಗ್ಗಿ ಗೃಹೋಪಯೋಗಿ ವಸ್ತುಗಳಿಗೆ ಹಾನಿ
- ನೀರಿನಲ್ಲಿ ಮುಳುಗಿದ ಅಕ್ಕಿ, ಭತ್ತದ ಮೂಟೆಗಳು
- ನಗರಸಭೆ ವಿರುದ್ಧ ಜನರ ಆಕ್ರೋಶ
- ಮಿಲ್‌ಗಳಿಗೂ ನುಗ್ಗಿದ ನೀರು, ಅಪಾರ ನಷ್ಟ

ಮಡಿಕೇರಿ,ಸೆ.1– ಗುರುವಾರ ಸಂಜೆ ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಏಕಾಏಕಿ ಭಾರೀ ಮಳೆ ಸುರಿದಿದ್ದು, ಅವಾಂತರಗಳನ್ನು ಸೃಷ್ಟಿಸಿದೆ. ವರುಣನ ರೌದ್ರಾವತಾರಕ್ಕೆ ಮಡಿಕೇರಿ ನಗರ ಬೆಚ್ಚಿ ಬಿದ್ದಿದ್ದು, ಹಲವು ಕಡೆಗಳಲ್ಲಿ ಚರಂಡಿ ಹಾಗೂ ರಾಜಕಾಲುವೆಗಳ ನೀರು ಉಕ್ಕಿ ಹರಿದ ಪರಿಣಾಮ ಜನ ವಸತಿ ಪ್ರದೇಶಗಳನ್ನು ಜಲಾವೃತಗೊಳಿಸಿದೆ.

ನಗರದ ಕೈಗಾರಿಕಾ ಬಡಾವಣೆ, ಓಂಕಾರೇಶ್ವರ ದೇವಾಲಯ ರಸ್ತೆ ಪ್ರಕೃತಿ ಬಡಾವಣೆ, ನಿಸರ್ಗ ಬಡಾವಣೆ, ಎಲ್.ಐ.ಸಿ. ಸಮೀಪ, ಜ್ಯೂನಿಯರ್ ಕಾಲೇಜು ರಸ್ತೆ ಪತ್ರಿಕಾ ಭವನ ರಸ್ತೆಗಳ ಚರಂಡಿಗಳಲ್ಲಿ ಏಕಾಏಕಿ ನೀರು ಉಕ್ಕಿ ಹರಿದು ತಗ್ಗು ಪ್ರದೇಶಗಳ ಮನೆ, ಮಳಿಗೆಗಳಿಗೆ ನೀರು ನುಗ್ಗಿ ಆತಂಕ ಸೃಷಿಸಿದೆ.

ಕೃತಕ ಪ್ರವಾಹ ಸೃಷ್ಟಿ: ರಾಜ ಕಾಲುವೆಗಳು ತುಂಬಿ ಹರಿಯುತ್ತಿದ್ದು, ಕಾಲುವೆ ಸಂಪರ್ಕಿಸುವ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯಲಾರದೇ ಮನೆಗಳ ಆವರಣಕ್ಕೆ ನೀರು ನುಗ್ಗಿದೆ. ಪರಿಣಾಮ ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಗಿದ್ದು, ನಗರ ಸಭೆ ವಿರುದ್ಧ ಜನಾಕ್ರೋಷ ವ್ಯಕ್ತವಾಗುತ್ತಿದೆ. ನಗರದ ಓಂಕಾರೇಶ್ವರ ದೇವಾಲಯ ರಸ್ತೆ ಸಮುದ್ರದಂತಾಗಿದ್ದು, ಪಾದಚಾರಿಗಳ ಸಂಚಾರ ದುಸ್ತರವಾಗಿ ಪರಿಣಮಿಸಿದೆ. ಕೆಲವೇ ಗಂಟೆಗಳ ಅವಧಿಗೆ ಸೀಮಿತವಾಗಿ ಸುರಿದ ಮಳೆಗೆ ಈ ಅವಾಂತರಗಳು ಸೃಷ್ಟಿಯಾಗಿದ್ದು, ಸಹಜವಾಗಿಯೇ ಜನರು ಆತಂಕಕ್ಕೆ ಒಳಗಾಗಿದ್ದಾರೆ.

ಅಕ್ಕಿ-ಭತ್ತ ನೀರು ಪಾಲು: ಪತ್ರಿಕಾ ಭವನದ ಬಳಿ ಇರುವ ರೈಸ್ ಮಿಲ್ ಒಂದಕ್ಕೂ ಚರಂಡಿ ನೀರು ನುಗ್ಗಿದ್ದು, ಭತ್ತ, ಅಕ್ಕಿ ಕೋಳಚೆ ನೀರಿನಲ್ಲಿ ಕೊಚ್ಚಿ ಹೋಗಿದೆ. ನೂರಾರು ಕ್ವಿಂಟಾಲ್ ಭತ್ತ, ಅಕ್ಕಿ ಮೂಟೆಗಳು ನೀರಿನಲ್ಲಿ ತೋಯ್ದು ಹೋಗಿವೆ. ಮಾತ್ರವಲ್ಲದೇ ಒಣಗಲು ಹರಡಿದ್ದ ಭತ್ತ ನೀರು ಪಾಲಾಗಿದೆ. ಭತ್ತದ ಹೊಟ್ಟು, ಹುಡಿ ಅಕ್ಕಿ, ಮಿಲ್ ಮಾಡಲು ಕೃಷಿಕರು ನೀಡಿದ್ದ ಭತ್ತ, ಖರೀದಿ ಮಾಡಿದ್ದ ಭತ್ತದ ಮೂಟೆಗಳು ನೀರಿನಲ್ಲಿ ಮುಳುಗಿವೆ. ನೀರಿನಿಂದ ಮಿಲ್‌ನಲ್ಲಿರುವ ಯಂತ್ರೋಪಕರಣಗಳಿಗೂ ಭಾರೀ ಹಾನಿಯಾಗಿದೆ.

ದಿಢೀರ್ ಪ್ರವಾಹದಿಂದಾಗಿ ಲಕ್ಷಾಂತರ ರೂ.ಗಳು ನಷ್ಟವಾಗಿದೆ ಎಂದು ಮಿಲ್ ಮಾಲೀಕರು ಅಳಲು ತೋಡಿಕೊಂಡಿದ್ದಾರೆ. ಈ ರೈಸ್‌ಮಿಲ್ ಪಕ್ಕದಲ್ಲೇ ಕಲ್ಯಾಣ ಮಂಟಪಕ್ಕೂ ನೀರು ನುಗ್ಗಿದ್ದರೇ, ಪಕ್ಕದಲ್ಲೇ ಇರುವ ಹೋಲ್‌ಸೇಲ್ ಮದ್ಯ ಮಳಿಗೆ ಒಂದು ಅರ್ಧಭಾಗ ಮುಳುಗಿ ಹೋಗಿದೆ. ಗುರುವಾರ ಯಾವುದೇ ಮದುವೆ ಸಮಾರಂಭ ಇಲ್ಲದಿರುವ ಕಾರಣ ಅನಾಹುತ ಒಂದು ತಪ್ಪಿದಂತಾಗಿದೆ. ನಗರದ ಹೋಟೆಲ್ ಒಂದರ ಸ್ಪೈಸ್ ಅಂಗಡಿ ಮಳಿಗೆಗೆ ರಾಜ ಕಾಲುವೆಯ ಕೆಸರು ಮಿಶ್ರಿತ ನೀರು ನುಗ್ಗಿ ಅಪಾರ ಹಾನಿಯಾಗಿದೆ.

ಬಾಕ್ಸ್: ಆರೆಂಜ್ ಅಲರ್ಟ್: ಕೊಡಗು ಜಿಲ್ಲೆಯಲ್ಲಿ ಕಳೆದ ಹಲವು ದಿನಗಳಿಂದ ಮಳೆ ಬಿಡುವು ನೀಡಿದ್ದು, ಜಿಲ್ಲೆಯಾದ್ಯಂತ ಮತ್ತೆ ಮಳೆ ಮುಂದುವರೆಯುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗಿನ 8.30ರವರೆಗೆ ಜಿಲ್ಲೆಯಾದ್ಯಂತ "ಆರೆಂಜ್ ಅಲರ್ಟ್" ಘೋಷಣೆ ಮಾಡಲಾಗಿದೆ. ಇದೀಗ ಗುಡುಗು ಸಹಿತ ಮಳೆ ಸುರಿಯುತ್ತಿರುವ ಕಾರಣ ಭಾರೀ ಮಳೆ ಮುಂದುವರೆಯಬಹುದು ಎಂದು ಅಂದಾಜಿಸಲಾಗಿದೆ.

ಮಹಡಿಯಿಂದ ಬಿದ್ದು ಬ್ಯಾಂಕ್ ಉದ್ಯೋಗಿ ಸಾವು



ಸೋಮವಾರಪೇಟೆ ಆ.1– ಬೆಂಗಳೂರಿನ ಜಯನಗರದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಉದ್ಯೋಗಿ ಮೊಬೈಲ್‌ನಲ್ಲಿ ಮಾತನಾಡುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಮೂರನೇ ಮಹಡಿಯಿಂದ ಬಿದ್ದು ಮೃತಪಟ್ಟಿರುವ ಘಟನೆ ಬುಧವಾರ ತಡರಾತ್ರಿ ಸಂಭವಿಸಿದೆ. ಸೋಮವಾರಪೇಟೆಯ ರೇಂಜರ್ ಬ್ಲಾಕ್ ನಿವಾಸಿ ರವಿ ಅವರ ಪುತ್ರ ಶಿವಾನಂದ(23) ಮೃತಪಟ್ಟವರು.

ಬೆಂಗಳೂರಿನ ಹೆಚ್‌ಡಿಎಫ್‌ಸಿ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದ ರವಿ ಬೆಂಗಳೂರಿನಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು ಎನ್ನಲಾಗಿದೆ. ಬುಧವಾರ ರಾತ್ರಿ ಬೆಂಗಳೂರಿನಲ್ಲಿ ತಾವು ವಾಸವಿದ್ದ ಮನೆಯ ಟೆರೇಸ್‌ನಲ್ಲಿ ಮೊಬೈಲ್‌ನಲ್ಲಿ ಮಾತನಾಡುವ ಸಂದರ್ಭ ಬಿದ್ದು ಮೃತಪಟ್ಟಿರುವುದಾಗಿ ಕುಟುಂಬಸ್ಥರು ತಿಳಿಸಿದ್ದಾರೆ. ಮೃತನ ಅಂತ್ಯಕ್ರಿಯೆ ಶುಕ್ರವಾರ ನಡೆಯಲಿದೆ.

ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ಅವಶ್ಯ

ಕೈಲ್ ಪೊಳ್ದ್ ಹಬ್ಬಾಚರಣೆಯಲ್ಲಿ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಅಭಿಮತ



ಮಡಿಕೇರಿ,ಸೆ.1– ಕೊಡಗು ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರದ ಅಗತ್ಯವಿದೆ, ಕೊಡಗಿನ ಸಂಸದರೊಬ್ಬರು ಸಂಸತ್‌ನಲ್ಲಿದ್ದರೆ ಜಿಲ್ಲೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಬಹುದಾಗಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಹೊರ ವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಸಾರ್ವತ್ರಿಕ ಕೈಲ್ ಪೊಳ್ದ್ ಹಬ್ಬಾಚರಣೆ ಅಂಗವಾಗಿ ನಡೆದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ ವಿಧಾನಪರಿಷತ್ ಸದಸ್ಯ ವಿಶ್ವನಾಥ್, ದೇಶದ ಕೆಲವು ರಾಜ್ಯಗಳಲ್ಲಿ ಎರಡು, ಎರಡೂವರೆ ಲಕ್ಷ ಜನಸಂಖ್ಯೆ ಇರುವ ಜಿಲ್ಲೆಗೂ ಪ್ರತ್ಯೇಕ ಲೋಕಸಭಾ ಸ್ಥಾನ ನೀಡಲಾಗಿದೆ ಕೊಡಗಿನಲ್ಲಿ ನಾಲ್ಕೂವರೆ ಲಕ್ಷಕ್ಕೂ ಅಧಿಕ ಜನಸಂಖ್ಯೆ ಇದ್ದು, ಲೋಕಸಭಾ ಕ್ಷೇತ್ರವನ್ನು ನೀಡುವ ಅನಿವಾರ್ಯತೆ ಇದೆ ಎಂದು ಪ್ರತಿಪಾದಿಸಿದರು.

ಕೊಡಗು ಶೌರ್ಯದ ನಾಡು, ಜೀವನದಿ ಕಾವೇರಿಯ ನೆಲೆಬೀಡು. ಪ್ರತ್ಯೇಕ ರಾಜ್ಯವಾಗಿದ್ದ ಕೊಡಗು ಸ್ವಾತಂತ್ರ್ಯ ನಂತರ ಜಿಲ್ಲೆಯಾಗಿ ರೂಪುಗೊಂಡಿದೆ. ಕಾವೇರಿ ನದಿ ತುಂಬಿ ಹರಿಯುವಾಗ ಕೊಡಗು ಹಲವು ಕಷ್ಟ ನಷ್ಟಗಳನ್ನು ಅನುಭವಿಸುತ್ತದೆ. ಆದರೆ ಹೊರಗಿನ ಜನ ಕಾವೇರಿ ನೀರಿನಿಂದ ಲಾಭ ಪಡೆಯುತ್ತಾರೆ. ಕಾವೇರಿ ಋಣ ಪ್ರತಿಯೊಬ್ಬರ ಮೇಲಿದೆ, ಜಿಲ್ಲೆಯನ್ನು ಮೂಲ ಸಮಸ್ಯೆಗಳ ಕೊರತೆ ಕಾಡುತ್ತಿವೆ ಎನ್ನುವ ಕೊರಗಿದೆ ಎಂದು ಅವರು ನುಡಿದರು. ಇದರೊಂದಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ಕೂಡ ಇಲ್ಲದಾಗಿದೆ. ಮಂಗಳೂರು ಕ್ಷೇತ್ರದೊಂದಿಗಿದ್ದ ಕೊಡಗು ಇದೀಗ ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ. ಕೊಡಗಿನ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಕೇಂದ್ರಕ್ಕೆ ಮನದಟ್ಟು ಮಾಡಿಕೊಡಲು ಪ್ರತ್ಯೇಕ ಲೋಕಸಭಾ ಕ್ಷೇತ್ರದ ಅಗತ್ಯವಿದೆ ಎಂದು ವಿಶ್ವನಾಥ್ ತಿಳಿಸಿದರು.

ಇದಕ್ಕೂ ಮುನ್ನ ಕೈಲ್ ಪೊಳ್ದ್ ಹಬ್ಬಾಚರಣೆಗೆ ಸಿಎನ್‌ಸಿ ಸಂಚಾಲಕ ಎನ್.ಯು.ನಾಚಪ್ಪಅವರು ಗುಂಡು ಹಾರಿಸುವ ಮೂಲಕ ಉದ್ಘಾಟಿಸಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡವ ಸಮುದಾಯದ ಸಂವಿಧಾನ ಬದ್ಧ ಹಕ್ಕುಗಳಿಗಾಗಿ ಸಿಎನ್‌ಸಿ ಸಂಘಟನೆ ಹಲವಾರು ವರ್ಷಗಳಿಂದ ಹೋರಾಟ ನಡೆಸಿಕೊಂಡು ಬಂದಿದೆ. ಈ ಹೋರಾಟ ತಾರ್ಕಿಕ ಅಂತ್ಯ ಕಾಣುವವರೆಗೂ ನಡೆಯುತ್ತದೆ ಎಂದು ಘೋಷಿಸಿದರು.

ಕೊಡವ ಭಾಷೆಗೆ ಸಂವಿಧಾನ ಮಾನ್ಯತೆ, ಕೋವಿ ಹಕ್ಕು, ಕೊಡವ ಲ್ಯಾಂಡ್ ಮಾನ್ಯತೆ ಸೇರಿದಂತೆ ವಿವಿಧ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಹಿರಿಯ ಸದಸ್ಯ ಕಲಿಯಂಡ ಪ್ರಕಾಶ್, ದಿನ ಮಣಿ, ಹಂಚೆಟ್ಟಿರ ಮುದ್ದಪ್ಪ ಮತ್ತಿತರಿದ್ದರು.

ಮಂಡೇಪಂಡ ರವಿ ಮೊಣ್ಣಪ್ಪ ನಿಧನ

ಮಡಿಕೇರಿ,ಸೆ.1– ಮಕ್ಕಂದೂರು ನಿವಾಸಿ, ಅಂತರ್‌ರಾಷ್ಟ್ರೀಯ ಹಾಕಿ ಆಟಗಾರ ಮಂಡೇಪಂಡ ರವಿ ಮೊಣ್ಣಪ್ಪ(78) ಅವರು ಆ.31ರಂದು ನಿಧನರಾಗಿದ್ದಾರೆ. ಮೃತರು ಇಂಡಿಯನ್ ಏರ್‌ಲೈನ್ಸ್‌ನಲ್ಲೂ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಮೃತರು ಪತ್ನಿ ಜಮುನಾ(ಕೊಂಗಂಡ), ಪುತ್ರ ಯೋಗಿ, ಪುತ್ರಿ ದೀಪ್ತಿ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೆ.2ರಂದು ಮಡಿಕೇರಿ ಕೊಡವ ಸಮಾಜ ರುದ್ರಭೂಮಿಯಲ್ಲಿ ನಡೆಯಲಿದೆ.

ನೆರವಂಡ ಜೀವನ್

ಮಡಿಕೇರಿ,ಸೆ.1– ಮಡಿಕೇರಿ ನಗರ ನಿವಾಸಿ ಕೂರ್ಗ್ ಹಾಕಿ ಅಂಪೈರ್ಸ್ ಅಸೋಷಿಯೇಷನ್ ಮಾಜಿ ಅಧ್ಯಕ್ಷ ನೆರವಂಡ ಜೀವನ್(51) ಗುರುವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕುಂಬಳದಾಳುವಿನಲ್ಲಿ ನಡೆದಿದೆ.

ಮೈಷುಗರ್‌ನಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ



ಮಂಡ್ಯ, ಸೆ1– ಮೈಷುಗರ್ ಕಾರ್ಖಾನೆಯ ಕಬ್ಬು ಅರೆಯುವಿಕೆಗೆ ಗುರುವಾರ ಸಾಂಕೇತಿಕ ಚಾಲನೆ ನೀಡಲಾಯಿತು.

ನಗರದ ಮೈಷುಗರ್ ಕಾರ್ಖಾನೆಯಲ್ಲಿ ವೈದಿಕ ಪಂಡಿತ ಭಾನುಪ್ರಕಾಶ್‌ಶರ್ಮಾ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಕಬ್ಬು ಅರೆಯುವ ಯಂತ್ರಕ್ಕೆ ಕಬ್ಬು ಎಸೆಯುವ ಮೂಲಕ ಚಾಲನೆ ನೀಡಲಾಯಿತು.

ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಸಚಿವ ಕೆ.ಸಿ.ನಾರಾಯಣಗೌಡ, ಸಂಸದೆ ಸುಮಲತಾ ಅಂಬರೀಷ್, ಶಾಸಕರಾದ ಸಿ.ಎಸ್. ಪುಟ್ಟರಾಜು, ಎಂ.ಶ್ರೀನಿವಾಸ್, ಕೆ.ಅನ್ನದಾನಿ, ಮಧು ಮಾದೇಗೌಡ, ಎಂ.ಎಸ್.ಆತ್ಮಾನಂದ, ಕೆ.ಟಿ.ಶ್ರೀಕಂಠೇಗೌಡ ಸೇರಿದಂತೆ ರೈತ ಮುಖಂಡರು ಸಾಥ್ ನೀಡಿದರು. 4 ವರ್ಷಗಳ ನಂತರ ಮೊದಲ ಬಾರಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಉಡುಗೊರೆ ನೀಡಲಾಯಿತು.

ತಾಂತ್ರಿಕ ದೋಷದಿಂದ ಕೆಲಕಾಲ ಯಂತ್ರ ಚಾಲನೆಗೊಳ್ಳಲೇ ಇಲ್ಲ ಇದರಿಂದ ಮೊದಲನೇ ದಿನವೇ ವಿಘ್ನ ಎದುರಾದಂತಾಯಿತು. ಕಬ್ಬು ಅರೆಯುವಿಕೆಯ ಯಂತ್ರ ಚಾಲನೆಗೊಳ್ಳಲು ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ನೇತೃತ್ವದಲ್ಲಿ ಯಂತ್ರಕ್ಕೆ ಚಾಲನೆ ನೀಡಲು ಮುಂದಾದಾಗ ತಾಂತ್ರಿಕ ದೋಷದಿಂದ ಯಂತ್ರ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಚಾಲನೆಯಾಗಲೇ ಇಲ್ಲ. ನಂತರ ಅಧಿಕಾರಿಗಳು ದೋಷವನ್ನು ಸರಿಪಡಿಸಿದ ಬಳಿಕ ಯಂತ್ರ ಚಾಲನೆಗೊಂಡಿತು.

ಬಳಿಕ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಕಾರ್ಖಾನೆಯಲ್ಲಿ ಇಂದಿನಿಂದ ಸಾಂಕೇತಿಕವಾಗಿ ಕಬ್ಬು ಅರೆಯುವಿಕೆಗೆ ಚಾಲನೆ ನೀಡಲಾಗಿದೆ. ಪ್ರತಿದಿನ 4 ಸಾವಿರ ಟನ್ ಕಬ್ಬು ಅರೆಯುವ ಗುರಿ ಹೊಂದಲಾಗಿದೆ. ಸಮಸ್ಯೆಗಳ ಸರಿಪಡಿಸಿ ಹೊಸ ಕಾರ್ಖಾನೆ ರೀತಿ ಮಾಡುತ್ತೇವೆ. ಸ್ವಲ್ಪ ಟೆಕ್ನಿಕಲ್ ಸಮಸ್ಯೆ ಇತ್ತು. ಅದನ್ನು ಸರಿಪಡಿಸುವ ಕೆಲಸ ಮಾಡಲಾಗುವುದು. ಯಾವುದೇ ಸಮಸ್ಯೆಗಳ ಆಗದ ರೀತಿ ಕ್ರಮ ವಹಿಸಲಾಗುವುದು. ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ ಅವರು ಕೊಟ್ಟ ಮಾತಿನಂತೆ ಅನುದಾನ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಲಾಭದಾಯಕವಾಗಿ ತರಲು ಕ್ರಮ ವಹಿಸುತ್ತೇವೆ ಎಂದು ಹೇಳಿದರು.

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ನಮ್ಮ ಸರ್ಕಾರ ಮೈಷುಗರ್ ಕಾರ್ಖಾನೆ ಪ್ರಾರಂಭ ಮಾಡಿದೆ. 15 ದಿನಗಳ ಹಿಂದೆ ಬಾಯ್ಲರ್‌ಗೆ ಬೆಂಕಿ ಹಾಕಲಾಗಿತ್ತು. ಈಗ ಕಾರ್ಖಾನೆ ಆರಂಭವಾಗಿರುವುದು ಸಂತೋಷ ತಂದಿದೆ ಎಂದರು.

ಈ ವೇಳೆ ರೈತ ಮುಖಂಡರಾದ ಸುನಂದಾ ಜಯರಾಂ, ಎಂ.ಡಿ.ಜಯರಾಂ, ಮಧುಚಂದನ್, ಸಾತನೂರು ವೇಣುಗೋಪಾಲ್ ಸೇರಿದಂತೆ ನೂರಾರು ರೈತ ಮುಖಂಡರು ಹಾಜರಿದ್ದರು.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ಸಹಕಾರಿ



ಪಾಂಡವಪುರ, ಸೆ1– ಮಕ್ಕಳ ಶಿಕ್ಷಣದ ಜೊತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಹೆಚ್ಚು ಆದ್ಯತೆ ನೀಡಬೇಕು. ಕ್ರೀಡೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಶಾಸಕ ಸಿ.ಎಸ್. ಪುಟ್ಟರಾಜು ಹೇಳಿದರು.

ತಾಲೂಕಿನ ಸಣಬ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ನಡೆದ ಗುರುವಾರ ತಾಲೂಕು ಮಟ್ಟದ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ಕ್ರೀಡಾಕೂಟ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಅವರು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಾಲೂಕಿನಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟ ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು.

ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರಿಗೆ ತಾಲೂಕಿನಲ್ಲಿ ಕ್ರೀಡಾ ವಸತಿ ನಿಲಯ ಮಂಜೂರು ಮಾಡಿಕೊಡುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಸಚಿವರು ಭರವಸೆ ನೀಡಿದ್ದಾರೆ ಎಂದರು. ತಹಸೀಲ್ದಾರ್ ನಯನ ಮಾತನಾಡಿ, ಭವ್ಯ ಭಾರತ ನಿರ್ಮಾಣ ಮಾಡುವುದರಲ್ಲಿ ಶಿಕ್ಷಕರ ಪಾತ್ರ ಮಹತ್ವದಾಗಿದೆ. ಸದೃಢ ದೇಶ ನಿರ್ಮಾಣ ಮಾಡುವುದರಲ್ಲಿ ಸೈನಿಕರು, ರೈತರು ಹಾಗೂ ಶಿಕ್ಷಕರ ಪಾತ್ರ ಮಹತ್ವದಾಗಿದೆ ಎಂದರು. ಲಕ್ಷ್ಮೀಸಾಗರ ಗ್ರಾಪಂ ಅಧ್ಯಕ್ಷ ಸತೀಶ್ ಕ್ರೀಡಾ ಜ್ಯೋತಿ ಸ್ವೀಕರಿಸಿದರು. ಈ ವೇಳೆ ಕಾರ್ಯನಿರ್ವಹಣಾಧಿಕಾರಿ ಎಂ.ಎಸ್.ಲೋಕೇಶ್, ಗ್ರಾಪಂ ಅಧ್ಯಕ್ಷ ನವೀನ್, ಯೋಗಶೆಟ್ಟಿ, ಪಾಪಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎ.ಲೋಕೇಶ್, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜು, ಸಿ.ಕೆ.ಗೋಪಾಲೇಗೌಡ, ಎಂ.ಎನ್. ವೆಂಕಟೇಶ್, ಕೆ.ಎನ್. ಪ್ರಕಾಶ್, ಎಲ್.ಎನ್.ಕೇಶವಮೂರ್ತಿ, ಮಂಜುನಾಥ್, ಎಲ್.ಜೆ. ಶಂಕರ್, ಡಾ.ಬಿ.ಡಿ.ಇಂದ್ರ ಕುಮಾರಿ, ಸಿ.ಎನ್.ಶಿವಕುಮಾರ್, ಎ.ಮಂಜುನಾಥ್, ಎಸ್.ಬಸವರಾಜು, ಎಂ.ರಮೇಶ್, ಡಾ.ಅರವಿಂದ್, ಪುಟ್ಟಮಾದೇಗೌಡ, ಗ್ರಾಪಂ ಸದಸ್ಯೆ ಜಯಲಕ್ಷ್ಮೀ, ಮುಖಂಡರಾದ ಬಲರಾಮು, ಕುಮಾರ್, ರಾಮಚಂದ್ರು, ಎಲ್‌ಐಸಿ ಕಾಂತರಾಜು, ವೆಂಕಟೇಶ್, ಆನಂದ್, ಲೋಕೇಶ್, ಯೋಗರಾಜ್, ಕೆ.ಸಿ.ರಾಮೇಗೌಡ, ಅನಿಲ್, ಯೋಗನರಸಿಂಹೆಗೌಡ, ಇಂಜಿನಿಯರ್ ನಾಗೇಶ್, ನಂಜುಡಸ್ವಾಮಿ ಹಾಜರಿದ್ದರು.

ಪತ್ರಕರ್ತ ಬೂಕನಕೆರೆ ಪ್ರಕಾಶ್ ನಿಧನ



ಕೆ.ಆರ್.ಪೇಟೆ,ಸೆ.1–ತಾಲೂಕಿನ ಬೂಕನಕೆರೆ ಗ್ರಾಮದ ನಿವಾಸಿ ಪತ್ರಿಕಾ ಛಾಯಾಗ್ರಾಹಕರಾದ ಬೂಕನಕೆರೆ ಪ್ರಕಾಶ್(48) ಗುರುವಾರ ಅನಾರೋಗ್ಯದಿಂದ ನಿಧನರಾದರು. ಪ್ರಕಾಶ್ ಅವರು ಪತ್ರಿಕಾ ಛಾಯಾಗ್ರಾಹಕರಾಗಿ ಕೆಲಸ ಮಾಡುವ ಜೊತೆಗೆ ಹಲೋ ಮೈಸೂರು ದಿನಪತ್ರಿಕೆಯ ವರದಿಗಾರರಾಗಿಯೂ ಕಳೆದ ಮೂರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಮೃತ ಪ್ರಕಾಶ್ ಅವರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೆ. 2ರಂದು ಶುಕ್ರವಾರ ಹುಟ್ಟೂರು ಬೂಕನಕೆರೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿಂಷಾ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಪ್ರತಿಭಟನೆ



ಮದ್ದೂರು, ಸೆ1– ಪಟ್ಟಣದ ಶಿಂಷಾ ಸಹಕಾರ ಬ್ಯಾಂಕ್‌ನಲ್ಲಿ ಖಾತೆಯಲ್ಲಿರುವ ಹಣವನ್ನು ನೀಡಲು ಅಧಿಕಾರಿಗಳು ವಿನಾಕಾರಣ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಗುರುವಾರ ಬ್ಯಾಂಕ್ ಮುಂಭಾಗ ಗ್ರಾಹಕರು ಪ್ರತಿಭಟನೆ ನಡೆಸಿದರು.

ಸಾದೊಳಲು ಗ್ರಾಮದ ರಾಜೇಶ್ ಮಾತನಾಡಿ, ನನ್ನ ಖಾತೆಯಲ್ಲಿ 45 ಸಾವಿರ ರೂ. ಹಣವಿದೆ. ನನಗೆ ತುರ್ತು ಹಣದ ಅವಶ್ಯಕತೆ ಇರುವುದರಿಂದ 20 ಸಾವಿರ ಹಣ ತೆಗೆದುಕೊಳ್ಳಲು ಬಂದರೆ ಮೂರು ದಿನಗಳಿಂದ ಹಣ ನೀಡದೆ ವಿಳಂಬ ಮಾಡುತ್ತಿದ್ದಾರೆ ಎಂದು ಬ್ಯಾಂಕ್‌ನ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಬ್ಯಾಂಕ್‌ನ ಅಧ್ಯಕ್ಷ ಚಂದ್ರು ಹಾಗೂ ಆಡಳಿತ ಮಂಡಳಿ ಸದಸ್ಯರು ಆಗಮಿಸಿ, ಪ್ರತಿಭಟನಾಕಾರರ ಜೊತೆಯಲ್ಲಿ ಮಾತನಾಡಿ, ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಬ್ಯಾಂಕ್‌ನ ಸಿಇಓ ಸೇರಿದಂತೆ ನಾಲ್ವರು ನೌಕರರ ವಿರುದ್ಧ ದೂರು ನೀಡಿದ್ದು, ಪಟ್ಟಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎಲ್ಲಾ ಗ್ರಾಹಕರ ಹೆಸರಿನಲ್ಲೂ ವಿಮೆ ಮಾಡಿಸಿರುವುದರಿಂದ ಪ್ರತಿಯೊಬ್ಬ ಗ್ರಾಹಕರಿಗೂ 5ಲಕ್ಷ ರೂ.ವರೆಗೆ ವಿಮೆ ಹಣ ಬರುತ್ತದೆ ಎಂದು ಭರವಸೆ ವ್ಯಕ್ತಪಡಿಸಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಪ್ರತಿಭಟನೆಯಲ್ಲಿ ಲಕ್ಷ್ಮಮ್ಮ, ರಾಮಚಂದ್ರಚಾರಿ, ನಾರಾಯಣ್, ಪ್ರಶಾಂತ್, ಜಯರಾಮು, ಲಕ್ಷ್ಮೀ ಸೇರಿದಂತೆ ಇತರರಿದ್ದರು.

ಚಿನಕುರಳಿಯಲ್ಲಿ ಭಾವೈಕ್ಯತೆಯ ಗಣೇಶ ಚತುರ್ಥಿ



ಚಿನಕುರಳಿ, ಸೆ.1–ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಯುವಕರು ಒಗ್ಗೂಡಿ ಗಣಪತಿ ಪ್ರತಿಷ್ಠಾಪಿಸುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷವೂ ಗ್ರಾಮದಲ್ಲಿ ಅರಳಿಕಟ್ಟೆ ಶ್ರೀಸಿದ್ಧಿ ವಿನಾಯಕ ಯುವ ಬಳಗದಿಂದ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಮಾಡಲಾಗಿದ್ದು, ಹಬ್ಬದಲ್ಲಿ ಮುಸ್ಲಿಂ ಯುವಕರು ಪಾಲ್ಗೊಂಡು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಗ್ರಾಮದಲ್ಲಿ ಗೌರಿ–ಗಣೇಶ ಹಬ್ಬಕ್ಕೆ ಶುಭಾಶಯಗಳನ್ನು ಕೋರಿ ಮುಸ್ಲಿಂ ಸಮುದಾಯದವರೇ ಬ್ಯಾನರ್ ಹಾಕಿದ್ದಾರೆ. ಬ್ಯಾನರ್‌ನಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಮುಸ್ಲಿಂ ಸಮುದಾಯದ ಹಲವು ನಾಯಕರ ಫೋಟೋಗಳನ್ನು ಹಾಕಿಕೊಂಡಿದ್ದು ಹಬ್ಬಕ್ಕೆ ಶುಭಕೋರಿದ್ದಾರೆ. ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾತನಾಡಿ, ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಯುವಕರು ಸೇರಿ ಗಣೇಶ ಹಬ್ಬ ಆಚರಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ. ಆ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರು, ಹಿಂದೂ ಹಾಗೂ ಮುಸ್ಲಿಂ ಮುಖಂಡರು, ಯುವಕರು ಇದ್ದರು.

15 ವರ್ಷಗಳ ನಂತರ ಕೋಡಿ ಬಿದ್ದ ಕೋಟೆಕೆರೆ



ಬೇಗೂರು(ಗುಂಡ್ಲುಪೇಟೆ), ಸೆ1– ಸಮೀಪದ ಕೋಟೆಕೆರೆ ಗ್ರಾಮದ ಕೆರೆ ಕೋಡಿ ಬಿದ್ದಿದ್ದು, ಸುತ್ತ ಮುತ್ತಲ ಗ್ರಾಮಗಳ ರೈತರಲ್ಲಿ ಸಂತಸ ಉಂಟು ಮಾಡಿದೆ. ಕಳೆದ ಒಂದು ವಾರದಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಕೆರೆ ಹದಿನೈದು ವರ್ಷಗಳ ನಂತರ ತುಂಬಿ ಕೋಡಿ ಬಿದ್ದಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಓಂಕಾರ ಅರಣ್ಯ ವ್ಯಾಪ್ತಿಯಲ್ಲಿ ಸತತವಾಗಿ ಮಳೆ ಸುರಿಯುತ್ತಿದ್ದು, ಕೋಟೆಕೆರೆ ಭಾಗದ ರೈತರಲ್ಲಿ ಸಂತಸವನ್ನು ಉಂಟು ಮಾಡಿದೆ.

ಬಾಗಿನ ಅರ್ಪಣೆ: ಹದಿನೈದು ವರ್ಷಗಳ ನಂತರ ಕೋಟೆಕೆರೆ ಗ್ರಾಮದ ಕೆರೆ ಕೋಡಿ ಬಿದ್ದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಕುಟುಂಬ ಸಮೇತರಾಗಿ ನಾಡದೇಶ ಶೆಟ್ಟರು ಸುಬ್ರಮಣ್ಯ, ಪತ್ನಿ ಸುಜಯ, ರಾಮಚಂದ್ರು, ರಂಗಸ್ವಾಮಿ, ಯ.ಸಿದ್ದನಾಯ್ಕ, ನಾಗರಾಜು ಗ್ರಾಮಸ್ಥರು ಕುಟುಂಬ ಸಮೇತರಾಗಿ ಕೆರೆಗೆ ಬಾಗಿನ ಅರ್ಪಿಸಿದರು.

ಜಿಲ್ಲೆಯಲ್ಲಿ ಮಳೆ, ಪ್ರವಾಹದಿಂದ ಅಪಾರ ಹಾನಿ

ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಭೇಟಿ; ಪರಿಶೀಲನೆ



ಚಾಮರಾಜನಗರ, ಸೆ.1– ಮಳೆ ಹಾಗೂ ಪ್ರವಾಹದಿಂದ ಹಾನಿಗೀಡಾದ ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಸೋಮಣ್ಣ ವಾರದ ಬಳಿಕ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿ ಆ.25 ರಿಂದ ವ್ಯಾಪಕ ಮಳೆ ಬೀಳುತ್ತಿದೆ. ಇದರಿಂದ ನೂರಾರು ಮನೆಗಳು ಕುಸಿದಿವೆ. ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆಗಳು ನಾಶವಾಗಿ ಕೋಟ್ಯಂತರ ರೂ. ನಷ್ಟ ಸಂಭವಿಸಿವೆ. ರೈತರು ಹಾಗೂ ಸಾಮಾನ್ಯ ವರ್ಗದವರ ಸ್ಥಿತಿ ಹೇಳತೀರದಾಗಿದೆ. ಇಂತಹ ಸನ್ನಿವೇಶದಲ್ಲಿ ಜಿಲ್ಲೆಯಲ್ಲಿದ್ದು, ಸಂತ್ರಸ್ತರ ನೆರವಿಗೆ ದಾವಿಸಬೇಕಾಗಿದ್ದ ಜಿಲ್ಲೆಯ ಉಸ್ತುವಾರಿ ಸಚಿವರು, ವಾರದ ಬಳಿಕ ಭೇಟಿ ನೀಡಿರುವುದು ಸಂತ್ರಸ್ತರ ಆಕ್ರೋಶಕ್ಕೆ ಕಾರಣವಾಗಿದೆ.

ಕೊಳ್ಳೇಗಾಲದ ಸರ್ ಕಾಟನ್ ಕಾಲುವೆ ಸ್ಥಳಕ್ಕೆ ಭೇಟಿ ನೀಡಿದ ಸಚಿವರು ಕಾಲುವೆಯಲ್ಲಿ ಕಸ ಇನ್ನಿತರ ತ್ಯಾಜ್ಯಗಳನ್ನು ತೆರವುಗೊಳಿಸದಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಗರಸಭೆ, ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ತ್ವರಿತವಾಗಿ ಕಾಮಗಾರಿ ನಿರ್ವಹಿಸುವಂತೆ ಸೂಚನೆ ನೀಡಿದರು.

ಪ್ರವಾಹದಿಂದ ಬಾಧಿತವಾಗಿದ್ದ ಮಾಂಬಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟ ಸಚಿವರು ನೀರಿನಿಂದ ಆವೃತಗೊಂಡು ಹಾನಿಯಾಗಿದ್ದ ಮನೆಗಳನ್ನು ಪರಿಶೀಲಿಸಿದರು. ನೀರು ನುಗ್ಗಿ ಮನೆಯಲ್ಲಿನ ವಸ್ತುಗಳು ನಷ್ಟವಾಗಿರುವ ಬಗ್ಗೆ ಸಂತ್ರಸ್ತರು ಸಚಿವರಿಗೆ ವಿವರಿಸಿದರು. ಮನೆ ಹಾನಿ ಸಂತ್ರಸ್ತರ ಅಹವಾಲು ಆಲಿಸಿದ ಸಚಿವರು ಪರಿಹಾರವನ್ನು ವಿತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಗ್ರಾಮದಲ್ಲಿ ಪರಿಹಾರ ಮಂಜೂರಾತಿ ಪತ್ರ ಆಹಾರ ದಿನಸಿ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಿದರು. ಗ್ರಾಮದ ಜನರು ತಮ್ಮ ಅಹವಾಲುಗಳನ್ನು ಸಲ್ಲಿಸಿದರು. ಎಲ್ಲರ ಕುಂದು ಕೊರತೆಯನ್ನು ಆಲಿಸಿದ ಸಚಿವರು ನಿಮ್ಮೊಂದಿಗೆ ನಾವಿದ್ದೇವೆ. ಧೈರ್ಯವಾಗಿರಿ. ಎಲ್ಲಾ ಸಂಕಷ್ಟಗಳಿಗೆ ಪರಿಹಾರ ಸಿಗಲಿದೆ ಎಂದು ಉಸ್ತುವಾರಿ ಸಚಿವರು ತಿಳಿಸಿದರು.

ಅಗರ ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ತೆರೆಯಲಾಗಿದ್ದ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಸಂತ್ರಸ್ತರೊಂದಿಗೆ ಬಹು ಹೊತ್ತು ಮಾತನಾಡಿದರು. ನಿಮ್ಮ ಸಮಸ್ಯೆಗಳು ಏನಿವೆ? ಯಾವ ಯಾವ ತುರ್ತು ಅಗತ್ಯಗಳು ನಿಮಗೆ ಬೇಕಿದೆ? ಆ ಎಲ್ಲವನ್ನು ನೀಡಲಿದ್ದೇವೆ. ಯಾವುದೇ ಆತಂಕ ಬೇಡ. ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ. ನಿಮಗೆ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳಿಗೆ ಸೂಚನೆ ನೀಡಿದ ಸಚಿವರು ಸಂತ್ರಸ್ತರಿಗೆ ಕಾಳಜಿ ಕೇಂದ್ರದಲ್ಲಿರುವವರಿಗೆ ಊಟ ಉಪಹಾರ, ಹೊದಿಕೆ, ದಿನ ಬಳಕೆಯ ವಸ್ತುಗಳು, ಟವೆಲ್, ಇನ್ನಿತರ ಎಲ್ಲಾ ಸಾಮಗ್ರಿಗಳನ್ನು ವಿತರಿಸಬೇಕು. ಶೌಚಾಲಯಗಳ ಸ್ವಚ್ಛತೆ, ಸ್ನಾನದ ವ್ಯವಸ್ಥೆಗೂ ಕ್ರಮವಹಿಸಬೇಕು. ಆರೋಗ್ಯದ ಬಗ್ಗೆಯು ಹೆಚ್ಚಿನ ನಿಗಾವಹಿಸಬೇಕು. ಆರೋಗ್ಯ ತಪಾಸಣೆ, ಔಷಧ ಉಪಚಾರ ಮಾಡಬೇಕು. ಯಾವುದೇ ತೊಂದರೆಯಾಗದಂತೆ ವೈದ್ಯರು ನೋಡಿಕೊಳ್ಳಬೇಕೆಂದು ಸಚಿವರು ತಿಳಿಸಿದರು.

ಶಾಸಕರಾದ ಎನ್.ಮಹೇಶ್, ಸಿ.ಎಸ್. ನಿರಂಜನ್ ಕುಮಾರ್, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್, ಉಪವಿಭಾಗಾಧಿಕಾರಿ ಗೀತಾ ಹುಡೇದ, ತಹಸೀಲ್ದಾರ್‌ರಾದ ಮಂಜುಳ, ಆನಂದಪ್ಪ ನಾಯಕ, ಬಸವರಾಜು, ವಿವಿಧ ಇಲಾಖೆಗಳ ಜಿಲ್ಲಾ, ತಾಲೂಕು ಅಧಿಕಾರಿಗಳು ಇದ್ದರು.

ಅನಾರೋಗ್ಯ ಕಾರಣ ಭೇಟಿ ವಿಳಂಬವಾಯ್ತು

ಚಾಮರಾಜನಗರ: ನನಗೆ ಆರೋಗ್ಯ ಸರಿ ಇಲ್ಲದೇ ಒದ್ದಾಡುತ್ತಿದ್ದೇನೆ. ವೈದ್ಯರು ವಿಶ್ರಾಂತಿಗೆ ಸೂಚಿಸಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ಮಳೆ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡುವಲ್ಲಿ ತಡವಾಯಿತು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಸಮಜಾಯಿಸಿ ನೀಡಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡುವುದು ವಿಳಂಬವಾಗಿದ್ದಕ್ಕೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದರು. ಭೇಟಿ ನೀಡುವುದು ತಡವಾಗಿದೆ. ಮಳೆ ಹಾನಿ ಗಾಂಭೀರ ಪರಿಸ್ಥಿತಿಯು ಅರ್ಥವಾಗಿದೆ ಎಂದರು.

ವಿದ್ಯಾಗಣಪತಿ ಮಂಡಳಿಯಿಂದ ಧರ್ಮರಕ್ಷಕ ಗಣಪತಿ ಪ್ರತಿಷ್ಠಾಪನೆ



ಚಾಮರಾಜನಗರ, ಸೆ1– ನಗರದ ರಥಬೀದಿಯಲ್ಲಿ ಶ್ರೀ ವಿದ್ಯಾ ಗಣಪತಿ ಮಂಡಳಿ ವತಿಯಿಂದ ಧರ್ಮರಕ್ಷಕ ಗಣಪತಿಮೂರ್ತಿ ಪ್ರತಿಷ್ಠಾಪಿಸಲಾಯಿತು. ರಾಮಸಮುದ್ರದಲ್ಲಿ ತಯಾರರಾದ ಧರ್ಮರಕ್ಷಕ ಗಣಪತಿ ಮೂರ್ತಿಯನ್ನು ನಗರದ ರಥಬೀದಿಯಲ್ಲಿ ಸಿದ್ದಪಡಿಸಲಾಗಿದ್ದ ವೇದಿಕೆಗೆ ತಂದು ಬೆಳಿಗ್ಗೆ 11–30ಕ್ಕೆ ಪೂಜೆ ಸಲ್ಲಿಸಿ ಪ್ರತಿಷ್ಠಾಪಿಸಲಾಯಿತು.

ಈ ಸಂದರ್ಭದಲ್ಲಿ ಮಂಡಳಿ ಅಧ್ಯಕ್ಷ ಮನೋಜ್ ಪಟೇಲ್ ಮಾತನಾಡಿ, ಗೌರಿ–ಗಣೇಶ ಹಬ್ಬವನ್ನು ನಾಡಿನ ಸಂಸ್ಕೃತಿ, ಭಾವೈಕ್ಯತೆ ಪ್ರತೀಕವಾಗಿ ಆಚರಿಸಲಾಗುತ್ತಿದೆ. ವಿದ್ಯಾ ಗಣಪತಿ ಮಂಡಳಿ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯು ನಗರದ ಎಲ್ಲ ಕೋಮಿನ ಮುಖಂಡರ ಸಹಕಾರದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಯಂತೆ ಈ ವರ್ಷ ವಿಶೇಷವಾಗಿ ಧರ್ಮರಕ್ಷಕ ಗಣಪತಿಮೂರ್ತಿ ಪ್ರತಿಷ್ಠಾಪಿಸಲಾಗಿದ್ದು, 10 ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ. ಸುಮಾರು 45 ದಿನಗಳವರೆಗೆ ಪೂಜೆ ಸಲ್ಲಿಸಲಾಗುವುದು ತದ ನಂತರ ಗಣೇಶಮೂರ್ತಿ ವಿಸರ್ಜನೆ ದಿನಾಂಕ ನಿಗದಿಪಡಿಸಲಾಗುವುದು ಎಂದರು.

ಪೂಜಾ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಶಿವಕುಮಾರ್, ಎಎಸ್‌ಪಿ ಸುಂದರ್ ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್, ಮುಸ್ಲಿಂ ಧರ್ಮದ ಮುಖಂಡರಾದ ಮೊಹಮ್ಮದ್ ರಯೀಸ್, ಕಬೀರ್‌ಅಹಮದ್, ಖಲೀಲ್ ಉಲ್ಲಾ ವಿದ್ಯಾ ಗಣಪತಿ ಮಂಡಳಿ ಗೌರವ ಅಧ್ಯಕ್ಷ ಗುರುನಾಥ್, ಗೌರವ ಕಾರ್ಯದರ್ಶಿ ಸುದರ್ಶನ್‌ಗೌಡ, ಕಾರ್ಯಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಶಿವು ವಿರಾಟ್, ಉಪಾಧ್ಯಕ್ಷರಾದ ಸಿ.ಎಂ.ಮಂಜುನಾಥ್, ನಟರಾಜು, ಶಿವರಾಜು, ಪೃಥ್ವಿರಾಜ್, ಪ್ರಧಾನ ನಾಗರಾಜು, ಕಾರ್ಯದರ್ಶಿಗಳಾದ ಎಂ.ಎಸ್.ಚಂದ್ರಶೇಖರ್, ಪ್ರದೀಪ್‌ಕುಮಾರ್ ದೀಕ್ಷಿತ್, ಶಿವು, ಗಣೇಶ್, ಚಂದ್ರಶೇಖರ್ ರಾವ್, ಖಜಾಂಚಿ ಚಿಕ್ಕರಾಜು, ಗೌರವ ಸಲಹೆಗಾರರಾದ ಗಣೇಶ್ ದೀಕ್ಷಿತ್, ಎಸ್.ಬಾಲಸುಬ್ರಹ್ಮಣ್ಯ, ಸುರೇಶ್‌ನಾಯಕ, ಸುಂದರ್ ರಾಜ್ ಇತರರು ಭಾಗವಹಿಸಿದ್ದರು.

ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಬೇಗೂರು(ಗುಂಡ್ಲುಪೇಟೆ), ಸೆ.1– ಸಮೀಪದ ಗರಗನಹಳ್ಳಿ ಗೇಟ್ ಬಳಿ ರಾಷ್ಟ್ರೀಯ ಹೆದ್ದಾರಿ (766)ಯಲ್ಲಿ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವಿಗೀಡಾದ ಘಟನೆ ಬುಧವಾರ ರಾತ್ರಿ ನಡೆದಿದೆ.

ಮೈಸೂರು ಕಡೆಯಿಂದ ಗುಂಡ್ಲುಪೇಟೆಗೆ ತೆರಳುತ್ತಿದ್ದ ಬೈಕ್ ಸವಾರ ಗುಂಡ್ಲುಪೇಟೆಯ ನಿವಾಸಿ ಕಾಶಿ ಆರಾಧ್ಯ (29) ಗರಗನಹಳ್ಳಿ ಗೇಟ್ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವೀಗಿಡಾಗಿದ್ದಾನೆ. ಈ ಬಗ್ಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ

ಶುಕ್ರವಾರ 2 ಸೆಪ್ಟೆಂಬರ್ 2022



ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಐದು ದಿನ

ಕೈಗಾರಿಕಾ ದಸರಾ ಆಯೋಜನೆ


●ಉದ್ಯಮ ವಲಯದ ಬೆಳವಣಿಗೆ, ನವೋದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಸಹಕಾರಿ ●ಕೈಗಾರಿಕಾ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ, ಪ್ರದರ್ಶನಕ್ಕೆ ಅವಕಾಶ ●ಎರಡು ದಿನಗಳ ಕೈಗಾರಿಕಾ ಪ್ರವಾಸಕ್ಕೆ ವ್ಯವಸ್ಥೆ

ಮೈಸೂರು, ಸೆ.1(ಜಿಎ)– ಈ ಬಾರಿಯ ದಸರಾ ಮಹೋತ್ಸವದಲ್ಲಿ ಮೊಟ್ಟ ಮೊದಲ ಬಾರಿಗೆ ಐದು ದಿನಗಳ ಕೈಗಾರಿಕಾ ದಸರಾ ಏರ್ಪಡಿಸಲಾಗುತ್ತಿದ್ದು, ಕೈಗಾರಿಕೆ ಮತ್ತು ಉದ್ಯಮ ವಲಯದ ಬೆಳವಣಿಗೆಗೆ ಹಾಗೂ ನವೋದ್ಯಮಿಗಳಿಗೆ ಇದು ಪ್ರೋತ್ಸಾಹದಾಯಕವಾಗಲಿದೆ.

ಕೊರೊನಾ ಸಂಕಷ್ಟದ ನಂತರ ಈ ಬಾರಿ ನಡೆಯುತ್ತಿರುವ ಅದ್ಧೂರಿ ದಸರಾ ಮಹೋತ್ಸವದಲ್ಲಿ ಆಹಾರ ದಸರಾ, ಗ್ರಾಮೀಣ ದಸರಾ, ರೈತ ದಸರಾ ಮಾದರಿಯಲ್ಲಿ ಕೈಗಾರಿಕಾ ಮತ್ತು ಉದ್ಯಮ ವಲಯದ ಬೆಳವಣಿಗೆಗೆ ಪೂರಕವಾಗಿ ಕೈಗಾರಿಕಾ ದಸರಾ ಆಯೋಜಿಸಬೇಕೆಂದು ಮೈಸೂರು ಕೈಗಾರಿಕೆಗಳ ಸಂಘ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿತ್ತು.

ಸಂಘದ ಮನವಿಯನ್ನು ಪುರಸ್ಕರಿಸಿರುವ ಜಿಲ್ಲಾಡಳಿತ ಇದೇ ಮೊದಲ ಬಾರಿ ದಸರಾ ಮಹೋತ್ಸವದಲ್ಲಿ ಕೈಗಾರಿಕಾ ದಸರಾ ಆಯೋಜಿಸಲು ಮುಂದಾಗಿದ್ದು, ನಿನ್ನೆಯಷ್ಟೇ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆದ ದಸರಾ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಎಸ್.ಮಂಜುನಾಥಸ್ವಾಮಿ ಈ ಬಾರಿ ಕೈಗಾರಿಕಾ ದಸರಾ, ಆರೋಗ್ಯ ಮೇಳ ಆಯೋಜಿಸುವ ಚಿಂತನೆ ಇದೆ. ಆರೋಗ್ಯ ಸಂಬಂಧಿತ ವಸ್ತುಪ್ರದರ್ಶನ ಆಯೋಜಿಸಲು ಜಿಲ್ಲಾ ಆರೋಗ್ಯ ಕಲ್ಯಾಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಹಾಗೆಯೇ ನಾಲ್ಕು ದಿನ ಕೈಗಾರಿಕಾ ದಸರಾ ಆಚರಣೆಗೆ ಕೈಗಾರಿಕಾ ಸಂಘದವರು ಮನವಿ ಮಾಡಿದ್ದಾರೆ. ಈಗಾಗಲೇ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಮಾಹಿತಿ ನೀಡಿದ್ದು, ಅಲ್ಲಿ ಎಲ್ಲಾ ರೀತಿಯ ತಯಾರಿ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದರು.

ಕೈಗಾರಿಕಾ ಬಜಾರ್: ಮೈಸೂರು ಭಾಗದಲ್ಲಿ ತಯಾರಾಗುವ ಉತ್ಪನ್ನಗಳನ್ನು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಉತ್ಪಾದಕರಿಂದ ಗ್ರಾಹಕರಿಗೆ ನೇರ ಮಾರಾಟ ಮತ್ತು ಪ್ರದರ್ಶನಕ್ಕೆ ಕೈಗಾರಿಕಾ ಬಜಾರ್‌ನಲ್ಲಿ ಅವಕಾಶ ಕಲ್ಪಿಸಬಹುದಾಗಿದ್ದು, ವಸ್ತು ಪ್ರದರ್ಶನದಲ್ಲಿಯೇ ಸೆ.26ರಿಂದ ಕೈಗಾರಿಕಾ ಬಜಾರ್ ಆರಂಭವಾಗಿ 90 ದಿನಗಳ ಕಾಲ ನಡೆಯಲಿದೆ. 2003–04ರ ಅವಧಿಯಲ್ಲಿ ಮೈಸೂರು ಕೈಗಾರಿಕೆಗಳ ಸಂಘ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಆಯೋಜಿಸಿದ್ದ ಕೈಗಾರಿಕಾ ಬಜಾರ್ ಯಶಸ್ಸು ಕಂಡಿತ್ತು.



ಕೈಗಾರಿಕಾ ಪ್ರವಾಸ : ಟಿಷ್ಯೂ ಪೇಪರ್‌ನಿಂದ–ನೋಟ್ ಮುದ್ರಣ ಪೇಪರ್, ದ್ವಿಚಕ್ರ ವಾಹನ– ರಕ್ಷಣಾ ವಲಯದ ಭಾರೀ ವಾಹನಗಳ ಇಂಜಿನ್ ಮತ್ತು ಬಿಡಿ ಭಾಗಗಳ ತಯಾರಿಕಾ ಘಟಕ, ಸೂಕ್ಷ್ಮ ಕೈಗಾರಿಕೆ, ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ಆಹಾರೋತ್ಪನ್ನಗಳು, ಎಲೆಕ್ಟ್ರಾನಿಕ್, ಸಿದ್ಧಪಡಿಸಿದ ಉಡುಪುಗಳು, ಮಾಹಿತಿ ತಂತ್ರಜ್ಞಾನ ಸೇರಿ ದಂತೆ 2500ಕ್ಕೂ ಹೆಚ್ಚು ವಿವಿಧ ಉತ್ಪನ್ನಗಳನ್ನು ತಯಾರಿಸುವ, ಕೈಗಾರಿಕಾ ಪ್ರದೇಶವು ಅತೀ ದೊಡ್ಡ ಪ್ರದೇಶದಲ್ಲಿದ್ದು, ಅದರ ವೀಕ್ಷಣೆಯ ಕೈಗಾರಿಕಾ ಪ್ರವಾಸವನ್ನು ಸೆ.29 ಮತ್ತು 30ರಂದು ಎರಡು ದಿನಗಳು ಏರ್ಪಡಿಸಲಾಗಿದೆ. ಜಗತ್ಪ್ರಸಿದ್ಧವಾದ ಮೈಸೂರು ಸಿಲ್ಕ್ ಫ್ಯಾಕ್ಟರಿ, ಮೈಸೂರು ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ, ಮೈಸೂರು ಪೇಂಟ್ಸ್, ಸಿದ್ಧಪಡಿಸಿದ ಉಡುಪುಗಳು, ಪಾದರಕ್ಷೆಗಳ ಕಾರ್ಖಾನೆಗಳ ವೀಕ್ಷಿಸಬಹುದಾಗಿದೆ.

ಇದೇ ಮೊಟ್ಟ ಮೊದಲ ಬಾರಿ ಮೈಸೂರು ದಸರಾ ಪ್ರಯುಕ್ತ 5 ದಿನಗಳ ಕೈಗಾರಿಕಾ ದಸರಾವನ್ನು ಆಯೋಜಿಸುತ್ತಿದ್ದು, ಸೆ. 26 ರಿಂದ ಸೆ. 30ರವರೆಗೂ ರಫ್ತು, ಹಣಕಾಸು, ಮಹಿಳಾ ಕೈಗಾರಿಕೋದ್ಯಮಿ, ಎಸ್‌ಸಿ–ಎಸ್‌ಟಿ ಉದ್ಯಮಿಗಳು ಸೇರಿದಂತೆ 5 ವಿಷಯಗಳಡಿ ಕೈಗಾರಿಕಾ ದಸರಾ ನಡೆಯಲಿದೆ. ಇದೊಂದು ಸಂಪೂರ್ಣ ಶೈಕ್ಷಣಿಕ ಕಾರ್ಯಕ್ರಮವಾಗಿದೆ. ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಬಿಎಂಇಎಲ್, ಆರ್‌ಎಂಪಿ ಸೇರಿದಂತೆ ಬಹುದೊಡ್ಡ ಕಂಪನಿಗಳು ಭಾಗವಹಿಸಿ, ಸಣ್ಣ ಸಣ್ಣ ಉದ್ಯಮಿಗಳಿಗೆ ರಫ್ತಿನ ಬಗ್ಗೆ ತಿಳಿಸಲಿದ್ದಾರೆ. ಒಟ್ಟಾರೆ ವಿಶೇಷ ಅನುಭವ ನೀಡಲಿದೆ.



–ಟಿ.ದಿನೇಶ್,
ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ

ಕೈಗಾರಿಕಾ ವಿಚಾರ ಸಂಕಿರಣ: ನವೋದ್ಯಮಿಗಳಿಗೆ ಸಹಕಾರಿಯಾಗಲು ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸೆ.26 ಮತ್ತು 27 ಎರಡು ದಿನ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಇಲ್ಲಿ 15ಕ್ಕೂ ಹೆಚ್ಚು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಇತರೆ ಬ್ಯಾಂಕ್‌ಗಳು ಭಾಗವಹಿಸಿ, ಉದ್ಯಮಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೈಗಾರಿಕಾ ನೀತಿ, ಪ್ರೋತ್ಸಾಹ ಯೋಜನೆಗಳ ಬಗ್ಗೆ ತಿಳಿಸಲಿದ್ದಾರೆ.

ವೆಂಡರ್ ಡೆವಲಪ್‌ಮೆಂಟ್ ಪ್ರೋಗ್ರಾಂ : ಖರೀದಿದಾರರ ಮತ್ತು ಉತ್ಪಾದಕರ ಸಮಾವೇಶ, ಪ್ರದರ್ಶನ ಮತ್ತು ಸಭೆಗಳು ಹೆಬ್ಬಾಳಿನ ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ಛೇಂಬರ್ ಆಫ್ ಕಾಮರ್ಸ್ & ಇಂಡಸ್ಟ್ರಿ ಆವರಣದಲ್ಲಿ ಸೆ.28 ರಂದು ನಡೆಯಲಿದೆ. ಈ ಕೈಗಾರಿಕಾ ದಸರಾ ನವೋದ್ಯಮಿಗಳಿಗೆ ಸಂಪೂರ್ಣ ಪೂರಕವಾಗಲಿದ್ದು, ಜಿಲ್ಲೆಯ ಆರ್ಥಿಕ ಪ್ರಗತಿ ಮತ್ತು ಬಂಡವಾಳ ಹೂಡಿಕೆದಾರರ ಆಕರ್ಷಣೆಗೆ ಸಹಕಾರಿಯಾಗುವ ನಿರೀಕ್ಷೆ ಇದೆ ಎನ್ನಲಾಗುತ್ತಿದೆ.

ಗಣೇಶ ಚತುರ್ಥಿಯಂದು ದಸರಾ ಗಜಪಡೆಗೆ ವಿಶೇಷ ಪೂಜೆ



ಮೈಸೂರು,ಸೆ.1(ಎಂಟಿವೈ)– ಮೈಸೂರು ಅರಮನೆಯ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆಗೆ ಗಣಪತಿ ಹಬ್ಬದ ಅಂಗವಾಗಿ ಬುಧವಾರ ಪೂಜೆ ಸಲ್ಲಿಸಿ, ಮೋದಕ, ಕಡುಬು ಸೇರಿದಂತೆ ಪಂಚಫಲ ಸಮರ್ಪಿಸಲಾಯಿತು.

ಅರಮನೆ ಆವರಣದಲ್ಲಿ ಕೋಡಿ ಸೋಮೇಶ್ವರ ದೇವಾಲಯದ ಬಳಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಲ್ಲಾ 9 ಆನೆಗಳನ್ನು ಪೂರ್ವಾಭಿಮುಖವಾಗಿ ನಿಲ್ಲಿಸಿ, ಅರಣ್ಯ ಇಲಾಖೆ ವತಿಯಿಂದ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಪೂಜೆ ಸಲ್ಲಿಸಿದರು. ಬೆಳಗ್ಗೆ 11 ಗಂಟೆಗೆ ಎಲ್ಲಾ ಆನೆಗಳಿಗೂ ಪಾದತೊಳೆದು, ಅರಿಶಿನ, ಕುಂಕುಮ, ಅಕ್ಷತೆ, ಗಂಧ, ಪುಷ್ಪ ಇಟ್ಟು ಪೂಜೆ ಸಲ್ಲಿಸಿ, ಬಳಿಕ ಎಪಿಸಿಸಿಎಫ್ ಜಗತ್‌ರಾಮ್, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲ ಕರಿಕಾಳನ್, ಆರ್‌ಎಫ್ ಸಂತೋಷ್ ಹೂಗಾರ್ ಇನ್ನಿತರರು ಆನೆಗಳಿಗೆ ಪುಷ್ಪಾರ್ಚನೆ ಮಾಡಿ ಇಲಾಖೆ ವತಿಯಿಂದ ಗೌರವ ಸಮರ್ಪಿಸಿದರು.

ನಂತರ ಎಲ್ಲಾ ಆನೆಗಳಿಗೂ ಚಕ್ಕಲಿ, ಕೋಡುಬಳೆ, ನಿಪ್ಪಟ್ಟು, ಕರ್ಜಿಕಾಯಿ, ಕಬ್ಬು, ಬೆಲ್ಲ, ಕೊಬ್ಬರಿ ಸೇರಿದಂತೆ ವಿವಿಧ ಭಕ್ಷಗಳನ್ನು ನೀಡಲಾಯಿತು. ಇದೇ ವೇಳೆ ಅರಮನೆಗೆ ಆಗಮಿಸಿದ್ದ ಕೆಲ ಪ್ರವಾಸಿಗರೂ, ಸಾರ್ವಜನಿಕರು ಗಣೇಶ ಚತುರ್ಥಿ ಅಂಗವಾಗಿ ದಸರಾ ಗಜಪಡೆಗೆ ಪುಷ್ಪಾರ್ಚನೆ ಮಾಡಿ, ನಮಿಸಿದರು. ಇದೇ ವೇಳೆ ಅರ್ಚಕ ಎಸ್.ವಿ. ಪ್ರಹ್ಲಾದರಾವ್ ಮಾತನಾಡಿ, ಹಿಂದೂ ಸಂಪ್ರದಾಯದಲ್ಲಿ ಆನೆಗಳನ್ನು ಪ್ರತ್ಯಕ್ಷ ಗಣಪತಿ ಎಂದು ಭಾವಿಸಲಾಗುತ್ತದೆ. ಪ್ರತಿ ಗಣಪತಿ ಹಬ್ಬದಂದು ದಸರಾ ಗಜಪಡೆಗೆ ಪೂಜೆ ಸಲ್ಲಿಸುವ ಸಂಪ್ರದಾಯವಿದ್ದು, ಈ ಬಾರಿಯೂ ಪಂಚಫಲ ಅರ್ಪಿಸಿ ಆನೆಗಳಿಗೆ ಪೂಜೆ ಸಲ್ಲಿಸಲಾಗಿದೆ. ನಮ್ಮ ಸಂಪ್ರದಾಯದಲ್ಲಿ ಮಹಾವಿಷ್ಣುವಿಗೆ ವಿವಿಧ ಪುಷ್ಪಗಳಿಂದ, ಶಿವನಿಗೆ ಬಗೆ ಬಗೆಯ ಅಭಿಷೇಕ ಮಾಡಿ ಪೂಜೆ ಸಲ್ಲಿಸಲಾಗುತ್ತದೆ. ಆದರೆ, ಗಣಪತಿಗೆ ವಿವಿಧ ಬಗೆಯ ಭಕ್ಷಗಳನ್ನು ನೈವೇದ್ಯಕ್ಕಿಟ್ಟು ಪೂಜೆ ಸಲ್ಲಿಸಲಾಗುತ್ತದೆ. ಅದರಂತೆ ದಸರಾ ಗಜಪಡೆಗೆ ವಿವಿಧ ತಿನಿಸನ್ನು ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ದಸರಾ ಗಜಪಡೆಯ ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಹಲವೆಡೆ ನಿರ್ಮಾಣವಾಗಿವೆ

ಅಪಾಯಕಾರಿ ಗುಂಡಿಗಳು

●ಕೆಆರ್ ಸರ್ಕಲ್‌ನಲ್ಲಿ ಬಲಿಗಾಗಿ ಕಾದಿವೆ ಫುಟ್‌ಪಾತ್ ಸ್ಲ್ಯಾಬ್ ಕಂದಕಗಳು
●ಫೈವ್‌ಲೈಟ್ ಸರ್ಕಲ್, ಸಬರ್ಬನ್ ಬಸ್‌ಸ್ಟ್ಯಾಂಡ್ ಎದುರು ರಸ್ತೆಯೂ ಗುಂಡಿಮಯ



ಮೈಸೂರು, ಸೆ.1(ಆರ್‌ಕೆ)–ಎರಡು ವರ್ಷಗಳ ಕೋವಿಡ್–19 ಸಂಕಷ್ಟ ಪರಿಸ್ಥಿತಿ ನಂತರ ಈ ಬಾರಿ ಐತಿಹಾಸಿಕ ಮೈಸೂರು ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿದೆ. ಮೈಸೂರು ನಗರದಾದ್ಯಂತ 100 ಕಿಮೀಗಿಂತ ಹೆಚ್ಚು ರಸ್ತೆ, ಸರ್ಕಲ್‌ಗಳಲ್ಲಿ ವಿದ್ಯುದ್ದೀಪಾಲಂಕಾರ, ಅರಮನೆ ದೀಪಾಲಂಕಾರ, ದಸರಾ ವಸ್ತುಪ್ರದರ್ಶನ, ಆಹಾರ ಮೇಳ, ರೈತ ದಸರಾ, ಯುವ ದಸರಾ, ದಸರಾ ಕ್ರೀಡಾಕೂಟ, ಕುಸ್ತಿ, ಚಲನಚಿತ್ರೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಹತ್ತು ಹಲವು ಚಟುವಟಿಕೆಗಳಿಗೆ ಸಾಂಸ್ಕೃತಿಕ ನಗರಿ ಸಜ್ಜುಗೊಳ್ಳುತ್ತಿದೆ.

ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅತೀ ಹೆಚ್ಚು ಪ್ರಚಾರ ನಡೆಸಿ ವಿಶ್ವದ ನಾನಾ ದೇಶಗಳಿಂದ ಪ್ರವಾಸಿಗರನ್ನು ಸೆಳೆಯಲು ಭರದ ತಯಾರಿ ನಡೆಯುತ್ತಿದೆ. ಈಗಾಗಲೇ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಮೈಸೂರಿಗೆ ಪ್ರವಾಸಿಗರ ದಂಡೇ ಹರಿಯುತ್ತಿರುವುದರಿಂದ ಅರಮನೆ ಸುತ್ತಲಿನ ಪ್ರದೇಶ, ಹಾರ್ಡಿಂಜ್ ಸರ್ಕಲ್, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರೋಡ್, ಅಶೋಕ ರೋಡ್, ಧನ್ವಂತರಿ ರಸ್ತೆ, ಜೆಎಲ್‌ಬಿ ರಸ್ತೆ, ಚಾಮುಂಡಿಬೆಟ್ಟದ ರಸ್ತೆ, ಲಲಿತಮಹಲ್ ರಸ್ತೆ, ಬಿಎನ್ ರೋಡ್ ಸೇರಿದಂತೆ ಮೈಸೂರಿನ ಹೃದಯ ಭಾಗದಲ್ಲಿ ಕಾಲಿಡಲೂ ಸ್ಥಳವಿಲ್ಲದಂತೆ ಜನಜಂಗುಳಿ, ವಾಹನ ದಟ್ಟಣೆ ಹೆಚ್ಚಾಗಿ ಸಂಜೆ, ರಾತ್ರಿ ವೇಳೆ ಅಲ್ಲಲ್ಲಿ ಟ್ರಾಫಿಕ್ ಜಾಮ್ ಆಗಿ ಸಂಚಾರ ಪೊಲೀಸರು ಹೆಣಗಾಡುತ್ತಿದ್ದಾರೆ.

ಮೈಸೂರಿನ ಹೃದಯ ಭಾಗವೂ ಆದ ಪ್ರತಿಷ್ಠಿತ ವೃತ್ತ ಕೆಆರ್ ಸರ್ಕಲ್‌ನ ಸಿಟಿ ಬಸ್‌ಸ್ಟ್ಯಾಂಡ್ ಬಿಲ್ಡಿಂಗ್ ಬಳಿ ಹಾಗೂ ಡಾ.ರಾಜ್‌ಕುಮಾರ್ ಪುತ್ಥಳಿ ಇರುವಲ್ಲಿ (ಟ್ರಿಣ್ ಟ್ರಿಣ್ ಸೈಕಲ್ ಡಾಕ್ ಬಳಿ) ಫುಟ್‌ಪಾತ್‌ಗೆ ಅಳವಡಿಸಿರುವ ಸ್ಲ್ಯಾಬ್ ಕುಸಿದು, ಎರಡು ಕಡೆ ಅಪಾಯಕಾರಿ ಗುಂಡಿ ನಿರ್ಮಾಣವಾಗಿದೆ. ಪ್ರತೀ ದಿನ ವಿದ್ಯಾರ್ಥಿಗಳು, ಗ್ರಾಹಕರು, ಸಾರ್ವಜನಿಕರು, ಪ್ರವಾಸಿಗರು ಸೇರಿದಂತೆ ಸಾವಿರಾರು ಮಂದಿ ಇಲ್ಲಿ ಹಾದು ಹೋಗುತ್ತಾರೆ. ಈ ರೀತಿಯ ಕಂದಕ ಉಂಟಾಗಿ ತಿಂಗಳು ಕಳೆದರೂ ಮೈಸೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಸರಿಪಡಿಸದೇ ಇರುವುದು ಅಪಾಯಕ್ಕೆ ಆಹ್ವಾನ ನೀಡುವಂತಿದೆ.

ವಯಸ್ಸಾದವರು, ರೋಗಿಗಳು, ಮಹಿಳೆಯರು, ಮಕ್ಕಳು ಸ್ವಲ್ಪ ಯಾಮಾರಿದರೆ ಸಾಕು, ಗುಂಡಿಗೆ ಬೀಳುತ್ತಾರೆ. ಇನ್ನು ರಾತ್ರಿ ವೇಳೆ ಅಪಾಯ ಸಂಭವಿಸಬಹುದಾದ ಸಾಧ್ಯತೆ ಹೆಚ್ಚಿದೆ. ಪ್ರತೀದಿನ ಸಾವಿರಾರು ಮಂದಿ ಪಾದಚಾರಿಗಳು ಓಡಾಡುವ ಕೆಆರ್ ಸರ್ಕಲ್ ಮೂಲಕವೇ ಪಾಲಿಕೆ ಅಧಿಕಾರಿಗಳು ಕಚೇರಿಗೆ ಬಂದು, ಹೋಗುತ್ತಿದ್ದಾರೆ. ಈಗಂತೂ ದಸರಾ ಗಜಪಡೆಗೆ ನಿತ್ಯ ಭಾರ ಹೊರುವ ತಾಲೀಮು ನಡೆಯುತ್ತದೆ. ಅವುಗಳೊಂದಿಗೆ ಅರಣ್ಯ ಇಲಾಖೆ, ಮಹಾನಗರ ಪಾಲಿಕೆ, ಸಿವಿಲ್ ಪೊಲೀಸ್ ಹಾಗೂ ಸಂಚಾರ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸಹ ಸಾಗುತ್ತಾರೆ. ಏನಾದರೂ ಅನಾಹುತ ಸಂಭವಿಸಿದರೆ ಯಾರು ಹೊಣೆ?



ಗ್ರಾಮಾಂತರ ಬಸ್ ನಿಲ್ದಾಣದೆದುರು ಮಹಾರಾಜ ಕಾಂಪ್ಲೆಕ್ಸ್ ಬಳಿ ಮಳೆ ನೀರು ಚರಂಡಿಗೆ ಸರಿಯಾಗಿ ಸಂಪರ್ಕ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆಯಲ್ಲಿ ನೀರು ನಿಂತು ಆಳುದ್ದ ಗುಂಡಿಗಳಾಗಿವೆ. ಸಮೀಪದ ಫೈವ್‌ಲೈಟ್ ಸರ್ಕಲ್ ಸಮೀಪ ಬಸ್‌ಸ್ಟ್ಯಾಂಡ್ ಕಡೆಗೆ ಬರುವ ರಸ್ತೆಯಲ್ಲೂ ಗುಂಡಿಗಳು ನಿರ್ಮಾಣವಾಗಿವೆ. ಇಲ್ಲಿ ಪ್ರತಿನಿತ್ಯ ನೂರಾರು ಸಾರಿಗೆ ಬಸ್‌ಗಳು ಸಂಚರಿಸುತ್ತವೆ. ಅಲ್ಲಿ ಅಪಘಾತಕ್ಕೆ ಆಹ್ವಾನ ನೀಡಿದಂತಾಗಿದೆ. ಆಟೋ, ದ್ವಿಚಕ್ರ ವಾಹನ ಅಥವಾ ಸೈಕಲ್ ಸವಾರರು ಈ ಗುಂಡಿಗಳಿಗೆ ಆಯತಪ್ಪಿ ಬಿದ್ದಲ್ಲಿ ಒಂದರ ಹಿಂದೆ ಒಂದು ಸಾಗುವ ಕೆಎಸ್‌ಆರ್‌ಟಿಸಿ ಬಸ್‌ಗಳು ಅವರ ಮೇಲೆ ಹರಿದು ಪ್ರಾಣಾಪಾಯ ಸಂಭವಿಸುವ ಸಾಧ್ಯತೆ ಇದೆ. ಮಳೆ ನೀರು ತುಂಬಿಕೊಂಡು ಗುಂಡಿಗಳು ಕಾಣದಿರುವುದರಿಂದ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿರುವ ಘಟನೆಗಳು ಸಾಕಷ್ಟು ನಡೆದಿವೆ.

ಕೆಆರ್ ಸರ್ಕಲ್‌ನಲ್ಲಿ ಫುಟ್‌ಪಾತ್ ಮೇಲಿನ ಸ್ಲ್ಯಾಬ್ ಕುಸಿದಿರುವುದು, ಬಸ್‌ಸ್ಟ್ಯಾಂಡ್ ಮುಂದೆ ಬಿಎನ್ ರಸ್ತೆಯಲ್ಲಿನ ಗುಂಡಿ ಸರಿಪಡಿಸುವಂತೆ ದೇವರಾಜ ಸಂಚಾರ ಠಾಣೆ ಪೊಲೀಸರು ಹಲವು ಬಾರಿ ಪಾಲಿಕೆಗೆ ಪತ್ರ ಬರೆದು ಮನವಿ ಮಾಡಿದ್ದರು. ಈಗ ದಸರಾ ಸಮೀಪಿಸುತ್ತಿದ್ದರೂ ಗುಂಡಿ ಮುಚ್ಚಿಸುವತ್ತ ಗಮನಹರಿಸಿಲ್ಲ. ಯಾರನ್ನಾದರೂ ಬಲಿ ತೆಗೆದುಕೊಂಡ ಮೇಲೆ ಅಧಿಕಾರಿಗಳು ಎಚ್ಚೆತ್ತುಕೊಳ್ಳುವರೇ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೀಗ ನಿರಂತರವಾಗಿ ಮಳೆ ಸುರಿಯುತ್ತಿದೆ. ದಸರಾ ಉದ್ಘಾಟನೆಗೆ ಕೇವಲ ಒಂದೇ ತಿಂಗಳು ಬಾಕಿ ಉಳಿದಿದೆ. ಇತ್ತ ಕಾಮಗಾರಿ ಮಾಡಲು ಮಳೆ ಅಡ್ಡಿಯಾಗುತ್ತಿದೆ. ಅದ್ಧೂರಿ ದಸರಾ ಆಚರಿಸುವುದಾಗಿ ಹೇಳಲಾಗುತ್ತಿದೆ. ಇನ್ನೂ ಸಿವಿಲ್ ಕಾಮಗಾರಿಗಳೇ ಆರಂಭಗೊಂಡಿಲ್ಲ. ದಸರಾ ಒಂದು ವಾರ ಇದೆ ಎನ್ನುವಾಗ ತರಾತುರಿಯಲ್ಲಿ ಕೆಲಸ ಆರಂಭಿಸಿದಲ್ಲಿ ಅದು ಗುಣಮಟ್ಟದ ಕಾಮಗಾರಿಯಾಗಿರುತ್ತದೆಯೇ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.



ಜೋಕೆ, ಹಿಂದೆ ಮುಂದೆ ನೋಡದೇ ಒಳ ಹೋದರೆ ಮೂರ್ಛೆ ಹೋದಿರಿ...!?

ಪ್ರತಿಷ್ಠಿತ ರಾಮಕೃಷ್ಣನಗರ ಉದ್ಯಾನದಲ್ಲಿನ ಶೌಚಾಲಯವಿದು!

ಮೈಸೂರು, ಸೆ.1(ಎಂಕೆ)–ಮೈಸೂರಿನ ಪ್ರತಿಷ್ಠಿತ ರಾಮಕೃಷ್ಣನಗರದಲ್ಲಿರುವ ಸಾರ್ವಜನಿಕ ಶೌಚಾಲಯ ಪುಂಡರ ಆವಾಸ ಸ್ಥಾನವಾಗಿದ್ದು, ಇದೊಂದು ರೀತಿ ಮದ್ಯದ ಪ್ಯಾಕೆಟ್‌ಗಳ ಗೋಡೌನ್ ಆಗಿ, ಗಬ್ಬೆದ್ದು ನಾರುತ್ತಿದೆ.



ರಾಮಕೃಷ್ಣನಗರದ 'ಐ' ಬ್ಲಾಕ್‌ನಲ್ಲಿರುವ ರಾಮಕೃಷ್ಣ ಪರಮಹಂಸ ಉದ್ಯಾನವನದಲ್ಲಿನ ಸಾರ್ವಜನಿಕ ಗ್ರಂಥಾಲಯಕ್ಕೆ ಹೊಂದಿಕೊಂಡಂತಿರುವ ಈ ಶೌಚಾಲಯದಲ್ಲಿ ತುಂಬಿರುವ ಮದ್ಯದ ಪ್ಯಾಕೆಟ್‌ಗಳು ಹಾಗೂ ನೀರಿಲ್ಲದೆ ಭಾರೀ ಪ್ರಮಾಣದ ದುರ್ವಾಸನೆ ಬೀರುತ್ತಿದೆ. ಪ್ರತಿನಿತ್ಯ ಉದ್ಯಾನವನಕ್ಕೆ ಬರುವ ವಾಯುವಿಹಾರಿಗಳು ಹಾಗೂ ಗ್ರಂಥಾಲಯಕ್ಕೆ ಬರುವ ಓದುಗರು ಮೂಗು ಮುಚ್ಚಿಕೊಂಡು ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಲಕ್ಷಾಂತರ ರೂ. ಖರ್ಚು ಮಾಡಿ ಸಾರ್ವಜನಿಕರ ಅನುಕೂಲತೆಗಾಗಿ ನಿರ್ಮಾಣ ಮಾಡಲಾಗಿದ್ದ ಶೌಚಾಲಯ ಸಂಪೂರ್ಣವಾಗಿ ಹಾಳಾಗಿದ್ದು, ಶೌಚಾಲಯದ ಹತ್ತಿರ ಹೋಗುವುದಕ್ಕೂ ಸಾಧ್ಯವಾಗದಂತಾಗಿದೆ. ಕುಡಿದು ಬಿಸಾಡಿದ ಮದ್ಯದ ಪ್ಯಾಕೆಟ್‌ಗಳ ನಡುವೆ ಮಲ ಮಿಶ್ರಿತ ಕೊಳಚೆ ನೀರು ನಿಂತಿರುವುದರಿಂದ ಹೇಸಿಗೆ ಪರಿಸ್ಥಿತಿ ಉಂಟಾಗಿದೆ. ಪ್ರತಿಷ್ಠಿತ ಬಡಾವಣೆಯಲ್ಲಿಯೇ ಈ ರೀತಿಯ ಅನೈರ್ಮಲ್ಯತೆ ಇದ್ದರೆ ಇನ್ನೂ ಬೇರೆ ಬಡಾವಣೆಗಳ ಸ್ಥಿತಿಯೇನು? ಹಾಳಾಗಿರುವ ಶೌಚಾಲಯ ನಗರಪಾಲಿಕೆ ಅಧಿಕಾರಿ, ಸಿಬ್ಬಂದಿಗಳ ಕಾರ್ಯ ವೈಖರಿಗಿಡಿದ ಕನ್ನಡಿಯಂತಿದೆ ಎಂದು ಸ್ಥಳೀಯ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೊಳೆ ತುಂಬಿದರೆ ಇವರಿಗೆ ಸ್ಮಶಾನವಿಲ್ಲ!

ಮತ್ತೇನು ಮಾಡೋದು; ಗ್ರಾಪಂ ಆವರಣದಲ್ಲೇ ಶವಸಂಸ್ಕಾರ

●ಮಾಂಬಳ್ಳಿ ಗ್ರಾಮಸ್ಥರ ದುಸ್ಥಿತಿ ●ತಡೆಯಲು ಬಂದ ಅಧಿಕಾರಿಗಳಿಗೆ ಸೊಪ್ಪು ಹಾಕದ ಜನ
●ಇಂತಹ ಅಮಾನವೀಯ ಸ್ಥಿತಿಯ ಬಗ್ಗೆ ಕಿಂಚಿತ್ತು ತಲೆಕೆಡಿಸಿಕೊಳ್ಳದ ಜನಪ್ರತಿನಿಧಿಗಳು, ಅಧಿಕಾರಿಗಳು



ಯಳಂದೂರು, ಸೆ.1– ನಿಲ್ಲದ ಮಳೆಯ ನಡುವೆ ಸೇತುವೆ ಇಲ್ಲದೆ ನದಿ ದಾಟುವುದಾದರೂ ಹೇಗೆ? ಜಾಗ ಇದ್ದರೆ ತೋರಿಸಿ ಅಲ್ಲಿಯೇ ಶವಸಂಸ್ಕಾರ ಮಾಡುತ್ತೇವೆ... ಎಂದು ಪಟ್ಟು ಹಿಡಿದ ಗ್ರಾಮಸ್ಥರು, ಕಡೆಗೂ ಗ್ರಾಮ ಪಂಚಾಯಿತಿ ಆವರಣದಲ್ಲೇ ಅಂತಿಮ ವಿಧಿ–ವಿಧಾನ ನೆರವೇರಿಸಿದ್ದಾರೆ.

ಚಾಮರಾಜನಗರದ ಯಳಂದೂರಿನ ಮಾಂಬಳ್ಳಿಯಲ್ಲಿ ಎಡಬಿಡದೆ ಸುರಿಯುತ್ತಿರುವ ರಣಮಳೆಯ ನಡುವೆ ಗದ್ದಲ–ಜಟಾಪಟಿ ನಡುವೆಯೇ ಅಂತ್ಯಸಂಸ್ಕಾರ ನೆರವೇರಿದೆ. ಅನಾರೋಗ್ಯದಿಂದ ಮೃತಪಟ್ಟಿದ್ದ ಗ್ರಾಮದ ಜಯಮ್ಮ ಎಂಬುವರ ಅಂತ್ಯಕ್ರಿಯೆಯನ್ನು ಪೊಲೀಸರು ಹಾಗೂ ತಹಸೀಲ್ದಾರರ ವಿರೋಧದ ನಡುವೆಯೂ ಗ್ರಾಪಂ ಆವರಣದಲ್ಲೇ ನೆರವೇರಿಸಲಾಗಿದೆ. ಮಾಂಬಳ್ಳಿ ಗ್ರಾಮದಲ್ಲಿ ದಲಿತ ಸಮುದಾಯದವರ ಅಂತ್ಯಸಂಸ್ಕಾರಕ್ಕೆ ಹೊರವಲಯದಲ್ಲಿದ್ದ ತಾತ್ಕಾಲಿಕ ಸ್ಮಶಾನಕ್ಕೆ ಸುವರ್ಣಾವತಿ ನದಿಯನ್ನು ದಾಟಿ ಹೋಗಬೇಕು. ಆದರೆ ಈ ನದಿಗೆ ಸೇತುವೆ ಇಲ್ಲದ ಕಾರಣ ನದಿಯನ್ನೇ ಹಾಯ್ದುಕೊಂಡು ಹೋಗುವ ಪರಿಸ್ಥಿತಿ ಹಿಂದಿನಿಂದಲೂ ನಿರ್ಮಾಣವಾಗಿದೆ. ಈಗ ನದಿ ತುಂಬಿ ಹರಿಯುತ್ತಿದ್ದು, ಸ್ಮಶಾನಕ್ಕೆ ತೆರಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮಾಂಬಳ್ಳಿ ಗ್ರಾಮಸ್ಥರು ಗ್ರಾಮ ಪಂಚಾಯತಿ ಆವರಣದಲ್ಲಿ ಶವ ಸಂಸ್ಕಾರ ಮಾಡಲು ನಿರ್ಧರಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪೊಲೀಸರು ಹಾಗೂ ತಹಸೀಲ್ದಾರ್, ಗ್ರಾಪಂ ಆವರಣದಲ್ಲಿ ಶವ ಸಂಸ್ಕಾರ ಮಾಡುವಂತಿಲ್ಲ ಎಂದಿದ್ದಾರೆ. ಇದಕ್ಕೆ ಜಗ್ಗದ ಗ್ರಾಮಸ್ಥರು ಸ್ಮಶಾನವಿಲ್ಲ. ಇರುವ ತಾತ್ಕಾಲಿಕ ಸ್ಮಶಾನಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ನಮಗೆ ಸ್ಮಶಾನಕ್ಕೆ ಜಾಗಕೊಡಿ. ಇಲ್ಲವಾದರೆ ಗ್ರಾಪಂ ಆವರಣದಲ್ಲಿಯೇ ಶವ ಸಂಸ್ಕಾರ ಮಾಡುತ್ತೇವೆ ಎಂದು ಪಟ್ಟುಹಿಡಿದರು. ಗ್ರಾಮಸ್ಥರ ಮನವೊಲಿಸಲು ತಹಸೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಗಳು ಎಷ್ಟೇ ಪ್ರಯತ್ನಿಸಿದರು ಸಾಧ್ಯವಾಗಲಿಲ್ಲ. ಅಂತಿಮವಾಗಿ ಗ್ರಾಪಂ ಆವರಣದಲ್ಲೇ ಅಂತ್ಯಕ್ರಿಯೆ ನೆರವೇರಿತು.



ಇಲ್ಲದ ಸ್ಮಶಾನಕ್ಕೆಲ್ಲಿದೆ ದಾರಿ: ಮಾಂಬಳ್ಳಿ ಗ್ರಾಮದಲ್ಲಿನ ದಲಿತ ಸಮುದಾಯವರ ಶವ ಸಂಸ್ಕಾರಕ್ಕೆ ಸ್ಮಶಾನವಿಲ್ಲದೆ ಊರ ಹೊರಗೆ ತಾತ್ಕಾಲಿಕವಾಗಿ ಸ್ಮಶಾನ ಮಾಡಿಕೊಂಡಿದ್ದಾರೆ. ಇಲ್ಲಿಗೆ ಹೋಗಲು ಸಮರ್ಪಕ ರಸ್ತೆ ಇಲ್ಲದೆ ಶವ ಹೊತ್ತು ಸುವರ್ಣಾವತಿ ನದಿಯನ್ನು ದಾಟಬೇಕಿದೆ. ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಸುವರ್ಣಾವತಿ ನದಿ ತುಂಬಿ ಹರಿಯುತ್ತಿದ್ದು, ನದಿ ದಾಟುವುದಕ್ಕೂ ಸಾಧ್ಯವಾಗುತ್ತಿಲ್ಲ. ಊರಿನಲ್ಲೇ ನಮ್ಮ ಸಮುದಾಯಕ್ಕೊಂದು ಸ್ಮಶಾನ ಇದ್ದರೆ ನಾವ್ಯಾಕೆ ನದಿ ದಾಟಬೇಕು. ನದಿ ದಾಟುವಾಗ ಹೆಗಲ ಮೇಲೆ ಮೃತದೇಹ ಹೊತ್ತು, ಭಯದಲ್ಲಿಯೇ ದಾಟುವ ದುಸ್ಥಿತಿ ಗ್ರಾಮಸ್ಥರದ್ದಾಗಿದೆ.

ಒಂದನೇ ಪುಟದಿಂದ

ಮುರುಘಾ ಶರಣರ ಬಂಧನ

ಕೆಲ ನಿಮಿಷಗಳಲ್ಲೇ ಕಾವಿ ಮೇಲೆ ಬಿಳಿ ಶಾಲು ಧರಿಸಿ ಪೊಲೀಸರೊಂದಿಗೆ ಗ್ರಾಮಾಂತರ ಠಾಣೆಗೆ ತೆರಳಿದರು. ಕೆಲ ನಿಮಿಷಗಳ ನಂತರ ಪೊಲೀಸ್ ಅಧಿಕಾರಿಗಳು ಶ್ರೀಗಳನ್ನು ಡಿವೈಎಸ್‌ಪಿ ಅನಿಲ್ ಕುಮಾರ್ ಅವರ ಕಚೇರಿಗೆ ಕರೆದೊಯ್ದರು. ಭಕ್ತರು ಜಮಾಯಿಸಿ ಪ್ರತಿಭಟಿಸಬಹುದು ಎಂಬ ಹಿನ್ನೆಲೆಯಲ್ಲಿ ಮುರುಘಾ ಶರಣರನ್ನು ಅಲ್ಲಿಂದ ಅಜ್ಞಾತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿರೀಕ್ಷಣಾ ಜಾಮೀನು ವಿಚಾರಣೆ: ಚಿತ್ರದುರ್ಗ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಮುರುಘಾ ಶರಣರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಇಂದು ಬೆಳಗ್ಗೆ 11 ಗಂಟೆಗೆ ಆರಂಭವಾಯಿತು. ಈ ವೇಳೆ ಸಂತ್ರಸ್ತ ಬಾಲಕಿಯರ ಪೋಷಕರ ಅಭಿಪ್ರಾಯವನ್ನು ಪರಿಗಣಿಸಿ, ಸಂತ್ರಸ್ತರ ಪರವಾಗಿ ವಾದ ಮಂಡಿಸಲು ವಕೀಲ ಶ್ರೀನಿವಾಸ್ ಅವರಿಗೆ ನ್ಯಾಯಾಧೀಶರು ಅನುಮತಿ ನೀಡಿದರು. ನಿರೀಕ್ಷಣಾ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಂತ್ರಸ್ತೆಯರ ಪರ ವಕೀಲ ಕೋರಿದ ಕಾಲಾವಕಾಶವನ್ನು ಪುರಸ್ಕರಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿದ್ದರು. ನಿರೀಕ್ಷಣಾ ಜಾಮೀನು ಅರ್ಜಿ ಮುಂದೂಡಲ್ಪಡುತ್ತಿದ್ದಂತೆಯೇ ಪೊಲೀಸರು ಮುರುಘಾ ಶರಣರನ್ನು ಬಂಧಿಸಲು ಯೋಜನೆ ರೂಪಿಸಿಕೊಂಡಿದ್ದರು. ಮೊದಲಿಗೆ ಪ್ರಕರಣದ ಎರಡನೇ ಆರೋಪಿಯಾದ ಹಾಸ್ಟೆಲ್ ವಾರ್ಡನ್ ರಶ್ಮಿ ಅವರನ್ನು ವಶಕ್ಕೆ ಪಡೆದರು. ಇದೇ ವೇಳೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಜಿಲ್ಲಾ ಎಸ್ಪಿ ಪರಶುರಾಮ್ ಅವರು, ರಶ್ಮಿ ಅವರನ್ನು ವಿಚಾರಣೆಗಾಗಿ ಕರೆದುಕೊಂಡು ಬಂದಿದ್ದೇವೆಯೇ ಹೊರತು, ಬಂಧಿಸಿಲ್ಲ. ಅಗತ್ಯ ಬಿದ್ದರೆ ಶ್ರೀಗಳನ್ನೂ ಕೂಡ ವಿಚಾರಣೆ ಮಾಡುತ್ತೇವೆ. ಪ್ರಕರಣದ ತನಿಖೆಯ ಪ್ರಗತಿಯನ್ನು ಹೇಳಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಮುರುಘಾ ಶರಣರ ಬಂಧನಕ್ಕೂ ಮುನ್ನ ಟ್ರಯಲ್ ನೋಡಿದ್ದರು.

ರಶ್ಮಿ ಅವರನ್ನು ಪೊಲೀಸರು ವಶಕ್ಕೆ ಪಡೆದ ಪರಿಣಾಮವಾಗಿ ಯಾವುದೇ ರೀತಿಯ ತೀಕ್ಷ್ಣ ಪ್ರತಿಕ್ರಿಯೆಗಳು ಮಠದ ಭಕ್ತರ ಕಡೆಯಿಂದ ಬಂದಿರಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದ ಎಸ್ಪಿ ಅವರು, ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಹೊರ ಜಿಲ್ಲೆಗಳಿಂದಲೂ ಹೆಚ್ಚುವರಿ ಪೊಲೀಸ್ ಪಡೆಯನ್ನು ಚಿತ್ರದುರ್ಗಕ್ಕೆ ಕರೆಸಿಕೊಂಡು ಮಠದ ಸುತ್ತ ಬ್ಯಾರಿಕೇಡ್‌ಗಳನ್ನು ಹಾಕಿ ಹೆಚ್ಚಿನ ಪೊಲೀಸರನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿದ್ದರು. ಅಲ್ಲದೇ ಜಿಲ್ಲೆಯ ಹಲವಾರು ಠಾಣೆಗಳ ಇನ್ಸ್‌ಪೆಕ್ಟರ್‌ಗಳನ್ನು ಕರೆಸಿಕೊಳ್ಳಲಾಗಿತ್ತು. ಅಂತಿಮವಾಗಿ ರಾತ್ರಿ 10 ಗಂಟೆ ಸುಮಾರಿನಲ್ಲಿ ಮುರುಘಾ ಶರಣರ ಬಂಧನ ಪ್ರಕ್ರಿಯೆಯನ್ನು ಪೊಲೀಸರು ಆರಂಭಿಸಿದರು. ಇನ್ಸ್‌ಪೆಕ್ಟರ್‌ಗಳಾದ ಬಾಲಚಂದ್ರ ನಾಯಕ್ ಮತ್ತು ಸತೀಶ್ ಮಠಕ್ಕೆ ತೆರಳಿ ಪ್ರಕ್ರಿಯೆಗೆ ಚಾಲನೆ ನೀಡಿದರು. ಶ್ರೀಗಳು ಕಾವಿ ಕಳಚಿಟ್ಟು ಪೊಲೀಸರೊಂದಿಗೆ ತೆರಳುವ ಮೂಲಕ ಬಂಧನಕ್ಕೊಳಗಾದರು.

ಹಿನ್ನೆಲೆ: ಜುಲೈ 24ರಂದು ಹಾಸ್ಟೆಲ್ ತೊರೆದ ಇಬ್ಬರು ವಿದ್ಯಾರ್ಥಿನಿಯರು ಅಂದು ರಾತ್ರಿ ಬೆಂಗಳೂರಿನ ಚಿಕ್ಕಪೇಟೆ ಠಾಣೆಗೆ ತೆರಳಿದ್ದರು. ಅಲ್ಲಿನ ಪೊಲೀಸರ ಮಾಹಿತಿ ಮೇರೆಗೆ ಬೆಂಗಳೂರಿಗೆ ತೆರಳಿದ್ದ ಮಠದ ಆಡಳಿತಾಧಿಕಾರಿ ಕೆ.ಎಸ್.ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ವಿದ್ಯಾರ್ಥಿನಿಯರನ್ನು ಚಿತ್ರದುರ್ಗಗೆ ಕರೆದೊಯ್ದು ಮೂರು ದಿನ ತಮ್ಮಲ್ಲೇ ಇರಿಸಿಕೊಂಡು ಜು.27ರಂದು ಅಲ್ಲಿನ ಪೊಲೀಸರ ಸಮ್ಮುಖದಲ್ಲಿ ಪೋಷಕರ ವಶಕ್ಕೆ ಒಪ್ಪಿಸಿದ್ದರು. ಆನಂತರ ಈ ವಿದ್ಯಾರ್ಥಿನಿಯರು ಮೈಸೂರಿನ ಒಡನಾಡಿ ಸೇವಾ ಸಂಸ್ಥೆಗೆ ಆಗಮಿಸಿದ್ದು, ಮೈಸೂರು ಮಕ್ಕಳ ರಕ್ಷಣಾ ಸಮಿತಿ ಮುಂದೆ ಬಾಲಕಿಯರನ್ನು ಹಾಜರುಪಡಿಸಿ, ಅವರ ಹೇಳಿಕೆ ದಾಖಲಿಸಿದ ನಂತರ ಆ.26ರಂದು ರಾತ್ರಿ 10.30ರ ವೇಳೆಯಲ್ಲಿ ಮುರುಘಾ ಶರಣರು, ಹಾಸ್ಟೆಲ್ ವಾರ್ಡನ್, ಮಠದ ಹಿರಿಯ ಸ್ವಾಮೀಜಿ ಸೇರಿದಂತೆ ಐವರ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ವಿದ್ಯಾರ್ಥಿನಿಯರನ್ನು ವಾರ್ಡನ್ ರಶ್ಮಿ ಅವರು ಶ್ರೀಗಳ ಸೇವೆಗಾಗಿ ರಾತ್ರಿ ವೇಳೆ ಕಳುಹಿಸುತ್ತಿದ್ದರು. ಆಗ ಶ್ರೀಗಳು ಲೈಂಗಿಕ ದೌರ್ಜನ್ಯವೆಸಗಿದ್ದರು. ಇವರಿಗೆ ಇತರ ನಾಲ್ವರು ಸಹಕರಿಸಿದ್ದರು ಎಂಬುದು ಆ ದೂರಿನ ಸಾರಾಂಶವಾಗಿತ್ತು. ಈ ಪ್ರಕರಣವನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು. ಅದಕ್ಕೂ ಮುನ್ನ ಅದೇ ದಿನ ಸಂಜೆ 6 ಗಂಟೆ ವೇಳೆಯಲ್ಲಿ ಮಠದ ಆಡಳಿತಾಧಿಕಾರಿ ಕೆ.ಎಸ್. ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ವಿರುದ್ಧ ಚಿತ್ರದುರ್ಗ ಗ್ರಾಮಾಂತರ ಠಾಣೆಯಲ್ಲಿ ಅತ್ಯಾಚಾರ ಯತ್ನವೂ ಸೇರಿದಂತೆ ದೌರ್ಜನ್ಯ ಪ್ರಕರಣ ದಾಖಲಿಸಿದ್ದ ಹಾಸ್ಟೆಲ್ ವಾರ್ಡನ್ ರಶ್ಮಿ, ಬಸವರಾಜನ್ ಅವರು ಇಬ್ಬರು ಅಪ್ರಾಪ್ತ ಬಾಲಕಿಯರನ್ನು ಬೆಂಗಳೂರಿನ ಕಾಟನ್‌ಪೇಟೆ ಠಾಣೆಯಿಂದ ಕರೆತಂದು ಮೂರು ದಿನ ತಮ್ಮ ವಶದಲ್ಲೇ ಇಟ್ಟುಕೊಂಡು ಅವರನ್ನು ಪ್ರಚೋದಿಸಿ, ಮಠಕ್ಕೆ ಕೆಟ್ಟ ಹೆಸರು ಬರುವಂತೆ ಷಡ್ಯಂತ್ರ ರೂಪಿಸಿದ್ದಾರೆ ಎಂದು ದೂರಿದ್ದರು. ಚಿತ್ರದುರ್ಗ ಡಿವೈಎಸ್‌ಪಿ ಅನಿಲ್‌ಕುಮಾರ್ ನೇತೃತ್ವದಲ್ಲಿ ಎರಡೂ ಪ್ರಕರಣಗಳ ತನಿಖೆ ನಡೆಯುತ್ತಿದೆ. ರಾತ್ರಿ ಬಹುಹೊತ್ತಿನವರೆಗೆ ಚಳ್ಳಕೆರೆ ಡಿವೈಎಸ್ಪಿ ಕಚೇರಿಯಲ್ಲಿ ಮುರುಘಾ ಶ್ರೀಗಳನ್ನು ವಿಚಾರಣೆಗೊಳಪಡಿಸಿದ ನಂತರ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೊಳಪಡಿಸಲಾಯಿತು. ನಂತರ ಶ್ರೀಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದು ಎಂದು ಎಸ್ಪಿ ಪರಶುರಾಮ್ ತಿಳಿಸಿದರು.

ಎಸ್ಪಿಗೆ ಮಕ್ಕಳ ರಕ್ಷಣಾ ಆಯೋಗ ನೋಟೀಸ್: ಮುರುಘಾ ಮಠದ ಶ್ರೀಗಳಿಂದ ಇಬ್ಬರು ಬಾಲಕಿಯರಿಗೆ ಲೈಂಗಿಕ ದೌರ್ಜನ್ಯ ನಡೆದಿರುವ ಆರೋಪ ಕುರಿತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ತನಿಖಾ ವರದಿ ನೀಡುವಂತೆ ಚಿತ್ರದುರ್ಗ ಎಸ್ಪಿಯವರಿಗೆ ನೋಟೀಸ್ ನೀಡಿದೆ. ತನಿಖೆಯ ಪ್ರಕ್ರಿಯೆಯಲ್ಲಿ ಬಾಲಕಿಯರ ಗುರುತು ಬಹಿರಂಗಪಡಿಸದಂತೆ ಸೂಚಿಸಿರುವ ಆಯೋಗವು, ತಮ್ಮ ಪತ್ರ ತಲುಪಿದ 7 ದಿನದಲ್ಲಿ ಇತರೆ ದಾಖಲೆಗಳೊಂದಿಗೆ ಪ್ರಕರಣದ ವಿವರವಾದ ವರದಿಯನ್ನು ಒದಗಿಸುವಂತೆ ಸೂಚನೆ ನೀಡಿದೆ.

ಬಸವರಾಜನ್ ದಂಪತಿಗೆ ಜಾಮೀನು

ಮಾತನಾಡಿದ ಕೆ.ಎಸ್.ಬಸವರಾಜನ್, ನಾನು ಯಾವುದೇ ತಪ್ಪು ಮಾಡಿಲ್ಲ, ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ. ಆ ಸಂಬಂಧ ಕಾನೂನು ಹೋರಾಟ ಮಾಡುತ್ತೇನೆ ಎಂದರು. ಮಕ್ಕಳಿಗೆ ಅನ್ಯಾಯವಾಗಿದೆ ಎಂದು ತಿಳಿದಾಗ ನಾನು ಅವರಿಗೆ ರಕ್ಷಣೆ ನೀಡಿದ್ದೇನೆ ಅಷ್ಟೇ. ನಾನು ಆಡಳಿತಾಧಿಕಾರಿಯಾಗಿದ್ದಾಗ ಈ ವಿಚಾರ ಗೊತ್ತಿದ್ದರೆ ಆಗಲೇ ರಕ್ಷಣೆ ಕೊಡುತ್ತಿದ್ದೆ. ಮಕ್ಕಳಿಗೆ ಅನ್ಯಾಯವಾಗಿದೆ ಎಂದು ಗೊತ್ತಾದ ತಕ್ಷಣ ನಾನು, ನನ್ನ ಪತ್ನಿ ಮತ್ತು ಮಗ ಅವರಿಗೆ ರಕ್ಷಣೆ ನೀಡಿದ್ದೇವೆ. ಮಕ್ಕಳನ್ನು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಕರೆತಂದು ನಂತರ ಅವರ ಪೋಷಕರ ವಶಕ್ಕೆ ನೀಡಿದ್ದೇವೆ. ನಂತರ ಅವರು ರಕ್ಷಣೆಗಾಗಿ ಯಾವ ಮೂಲಕವೋ ಒಡನಾಡಿ ಸಂಸ್ಥೆಗೆ ಹೋಗಿದ್ದಾರೆ ಎಂದರು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಬಸವರಾಜನ್, ತಮ್ಮನ್ನು ಆಡಳಿತಾಧಿಕಾರಿ ಹುದ್ದೆಯಿಂದ ತೆಗೆದು ಹಾಕಿರುವ ಬಗ್ಗೆ ಗೊತ್ತಿಲ್ಲ. ಮಠ ಸ್ವಾಮೀಜಿ ಅವರ ಆಸ್ತಿಯಲ್ಲ. ಅದು ಸಾರ್ವಜನಿಕ ಆಸ್ತಿಯಾಗಿದೆ. ಮಕ್ಕಳಿಗೆ ಅನ್ಯಾಯವಾದಾಗ ನಾವು ಸ್ವಾಮೀಜಿಯನ್ನೂ ಲೆಕ್ಕಿಸದೆ ಮಕ್ಕಳ ರಕ್ಷಣೆಗೆ ನಿಲ್ಲಬೇಕಾಗುತ್ತದೆ ಎಂದರು.

ಪ್ರೊ. ಬಿ.ಶೇಕ್ ಅಲಿ ಇನ್ನಿಲ್ಲ

ವಿಪಕ್ಷ ನಾಯಕ ಸಿದ್ದರಾಮಯ್ಯ, ಶಾಸಕ ತನ್ವೀರ್ ಸೇಠ್, ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಆಫ್ ಕರ್ನಾಟಕ, ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಮ್ಯಾನೇಜಿಂಗ್ ಕಮಿಟಿ, ತಹಫುಜ್–ಇ–ಉರ್ದು ತೀವ್ರ ಸಂತಾಪ ಸೂಚಿಸಿದ್ದಾರೆ. ಇವರು ಕನ್ನಡ ವಿವಿ ಪ್ರಕಟಿಸಿರುವ 'ಕರ್ನಾಟಕ ಇತಿಹಾಸದ ಏಳು ಸಂಪುಟಗಳ' ಪ್ರಧಾನ ಸಂಪಾದಕರಾಗಿದ್ದರು. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ 'ಸುವರ್ಣ ಮಹೋತ್ಸವ ಪ್ರಶಸ್ತಿ', 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಕೆಬಿಜಿ ಸಂತಾಪ: ಪ್ರೊ. ಷೇಕ್ ಅಲಿ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು, ಪ್ರೊ. ಶೇಕ್ ಅಲಿ ಅವರು ಖ್ಯಾತ ಬರಹಗಾರ ಹಾಗೂ ವಾಗ್ಮಿಯಾಗಿದ್ದರು ಎಂದು ಸ್ಮರಿಸಿದ್ದಾರೆ.

ಅವರು 50ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದರು. ಇತ್ತೀಚೆಗೆ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ 'Apostle of Mercy' ಪುಸ್ತಕವನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದು, ಅದು 2022ರಲ್ಲಿ ಪ್ರಕಟಗೊಂಡಿದೆ. ಪ್ರೊ. ಅಲಿ ಅವರು ಮಾನಸ ಗಂಗೋತ್ರಿಯಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದಾಗ ನಾನೊಬ್ಬ ಪತ್ರಕರ್ತನಾಗಿ ಅವರೊಂದಿಗೆ ಉತ್ತಮ ಒಡನಾಟ ಹೊಂದಿದ್ದೆ. ಅವರು ಮೃದು ಭಾಷಿ, ಸದಾ ಹಸನ್ಮುಖಿ ಎಂದು ಅವರ ಗುಣಗಾನ ಮಾಡಿದ್ದಾರೆ. ಅವರು 'Apostle of Mercy' ಪುಸ್ತಕದ ಪ್ರತಿಯೊಂದನ್ನು ನನಗೆ ನೀಡುವಾಗ ಅದರೊಂದಿಗೆ ಟಿಪ್ಪಣಿಯನ್ನು ಬರೆದು ಕಳುಹಿಸಿದ್ದರು. ಅದರಲ್ಲಿ ಅವರು, 'ಗೌರವಾನ್ವಿತ 'ಕೆಬಿಜಿ' ಅವರಿಗೆ ಶುಭ ಹಾರೈಕೆಗಳು. ಪುಸ್ತಕ ಪ್ರೇಮಿಯೂ ಆಗಿ, ನೀವು ಹೊರ ತರುತ್ತಿರುವ ಸಂಜೆ ದಿನ ಪತ್ರಿಕೆಯು ಅತ್ಯಂತ ಮೌಲ್ಯಯುತವಾಗಿದ್ದು, ಈ ಪತ್ರಿಕೆಯು ದೇಶದ ಇನ್ನಿತರ ಮಾಧ್ಯಮಗಳಿಗೆ ಮಾದರಿಯಾಗಿದೆ' ಎಂದು ನಮೂದಿಸಿದ್ದರು. ಈ ಟಿಪ್ಪಣಿಯನ್ನು ಪ್ರೊ. ಷೇಕ್ ಅಲಿ ಅವರು 2022ರ ಮೇ 11ರಂದು ಬರೆದಿದ್ದರು ಎಂದು ಕೆಬಿಜಿ ಸ್ಮರಿಸಿದ್ದಾರೆ.

ಆದರೆ ದುರಾದೃಷ್ಟವಶಾತ್ ಅವರು ಇಂದು ನಮ್ಮನ್ನು ಅಗಲಿದ್ದಾರೆ. ಅವರ ನಿಧನ, ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಾತವನ್ನೇ ಸೃಷ್ಟಿಸಿದೆ. ಸಮುದಾಯ ಸೇವೆಗೂ ಭಾರೀ ಹಿನ್ನಡೆಯಾದಂತಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಕುರಿತು ಅಪಾರ ಜ್ಞಾನ ಹೊಂದಿದ್ದ ಪ್ರೊ. ಷೇಕ್ ಅಲಿ, ಅಲಿಘರ್‌ನಲ್ಲಿ 1949ರಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿ, ಅಲ್ಲಿಯೇ ಮೊದಲ ಪಿಹೆಚ್‌ಡಿ ಹಾಗೂ ಎರಡನೇ ಪಿಹೆಚ್‌ಡಿ ಪದವಿಯನ್ನು ಲಂಡನ್ ವಿಶ್ವವಿದ್ಯಾನಿಲಯದಲ್ಲಿ 1960ರಲ್ಲಿ ಪಡೆದಿದ್ದರು. ಇಂಗ್ಲಿಷ್, ಕನ್ನಡ, ಪರ್ಷಿಯನ್ ಮತ್ತು ಉರ್ದು ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದರಲ್ಲದೆ, ಮೈಸೂರು ಮೂಲದ ಇತಿಹಾಸಕಾರರಾಗಿ ಕರ್ನಾಟಕ ಮತ್ತು ಭಾರತ ಕುರಿತ 30ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದರು. 1968ರಲ್ಲಿ ನಡೆದ ಭಾರತೀಯ ಇತಿಹಾಸ ಕಾಂಗ್ರೆಸ್‌ನ 47ನೇ ಗೋಷ್ಠಿ ಅಧ್ಯಕ್ಷರಾಗಿದ್ದರಲ್ಲದೆ, ಕರ್ನಾಟಕ ಇತಿಹಾಸ ಕಾಂಗ್ರೆಸ್ ಸ್ಥಾಪಿಸಿದ್ದ ಅವರು, ಶೈಕ್ಷಣಿಕ, ಆಡಳಿತಾತ್ಮಕವಾಗಿ ಉತ್ತಮ ಸೇವಾ ಸಾಮರ್ಥ್ಯ ಹೊಂದಿದ್ದರು. ಗೋವಾ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳ ಕುಲಪತಿಗಳಾಗಿ ಉತ್ತಮ ಸೇವೆ ಸಲ್ಲಿಸಿದ್ದರು.

ಚಿಕ್ಕಮಗಳೂರಿನ ಮೌಂಟನ್ ವ್ಯೂ ಚೈನ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷರಾಗಿದ್ದ ಅವರು, ನರ್ಸರಿಯಿಂದ ಪದವಿ ತರಗತಿವರೆಗೆ 2,500 ವಿದ್ಯಾರ್ಥಿಗಳಿರುವ ಈ ಸಂಸ್ಥೆಯಲ್ಲಿ ಬಾಲಕ–ಬಾಲಕಿಯರಿಗೆ ಹಾಸ್ಟೆಲ್ ಸೇರಿದಂತೆ ಎಲ್ಲಾ ಸೌಕರ್ಯಗಳನ್ನು ಒದಗಿಸಿದ್ದಾರೆ. ಮೈಸೂರಿನ ಮುಸ್ಲಿಂ ಎಜುಕೇಷನ್ ಸೊಸೈಟಿ ಅಧ್ಯಕ್ಷರಾಗಿ ಡಜನ್‌ಗೂ ಅಧಿಕ ನರ್ಸರಿ, ಪ್ರೈಮರಿ ಶಾಲೆಗಳನ್ನು ಆರಂಭಿಸಿದ್ದು, ಅವು ಈಗ ಪ್ರಥಮ ದರ್ಜೆ ಕಾಲೇಜು ಮಟ್ಟಕ್ಕೆ ಬೆಳೆದಿವೆ. 'ಡೈಲಿ ಸಲಾರ್' ಮತ್ತು 'ವೀಕ್ಲಿ ಸಲಾರ್' ಸುದ್ದಿ ಪತ್ರಿಕೆಗಳ ಪ್ರಧಾನ ಸಂಪಾದಕರಾಗಿಯೂ ಪ್ರೊ. ಷೇಕ್ ಅಲಿ ಅವರು ಸೇವೆ ಸಲ್ಲಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮೇಯರ್ ಗಾದಿ ಹಿಡಿಯಲು ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲಿ ಪಾಲಿಕೆ ಜೆಡಿಎಸ್ ಸದಸ್ಯರ ಕಾರ್ಯತಂತ್ರ

ಅಧಿಕಾರ ಹಿಡಿಯುವ ಕಾರ್ಯತಂತ್ರ ಕುರಿತು ಆಕಾಂಕ್ಷಿಗಳ ಅಭಿಪ್ರಾಯ ಸಂಗ್ರಹ



ಮೈಸೂರು, ಸೆ.1(ಆರ್‌ಕೆಬಿ)– ಮೈಸೂರು ಮೇಯರ್ ಆಯ್ಕೆ ದಿನಾಂಕ ಸಮೀಪಿಸುತ್ತಿರುವಂತೆಯೇ ಪ್ರಮುಖ ಪಕ್ಷಗಳು ಬಿರುಸಿನ ಚಟುವಟಿಕೆಯಲ್ಲಿ ತೊಡಗಿದ್ದು, ಗುರುವಾರ ನಗರಪಾಲಿಕೆ ಜೆಡಿಎಸ್ ಸದಸ್ಯರು ಕೆಆರ್.ನಗರ ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲಿ ಸಭೆ ನಡೆಸಿ, ಈ ಬಾರಿ ಅಧಿಕಾರ ಹಿಡಿಯುವ ಕಾರ್ಯತಂತ್ರ ಕುರಿತು ಚರ್ಚಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮೇಯರ್ ಆಕಾಂಕ್ಷಿಗಳು ಸೇರಿದಂತೆ ಪಕ್ಷದ ಎಲ್ಲಾ ಪಾಲಿಕೆ ಸದಸ್ಯರು ಭಾಗವಹಿಸಿ, ಸಲಹೆ, ಸೂಚನೆಗಳನ್ನು ನೀಡಿದರು.

ಮೈಸೂರು ಮಹಾನಗರ ಪಾಲಿಕೆಯ ಕೊನೆಯ ಅವಧಿಗೆ ಸೆ.6ರಂದು ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಈ ಸಭೆಗೆ ಮಹತ್ವ ಬಂದಿದ್ದು, ಸ್ವತಃ ಶಾಸಕ ಸಾ.ರಾ.ಮಹೇಶ್ ಅವರೇ ಮುಂದೆ ನಿಂತು ಸಭೆ ನಡೆಸಿ, ಈ ಬಾರಿ ಹೇಗಾದರೂ ಸರಿ ಜೆಡಿಎಸ್ ಅಧಿಕಾರ ಹಿಡಿಯಲೇಬೇಕು ಎಂದು ಪಟ್ಟು ಹಿಡಿದಂತಿದೆ.

ಈ ಹಿಂದಿನ ಅವಧಿಗೆ ಬಿಜೆಪಿಗೆ ಮೇಯರ್ ಸ್ಥಾನ ಬಿಟ್ಟುಕೊಟ್ಟಿರುವ ಹಿನ್ನೆಲೆಯಲ್ಲಿ ಒಪ್ಪಂದದ ಪ್ರಕಾರ ಈ ಸಾಲಿಗೆ ಜೆಡಿಎಸ್‌ಗೆ ಮೇಯರ್ ಸ್ಥಾನ ಸಿಗಬೇಕಿರುವುದರಿಂದ ಆಕಾಂಕ್ಷಿಗಳು ಹಾಗೂ ನಗರಪಾಲಿಕೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಲಾಯಿತು.

ನಗರಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಕೆ.ವಿ.ಶ್ರೀಧರ್, ಭಾಗ್ಯ ಮಾದೇಶ್, ಎಂ.ಡಿ.ನಾಗರಾಜ್ ಹಾಗೂ ಪ್ರೇಮಾ ಶಂಕರೇಗೌಡ ಅವರುಗಳು ಮೇಯರ್ ಸ್ಥಾನದ ಆಕಾಂಕ್ಷಿಗಳಾಗಿರುವುದು ಸಭೆಯಲ್ಲಿ ನಡೆದ ಮಾತುಕತೆ ಸಂದರ್ಭದಲ್ಲಿ ಕಂಡು ಬಂದಿತು. ನಾಲ್ವರು ಪುರುಷ ಸದಸ್ಯರು ಹಾಗೂ ಐವರು ಮಹಿಳಾ ಜೆಡಿಎಸ್ ಸದಸ್ಯರು ಮೇಯರ್ ಸ್ಥಾನಕ್ಕೆ ಸ್ಪರ್ಧಿಸುವ ಆಕಾಂಕ್ಷೆ ವ್ಯಕ್ತಪಡಿಸಿದರೆಂದು ಸಭೆಯಲ್ಲಿ ಭಾಗವಹಿಸಿದ್ದ ಜೆಡಿಎಸ್ ಮುಖಂಡರ ಮೂಲಗಳು ತಿಳಿಸಿವೆ.

ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಸಾ.ರಾ.ಮಹೇಶ್, ಒಪ್ಪಂದದ ಪ್ರಕಾರ ಜೆಡಿಎಸ್ ಅನ್ನು ಬಿಜೆಪಿ ಬೆಂಬಲಿಸಿದಲ್ಲಿ ಮೇಯರ್ ಸ್ಥಾನ ನಮ್ಮ ಪಕ್ಷಕ್ಕೆ ಸಿಗಲಿದೆ ಆಕಾಂಕ್ಷಿಗಳಿಂದ ಸಂಗ್ರಹಿಸಲಾಗಿರುವ ಮಾಹಿತಿಯನ್ನು ಪಕ್ಷದ ವರಿಷ್ಠರಿಗೆ ತಿಳಿಸಲಾಗುವುದು. ನಂತರ ಮುಂದಿನ ತೀರ್ಮಾನ ಆಗಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಸದಸ್ಯ ಶ್ರೀಕಂಠೇಗೌಡ, ಮೈಸೂರು ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ರವಿಕುಮಾರ್, ಮಾಜಿ ಕಾರ್ಪೊರೇಟರ್ ಮಹದೇಶ್, ಮುಖಂಡರಾದ ಅಬ್ದುಲ್ಲಾ, ಕೆ.ವಿ.ಮಲ್ಲೇಶ್, ಪಡುವಾರಹಳ್ಳಿ ಸೋಮು, ಜಿಲ್ಲಾ ಅಧ್ಯಕ್ಷ, ಜೆಡಿಎಸ್ ಪಕ್ಷದ ಪದಾಧಿಕಾರಿಗಳು ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ನಾವಂತೂ ಕಾಂಗ್ರೆಸ್ ಜೊತೆ ಹೋಗಲ್ಲ

ಬಿಜೆಪಿ ಸಹಕರಿಸಿದರೆ ಮೇಯರ್ ಸ್ಥಾನ ಜೆಡಿಎಸ್‌ಗೆ

ಸಾ.ರಾ.ಮಹೇಶ್ ವಿಶ್ವಾಸ

ಮೈಸೂರು, ಸೆ.1(ಆರ್‌ಕೆಬಿ)– ಈ ಬಾರಿ ಮೈಸೂರು ಮೇಯರ್ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟು ಕೊಡಲು ಬಿಜೆಪಿ ಮುಂದಾಗಬೇಕು. ಕಳೆದ ಬಾರಿ ನಾವು ತಟಸ್ಥರಾದ ಕಾರಣ ಬಿಜೆಪಿಗೆ ಪ್ರಪ್ರಥಮ ಬಾರಿಗೆ ಮೇಯರ್ ಸ್ಥಾನ ಸಿಕ್ಕಿತ್ತು. ನಗರಪಾಲಿಕೆ ಇತಿಹಾಸದಲ್ಲೇ ಮೊದಲ ಬಾರಿ ಬಿಜೆಪಿಗೆ ಮೇಯರ್ ಸ್ಥಾನ ಲಭ್ಯವಾಗಿತ್ತು. ನಾವು ಕಾಂಗ್ರೆಸ್ ಜೊತೆ ಕೈ ಜೋಡಿಸಿದ್ದರೆ ಬಿಜೆಪಿಗೆ ಮೇಯರ್ ಸ್ಥಾನ ಸಿಗುತ್ತಿರಲಿಲ್ಲ. ಹಾಗಾಗಿ, ಈ ಬಾರಿ ನಮಗೆ ಮೇಯರ್ ಸ್ಥಾನ ದಕ್ಕಲು ಬಿಜೆಪಿ ಸಹಕಾರ ನೀಡುತ್ತದೆ ಎಂಬ ವಿಶ್ವಾಸ ಹೊಂದಿದ್ದೇವೆ ಎಂದು ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್ ಹಾಗೂ ಜೆಡಿಎಸ್ ಹಿರಿಯ ಮುಖಂಡ ಸಾ.ರಾ.ಮಹೇಶ್ ತಿಳಿಸಿದರು.

ನಗರಪಾಲಿಕೆ ಜೆಡಿಎಸ್ ಸದಸ್ಯರ ಸಭೆಯ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಜೆಡಿಎಸ್‌ಗೆ ಬೆಂಬಲ ಕೊಡಿ ಎಂದು ಬಿಜೆಪಿಯ ಯಾವುದೇ ಮುಖಂಡರ ಜೊತೆ ಇದುವರೆಗೂ ಮಾತುಕತೆ ನಡೆಸಿಲ್ಲ. ವಾಸ್ತವ ಪರಿಸ್ಥಿತಿಯನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ನಮಗೆ ಸಹಕಾರ ನೀಡದಿದ್ದರೆ, ಕಾಂಗ್ರೆಸ್ ಜೊತೆಯಂತೂ ನಾವು ಹೋಗುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದರು.

ವಿರೋಧ ಪಕ್ಷದ ಸ್ಥಾನದಲ್ಲಿರುತ್ತೇವೆ: ಕಳೆದ ಬಾರಿಯಂತೆ ಈ ಬಾರಿಯೂ ನಾವು ತಟಸ್ಥರಾಗುಳಿದರೆ ಅದರ ಲಾಭ ಬಿಜೆಪಿಗೆ ಸಿಗುವುದಿಲ್ಲ. ನಾವು ತಟಸ್ಥರಾದರೆ ಕಾಂಗ್ರೆಸ್‌ಗೆ ಲಾಭವಾಗುತ್ತದೆ. ಏಕೆಂದರೆ ಕಳೆದ ಮೇಯರ್ ಚುನಾವಣೆ ವೇಳೆ ಬಿಜೆಪಿಯ ಒಟ್ಟಾರೆ ಸದಸ್ಯರ ಸಂಖ್ಯೆ ಹೆಚ್ಚಾಗಿತ್ತು. ಆದರೆ ಈ ಬಾರಿ ಕಾಂಗ್ರೆಸ್‌ನ ಒಟ್ಟಾರೆ ಸದಸ್ಯರ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಮೂರು ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದರೆ ಕಾಂಗ್ರೆಸ್‌ಗೆ ಲಾಭವಾಗಲಿದೆ. ಇದನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದರು. ಜೆಡಿಎಸ್‌ಗೆ ಮೇಯರ್ ಸ್ಥಾನ ಬಿಟ್ಟುಕೊಟ್ಟರೆ, ಬಿಜೆಪಿಗೆ ಉಪ ಮೇಯರ್ ಸ್ಥಾನ ಬಿಟ್ಟು ಕೊಡಲು ನಾವು ಸಿದ್ಧರಿದ್ದೇವೆ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಮುರುಘಾ ಶ್ರೀಗಳ ಬಂಧನಕ್ಕೆ ಆಗ್ರಹಿಸಿ, ಪ್ರತಿಭಟನೆ



ಮೈಸೂರು, ಸೆ.1(ಎಂಟಿವೈ)–ಅಪ್ರಾಪ್ತ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕೆ ಗುರಿಯಾಗಿ ಪೋಕ್ಸೋ ಕಾಯ್ದೆಯಡಿ ದೂರು ದಾಖಲಾಗಿರುವ ಹಿನ್ನೆಲೆಯಲ್ಲಿ ಕೂಡಲೇ ಚಿತ್ರದುರ್ಗದ ಮುರುಘಾ ಶ್ರೀಗಳನ್ನು ಬಂಧಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಗುರುವಾರ ಪ್ರತಿಭಟನೆ ನಡೆಸಿದ ಪ್ರಗತಿಪರರು ಚಿತ್ರದುರ್ಗದ ಶ್ರೀಗಳ ಬಂಧನಕ್ಕೆ ಆಗ್ರಹಿಸಿದರು.

ಚಿತ್ರದುರ್ಗದ ಮುರುಘಾ ಮಠಕ್ಕೆ ತನ್ನದೇ ಆದ ಇತಿಹಾಸವಿದೆ. ಸ್ವಾಮೀಜಿಯನ್ನು ಜನರು ದೇವರು ಎಂದು ಭಾವಿಸುತ್ತಾರೆ. ಆದರೆ, ದೇವರ ಹೆಸರು ಹೇಳಿಕೊಂಡು ಈ ರೀತಿ ಮಾಡಿದರೆ ನಂಬಿಕೆ ಎಲ್ಲಿ ಉಳಿಯುತ್ತದೆ. ಬೇಕಿದ್ದರೆ ಮದುವೆಯಾಗಲಿ. ಅದನ್ನು ಬಿಟ್ಟು ಸ್ವಾಮೀಜಿಯಂತೆ ನಾಟಕವಾಡಿ, ಅಮಾಯಕರ ಜೀವನ ಹಾಳು ಮಾಡಬಾರದು. ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದರೂ, ಸ್ವಾಮೀಜಿಯನ್ನು ಬಂಧಿಸಿ ವಿಚಾರಣೆ ಮಾಡದೆ ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ದೂರಿದರು.

ಸರ್ಕಾರ ಪ್ರಕರಣದ ತನಿಖೆಯನ್ನು ಯಾವುದೇ ಒತ್ತಡಕ್ಕೆ ಒಳಗಾಗದೆ ಪಾರದರ್ಶಕವಾಗಿ ಮಾಡಬೇಕು. ಅತ್ಯಾಚಾರದ ಆರೋಪ ಹೊತ್ತಿರುವ ಸ್ವಾಮೀಜಿಯನ್ನು ಕೂಡಲೇ ಬಂಧಿಸಬೇಕು. ಅಮಾಯಕ ಹೆಣ್ಣು ಮಕ್ಕಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಹೋರಾಟಗಾರ ಪ.ಮಲ್ಲೇಶ್, ಗೋಪಾಲಕೃಷ್ಣ, ಸ್ವರಾಜ್ ಇಂಡಿಯಾ ಪಕ್ಷದ ಜಿಲ್ಲಾಧ್ಯಕ್ಷ ಉಗ್ರ ನರಸಿಂಹೇಗೌಡ, ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಸಿಪಿಐ(ಐ) ಕೆ.ಬಸವರಾಜು, ಸಿಪಿಐ ಮುಖಂಡ ಹೆಚ್.ಬಿ.ರಾಮಕೃಷ್ಣ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ವಿವಿ ಮೊಹಲ್ಲಾದಲ್ಲಿ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಚೆಲುವಾಂಬ ಆಸ್ಪತ್ರೆಯಲ್ಲಿ ಸಂತ್ರಸ್ತೆಗೆ ಚಿಕಿತ್ಸೆ, ವಿವಿ ಪುರಂ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲು



ಮೈಸೂರು, ಸೆ.1(ಆರ್‌ಕೆ)–ಮೈಸೂರಿನ ವಿವಿ ಮೊಹಲ್ಲಾದಲ್ಲಿ 9 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಈ ಕುರಿತು ಸಂತ್ರಸ್ತ ಬಾಲಕಿ ತಾಯಿ ನೀಡಿದ ದೂರಿನ ದೂರಿನ ಮೇರೆಗೆ ಮಂಗಳವಾರ ವಿವಿ ಪುರಂ ಠಾಣೆ ಪೊಲೀಸರು ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿವಿ ಮೊಹಲ್ಲಾ 5ನೇ ಕ್ರಾಸ್ ನಿವಾಸಿಯಾದ ಅಪ್ರಾಪ್ತ ಬಾಲಕಿ ತೀವ್ರ ಅಸ್ವಸ್ಥಳಾಗಿದ್ದರಿಂದ 5 ದಿನಗಳ ಹಿಂದೆ ಪೋಷಕರು ಆಕೆಯನ್ನು ಕುವೆಂಪುನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆಕೆಯನ್ನು ಪರೀಕ್ಷಿಸಿದ ವೈದ್ಯರು, ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಲಕ್ಷಣಗಳಿವೆ ಎಂದು ವಿವಿ ಪುರಂ ಠಾಣೆಗೆ ಮೆಮೋ ಕಳುಹಿಸಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸರು ಬಾಲಕಿಯ ತಾಯಿ ನೀಡಿದ ದೂರನ್ನು ದಾಖಲಿಸಿಕೊಂಡಿದ್ದಾರೆ. ತನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ವಿಚಾರ ವೈದ್ಯರು ತಿಳಿಸಿದ ನಂತರವೇ ಬಾಲಕಿಯ ತಾಯಿಗೆ ಗೊತ್ತಾಗಿದೆ ಎಂದು ಹೇಳಲಾಗಿದ್ದು, ಬಾಲಕಿ ಮೇಲೆ ದೌರ್ಜನ್ಯ ನಡೆಸಿದ್ದು ಯಾರು? ಎಂಬುದರ ಬಗ್ಗೆ ಅವರಿಗೆ ಸರಿಯಾಗಿ ಮಾಹಿತಿ ಇಲ್ಲ ಎನ್ನಲಾಗುತ್ತಿದೆ. ಮತ್ತೊಂದೆಡೆ ಬಾಲಕಿ ಹೇಳಿಕೆ ನೀಡುವ ಪರಿಸ್ಥಿತಿಯಲ್ಲಿಲ್ಲ ಎಂದು ಹೇಳಲಾಗಿದೆ ಬಾಲಕಿಯನ್ನು ಇದೀಗ ಖಾಸಗಿ ಆಸ್ಪತ್ರೆಯಿಂದ ಚೆಲುವಾಂಬ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಲೈಂಗಿಕ ದೌರ್ಜನ್ಯವನ್ನು ಯಾರು, ಎಲ್ಲಿ, ಯಾವಾಗ ಎಸಗಿದ್ದಾರೆ ಎಂಬಿತ್ಯಾದಿ ಮಾಹಿತಿಯನ್ನು ಪೋಷಕರಾಗಲೀ, ಸಂತ್ರಸ್ತೆ ಬಾಲಕಿಯಾಗಲೀ ನೀಡುತ್ತಿಲ್ಲವಾದ್ದರಿಂದ ಪ್ರಯೋಗಾಲಯದ ವರದಿಗಾಗಿ ಕಾಯುತ್ತಿದ್ದೇವೆ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ವಿವಿ ಪುರಂ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಜಯಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಹೂವಿನ ಹಡಗಲಿ ತಾಪಂ ಇಓ ಆಗಿ ಚೆಸ್ಕಾಂ ಎಇಇ ನಿಯೋಜನೆಗೆ ಆಕ್ಷೇಪ



ಮೈಸೂರು, ಸೆ.1(ಎಂಟಿವೈ)– ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಚೆಸ್ಕಾಂ ಗ್ರಾಮೀಣ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಅವರನ್ನು ನಿಯೋಜಿಸಿರುವ ಆದೇಶ ರದ್ದುಪಡಿಸುವಂತೆ ಒತ್ತಾಯಿಸಿ ಮೈಸೂರು ತಾಲೂಕು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮನವಿ ಸಲ್ಲಿಸಿದರು.

ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದಲ್ಲಿ ಗುರುವಾರ ಮೈಸೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಅವರಿಗೆ ಮನವಿ ನೀಡಿದ ತಾಲೂಕಿನ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ, ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಯನ್ನು ನಿಯೋಜಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹೊರಡಿಸಿರುವ ಆದೇಶ ರದ್ದು ಮಾಡುವಂತೆ ಒತ್ತಾಯಿಸಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯು ಉಪವಿಭಾಗಾಧಿಕಾರಿಗಳಿಗೆ ಸಮಾನಾಂತರ ಹುದ್ದೆಯಾಗಿದ್ದು, 29 ಇಲಾಖೆಗಳ ಮೇಲ್ವಿಚಾರಣೆ ಮತ್ತು ತಾಲೂಕು ಪಂಚಾಯಿತಿ ಅಧೀನದ ಎಲ್ಲಾ ಅಭಿವೃದ್ಧಿ ಇಲಾಖೆಗಳ ಬಿಲ್ಲುಗಳಿಗೆ ಮೇಲು ರುಜು ಮಾಡುವ ಅಧಿಕಾರ ಮತ್ತು ಕರ್ತವ್ಯ ಹುದ್ದೆಯ ಅಧಿಕಾರಿಯಾಗಿರುತ್ತಾರೆ. ಅಲ್ಲದೆ, ವಿವಿಧ ಹಂತದಲ್ಲಿ ಆಡಳಿತ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸುವ ಜವಾಬ್ದಾರಿ ಹುದ್ದೆಯೂ ಆಗಿರುತ್ತದೆ. ತಾಲೂಕು ಪಂಚಾಯಿತಿಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ವಸತಿ, ಮಹಾತ್ಮ ಗಾಂಧಿ ನರೇಗಾ, 15 ನೇ ಹಣಕಾಸು, ಈ–ಸ್ವತ್ತು, ಸುವರ್ಣ ಗ್ರಾಮ, ಅಮೃತ ಗ್ರಾಮ ಹಾಗೂ ಮುಖ್ಯಮಂತ್ರಿ ಗ್ರಾಮವಿಕಾಸ ಇತರೆ ಸೇರಿದಂತೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯಕ್ರಮಾಧಿಕಾರಿ ಆಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಅನ್ಯ ಇಲಾಖೆಯಿಂದ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ತಕ್ಷಣವೇ ಅವರ ಮಾತೃ ಇಲಾಖೆಗೆ ಹಿಂದಿರುಗಿಸಬೇಕೆಂದು ಮನವಿ ಪತ್ರದಲ್ಲಿ ಕೋರಿದ್ದಾರೆ.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ (ಗ್ರಾ.ಉ) ಕೆ.ಎಂ.ರಘುನಾಥ್, ಮೈಸೂರು ತಾಲೂಕು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎಂ.ರವಿಕುಮಾರ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಮೈಸೂರು ತಾಲೂಕಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿ ಸೋಮವಾರ, ಎರಡನೇ ಮಂಗಳವಾರ ಪೀಪಲ್ಸ್ ಪಾರ್ಕ್ ಗ್ರಂಥಾಲಯ ಕಾರ್ಯನಿರ್ವಹಣೆ

ಮೈಸೂರು, ಸೆ.1– ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ಇನ್ನೂ ಮುಂದೆ ಪ್ರತಿ ಸೋಮವಾರ ಹಾಗೂ ಎರಡನೇ ಮಂಗಳವಾರ ದಿನಪತ್ರಿಕೆ/ನಿಯತಕಾಲಿಕೆ ವಿಭಾಗದ ಸೇವೆಯನ್ನು ಬೆಳಗ್ಗೆ 8.00 ರಿಂದ ರಾತ್ರಿ 8.00 ಗಂಟೆಯವರೆಗೆ ಹಾಗೂ ಪರಾಮರ್ಶನ ವಿಭಾಗದ ಸೇವೆಯನ್ನು ಬೆಳಗ್ಗೆ 10.00 ರಿಂದ ಸಂಜೆ 5.30 ಗಂಟೆಯವರೆಗೆ ಒದಗಿಸಲಾಗುತ್ತಿದ್ದು, ಸಾರ್ವಜನಿಕ ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಾಲಯದ ಸದುಪಯೋಗ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಮುರುಘಾ ಶ್ರೀಗಳ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣ

ನಿಷ್ಪಕ್ಷಪಾತ ತನಿಖೆ ನಡೆಸಲು ರೈತ ಸಂಘ ಆಗ್ರಹ



ಮೈಸೂರು,ಸೆ.1(ಪಿಎಂ)– ಚಿತ್ರದುರ್ಗದ ಮುರುಘಾ ಮಠದ ಶ್ರೀ ಡಾ.ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಗಂಭೀರವಾದ ಆರೋಪದಡಿ ಪ್ರಕರಣ ದಾಖಲಾಗಿದ್ದು, ಈ ಸಂಬಂಧ ಪರ–ವಿರೋಧ ಚರ್ಚೆಗಳಿಗಿಂತ ನಿಷ್ಪಕ್ಷಪಾತ ತನಿಖೆ ಆಗಬೇಕಿರುವುದು ಮುಖ್ಯ. ಈ ನಿಟ್ಟಿನಲ್ಲಿ ಯಾವುದೇ ವಿಳಂಬ ಮಾಡದೇ ಸರ್ಕಾರ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಬೇಕು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಸೂಕ್ಷ್ಮ ಪ್ರಕರಣವಾಗಿರುವ ಹಿನ್ನೆಲೆಯಲ್ಲಿ ಶೀಘ್ರ ಸತ್ಯ ಸಂಗತಿ ಹೊರಬರಬೇಕು. ಪಾರದರ್ಶಕ ತನಿಖೆ ಆಗಬೇಕಿದ್ದು, ದೂರುದಾರರು ಯಾವುದೇ ಭಯಭೀತಿಗೆ ಒಳಗಾದಂತೆ ವಿಚಾರಣೆ ನಡೆಯಬೇಕು. ಆರೋಪಿ ಸ್ಥಾನದಲ್ಲಿರುವ ಶ್ರೀಗಳನ್ನು ಆದಷ್ಟು ಶೀಘ್ರದಲ್ಲಿ ವಿಚಾರಣೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಐಟಿ (ವಿಶೇಷ ತನಿಖಾ ತಂಡ) ಮೂಲಕ ತನಿಖೆ ನಡೆಯಬೇಕು. ಸ್ಥಳೀಯ ಪೊಲೀಸ್ ಅಧಿಕಾರಿಗಳು ತನಿಖೆ ಮಾಡಿದರೆ ಅನುಮಾನಗಳು ಮೂಡುವುದು ಸಹಜ. ಹಾಗಾಗಿ ಐಪಿಎಸ್ ಕೇಡರ್‌ಗಳನ್ನು ಹೊರರಾಜ್ಯದವರನ್ನೇ ಈ ತಂಡಕ್ಕೆ ನಿಯೋಜಿಸಬೇಕು. ಕರ್ನಾಟಕ ಕೇಡರ್ ಆಗಿ ಕೆಲಸ ಮಾಡಿದರೂ ಅವರು ಹೊರರಾಜ್ಯದಿಂದ ಬಂದಿರಬೇಕು ಎಂದು ಹೇಳಿದರು.

ದೂರುದಾರರು ಅಪ್ರಾಪ್ತರಾದ ಹಿನ್ನೆಲೆಯಲ್ಲಿ ಅವರಿಗೆ ಸುರಕ್ಷಿತ ವಾತಾವರಣ ಕಲ್ಪಿಸಿ ತನಿಖೆ ನಡೆಸಬೇಕು. ರಾಜಕಾರಣಿಗಳು ಬಾಯಿ ಮುಚ್ಚಿಕೊಂಡು ಇರುವುದು ಒಳ್ಳೆಯದು. ಯಾರೂ, ಯಾರ ಪರವೂ ಹೇಳಿಕೆ ನೀಡಬಾರದು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಶ್ರೀಗಳ ಪರವಾದ ಹೇಳಿಕೆ ನೀಡಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಶೀಘ್ರ ಪರಿಹಾರ ಕ್ರಮವಿಲ್ಲ: ರಾಜ್ಯದಲ್ಲಿ ಸಂಭವಿಸಿರುವ ಅತಿವೃಷ್ಟಿ ಸಂಬಂಧ ಪರಿಹಾರ ಕ್ರಮಗಳು ಸಮರೋಪದಿಯಲ್ಲಿ ನಡೆಯುತ್ತಿಲ್ಲ. ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳು ಇದನ್ನು ಗಂಭೀರವಾಗಿಲ್ಲ ಪರಿಗಣಿಸಿಲ್ಲ. ಆಯಾಯ ಜಿಲ್ಲಾ ಉಸ್ತುವಾರಿ ಸಚಿವರು ಸಮರೋಪದಿಯಲ್ಲಿ ಕೆಲಸ ಮಾಡಬೇಕು. ಕೇವಲ ಸಭೆ ಮಾಡಿದರಷ್ಟೇ ಸಾಲದು ಎಂದರು.

ಅದರಲ್ಲೂ ಉತ್ತರ ಕರ್ನಾಟಕದ ಪರಿಹಾರ ಕ್ರಮಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಕೇಂದ್ರ ಸರ್ಕಾರದಲ್ಲಿ ಜಿಎಸ್‌ಟಿ ಪರಿಹಾರ ಕೇಳಲು ರಾಜ್ಯ ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತರಾಮ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದರೂ ಅತಿವೃಷ್ಟಿ ಪ್ರದೇಶಗಳಿಗೆ ಒಂದು ಪ್ರವಾಸ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದು ಮೋಸಗಾರ ಸರ್ಕಾರ: ವಿದ್ಯುತ್ ಖಾಸಗಿಕರಣ ಮಾಡುವುದಿಲ್ಲ ಎಂದು ರೈತರಿಗೆ ಲಿಖಿತ ಭರವಸೆ ನೀಡಿ ಇದೀಗ ಇದಕ್ಕೆ ಸಂಬಂಧಿಸಿದ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಿ, ಸಂಸತ್ ಸ್ಥಾಯಿ ಸಮಿತಿ ಪರಾಮರ್ಶೆಗೆ ಕಳುಹಿಸಲಾಗಿದೆ. ಇಂದೆಂಥ ಮೋಸಗಾರ ಸರ್ಕಾರ ಎಂದು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ ಬಡಗಲಪುರ ನಾಗೇಂದ್ರ, ವಿದ್ಯುತ್ ಖಾಸಗೀಕರಣದ ವಿರುದ್ಧ ಬೃಹತ್ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ವಿದ್ಯುತ್ ಖಾಸಗಿಕರಣದಿಂದ ರೈತರು ಸೇರಿದಂತೆ ಶ್ರಮಿಕ ವರ್ಗಕ್ಕೆ ಅನ್ಯಾಯವಾಗಲಿದೆ. ಸಂವಿಧಾನದ ಪ್ರಕಾರ ವಿದ್ಯುಚ್ಛಕ್ತಿ ಕ್ಷೇತ್ರವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರಲಿದ್ದು, ಹಾಗಾಗಿ ಹಲವು ರಾಜ್ಯಗಳು ಖಾಸಗೀಕರಣಕ್ಕೆ ಒಪ್ಪಿಗೆ ನೀಡಿಲ್ಲ. ಅದರಂತೆ ನಮ್ಮ ಮುಖ್ಯಮಂತ್ರಿಗಳು ಒಪ್ಪಿಗೆ ನೀಡಬಾರದು. ನಮ್ಮ ರಾಜ್ಯ ಸರ್ಕಾರವೂ ಇದನ್ನು ವಿರೋಧ ಮಾಡಬೇಕು ಎಂದರಲ್ಲದೆ, ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡಲು ಕ್ರಮ ವಹಿಸುವಂತೆ ಶೀಘ್ರವೇ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ರೈತ ಸಂಘದ ಮುಖಂಡರಾದ ಅಷ್ಟಥರಾಜೇ ಅರಸ್, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್ ಗೋಷ್ಠಿಯಲ್ಲಿದ್ದರು.

ಇದು ಸಂಧಾನಕ್ಕೆ ಒಳಪಡುವ ಪ್ರಕರಣವಲ್ಲ

> ನಮಗೂ ಶ್ರೀಗಳ ಬಗ್ಗೆ ಗೌರವ ಇದೆ. ಆದರೆ ಆ ಗೌರವವೇ ಬೇರೆ. ಈ ಪ್ರಕರಣವೇ ಬೇರೆ. ಇದು ಸಮಾಜಕ್ಕೆ ಸಂಬಂಧಿಸಿದ ವಿಚಾರ ಎಂದರಲ್ಲದೆ, ಸಂಧಾನ ಮತ್ತು ಸಮರ ಎರಡಕ್ಕೂ ಸಿದ್ಧ ಎಂಬ ಶ್ರೀಗಳ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ, ಇದು ಸಂಧಾನ ಮಾಡಿಕೊಳ್ಳುವ ಪ್ರಕ್ರಿಯೆ ವ್ಯಾಪ್ತಿಗೆ ಒಳಪಡುವ ಪ್ರಕರಣವಲ್ಲ ಎಂದು ತಿಳಿಸಿದರು.
> -ಬಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ಅಧ್ಯಕ್ಷ

ಕಾರ್ಯಕರ್ತರು, ಅಭಿಮಾನಿಗಳ ಅಭಿಮಾನಕ್ಕೆ ಋಣಿ

ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್

ತಿ.ನರಸೀಪುರ, ಸೆ.1– ನಿರೀಕ್ಷೆಗೂ ಮೀರಿದ ಪ್ರೀತಿ ವಿಶ್ವಾಸ ತೋರುತ್ತಿರುವ ಅಭಿಮಾನಿಗಳು ಹಾಗೂ ಕಾರ್ಯಕರ್ತರ ಅಭಿಮಾನಕ್ಕೆ ಋಣಿಯಾಗಿದ್ದು, ನಿಮ್ಮೆಲ್ಲರ ಆಶೀರ್ವಾದವಿದ್ದಲ್ಲಿ ಮುಂಬರುವ ಚುನಾವಣೆಯಲ್ಲಿ ಗೆದ್ದು ಸೇವೆ ಮಾಡುವ ಮೂಲಕ ಋಣ ತೀರಿಸುತ್ತೇನೆ ಎಂದು ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಚಿಕ್ಕಮ್ಮತಾಯಿ ಯಾತ್ರೀಭವನದಲ್ಲಿ ಆಯೋಜಿಸಿದ್ದ 40ನೇ ವರ್ಷದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಬೃಹತ್ ಗಾತ್ರದ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಂಡು ಮಾತನಾಡಿದ ಅವರು, ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಇಲ್ಲಿವರೆಗೂ ನಮ್ಮ ತಂದೆ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಭೂತಪೂರ್ವ ಬೆಂಬಲ ನೀಡಿದ್ದೀರಿ. ಅದೇ ರೀತಿಯ ಬೆಂಬಲವನ್ನು ನನಗೂ ನೀಡುವ ಮೂಲಕ ಕ್ಷೇತ್ರದ ಜನತೆಯ ಸೇವೆ ಮಾಡಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು.

ನಮ್ಮ ತಂದೆ ಸಚಿವರಾಗಿದ್ದ ವೇಳೆ ಸಾವಿರಾರು ಕೋಟಿ ರೂ. ಅನುದಾನ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇಡೀ ರಾಜ್ಯದಲ್ಲೇ ಯಾವುದೇ ಕ್ಷೇತ್ರದಲ್ಲೂ ಮಾಡದಷ್ಟು ಅಭಿವೃದ್ಧಿ ಕಾರ್ಯ ಮಾಡಿ ಕ್ಷೇತ್ರವನ್ನು ಮಾದರಿಯನ್ನಾಗಿಸಿದ್ದಾರೆ. ಸಾಮಾಜಿಕ ಸೇವೆಗೆ ಒತ್ತುಕೊಟ್ಟು ಜನರ ಕಲ್ಯಾಣಕ್ಕೆ ಆದ್ಯತೆ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಅಭಿಮಾನಿಗಳು, ಕಾರ್ಯಕರ್ತರ ಆಶೀರ್ವಾದದೊಂದಿಗೆ ಸಮಾಜಸೇವೆ ಮಾಡುವ ಬಯಕೆ ಹೊಂದಿದ್ದು, ನನಗೆ ಒಮ್ಮೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿ, ಕ್ಷೇತ್ರ ಕಂಡ ಅಪರೂಪದ ಯುವ ರಾಜಕಾರಣಿ ಸುನೀಲ್ ಬೋಸ್. ಜನಸೇವೆ ಮಾಡಲು ಉತ್ಸುಕರಾಗಿರುವ ಅವರನ್ನು ಕ್ಷೇತ್ರದ ಜನತೆ ಮುಂಬರುವ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು.



450 ಕೆಜಿ ಸೇಬಿನ ಹಾರದೊಂದಿಗೆ ಅದ್ದೂರಿ ಸ್ವಾಗತ

ಹುಟ್ಟುಹಬ್ಬ ಕಾರ್ಯಕ್ರಮಕ್ಕಾಗಿ ಪಟ್ಟಣಕ್ಕೆ ಆಗಮಿಸಿದ ಸುನೀಲ್ ಬೋಸ್ ಅವರಿಗೆ ಚಿಕ್ಕಮ್ಮತಾಯಿ ಯಾತ್ರೀ ಭವನದ ಬಳಿ 450 ಕೆಜಿ ತೂಕದ ಬೃಹತ್ ಸೇಬಿನ ಹಾರ ಹಾಕುವ ಮೂಲಕ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಈ ವೇಳೆ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳು, ಕಾರ್ಯಕರ್ತರು ಬೋಸ್ ಪರ ಜೈಕಾರ ಹಾಕಿ ಸಂಭ್ರಮಿಸಿದರು. ನಂತರ ಬೋಸ್ ಯಾತ್ರಿ ಭವನದದಲ್ಲಿ ನಡೆದ ಕಾರ್ಯಕ್ರಮದಲ್ಲಿ 40 ಕೆಜಿ ತೂಕದ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಂಡರು.

ಶಾಸಕ ಡಾ.ಯತೀಂದ್ರ ಅವರ ಮಾರ್ಗದರ್ಶನದಲ್ಲಿ ಬೋಸ್ ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಸುಪುತ್ರರಾಗಿರುವ ಬೋಸ್ ಅವರು ಕ್ಷೇತ್ರದ ಶಾಸಕರಾಗಬೇಕೆನ್ನುವ ಅಭಿಲಾಷೆ ಯತೀಂದ್ರ ಅವರಿಗಿದೆ. ಕ್ಷೇತ್ರದ ಜನತೆ ಅವರಿಗೆ ಆಶೀರ್ವದಿಸಿದಲ್ಲಿ ಸಾಮಾಜಿಕ ನ್ಯಾಯದ ಪರ ಹೋರಾಡುವ ಎಲ್ಲ ಅರ್ಹತೆ ಹೊಂದಿರುವ ಬೋಸ್ ಅವರು ತಮ್ಮ ತಂದೆಯಂತೆಯೇ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾಗಿ ಜನತೆ ಅವರ ಆಶಯಕ್ಕೆ ಪೂರಕವಾಗಿ ಸ್ಪಂದಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ, ಪಾರುಪತ್ತೇದಾರ್ ಮೂಗೂರು ಸಾಗರ್, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಪುರಸಭಾ ಉಪಾಧ್ಯಕ್ಷೆ ನಾಗರತ್ನ, ಸದಸ್ಯ ಬಾದಾಮಿ ಮಂಜು, ಭೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಮೂಗೂರು ವಿನಯ್, ಕುರುಬೂರು ಸಂಜು, ಸೋಸಲೆ ಮಹದೇವಸ್ವಾಮಿ, ಚೌಹಳ್ಳಿ ಮಲ್ಲೇಶ್, ಆಲಗೂಡು ರಘು, ಶ್ರೀರಾಂಪುರ ಮಣಿ, ಮಣಿಕಂಠರಾಜ್ ಗೌಡ, ಸಬೀಲ್, ಪ್ರವೀಣ್, ಮಟನ್ ಸಂತೋಷ್, ಆಲಗೂಡು ರಾಚಪ್ಪಾಜಿ, ತಿರುಮ ಕೂಡಲು ಸಂದೇಶ್ ಸೇರಿದಂತೆ ನೂರಾರು ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ರೈತರು ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಿ

ಮೈಮುಲ್ ನಿರ್ದೇಶಕ ಕೆ.ಈರೇಗೌಡ



ಸರಗೂರು, ಸೆ.1– ರೈತರು ಗುಣಮಟ್ಟದ ಹಾಲು ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಮೈಮುಲ್ ನಿರ್ದೇಶಕ ಕೆ.ಈರೇಗೌಡ ತಿಳಿಸಿದರು.

ತಾಲೂಕಿನ ಗೊಂತಗಾಲದಹುಂಡಿಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿ, ರೈತರು ಕೃಷಿಯೊಂದಿಗೆ ಹೈನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡಿದ್ದು, ಇವರಿಗೆ ಸರ್ಕಾರದ ಸಹಾಯಧನ ನೇರವಾಗಿ ದೊರಕಬೇಕು ಎಂದರು.

ಹಾಲಿನ ಡೈರಿಯಿಂದ ಹಾಲು ಉತ್ಪಾದಕರಿಗೆ ಸೌಲಭ್ಯಗಳು ದೊರಕುವಂತಾಗಬೇಕು. ರೈತರು ಹಸುಗಳಿಗೆ ಉತ್ತಮ ಗುಣಮಟ್ಟದ ಆಹಾರ ನೀಡಬೇಕು. ಆಗ ಉತ್ತಮ ಹಾಲು ದೊರಕಲು ಸಾಧ್ಯ ಎಂದರು. ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಸರಗೂರು ಕಾಡಂಚಿನ ಪ್ರದೇಶವಾಗಿರುವುದರಿಂದ ಬೇಸಿಗೆಯಲ್ಲಿ ಹಸಿ ಮೇವು ಕೊರತೆ ಇರಲಿದೆ. ಹೀಗಾಗಿ ರೈತರು ಹಸಿ ಮೇವಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಲಿನ ಮಾರಾಟ ಕೇಂದ್ರಗಳು ಗ್ರಾಹಕ ಸ್ನೇಹಿಯಾಗಬೇಕು ಎಂದರು.

ಗೊಂತಗಾಲದಹುಂಡಿ ಡೈರಿ ಅಧ್ಯಕ್ಷ ಸಿದ್ದಶೆಟ್ಟಿ, ಮೈಮುಲ್ ಅಧಿಕಾರಿಗಳಾದ ಸಣ್ಣತಮ್ಮೇಗೌಡ, ಆರೀಫ್ ಇಕ್ಬಾಲ್, ಪಪಂ ಸದಸ್ಯ ಶ್ರೀನಿವಾಸ್, ಕೊತ್ತೇಗಾಲ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿದೇವಿ, ಸದಸ್ಯ ಚಿಕ್ಕರಾಜಶೆಟ್ಟಿ, ನಾಗೇಶ್, ಗ್ರಾಪಂ ಮಾಜಿ ಅಧ್ಯಕ್ಷ ಬಸವರಾಜು, ಗ್ರಾಮದ ದೊಡ್ಡ ಯಜಮಾನ ರವಿ, ಯಜಮಾನ ಮಾದಶೆಟ್ಟಿ, ಡೈರಿ ಉಪಾಧ್ಯಕ್ಷ ಲೋಕೇಶ್ ಕುಮಾರ್, ನಿರ್ದೇಶಕರಾದ ನಾಗೇಶ್, ಸ್ವಾಮಿ, ಪ್ರಕಾಶ್, ಮಹೇಂದ್ರ, ಸಿದ್ದರಾಜು, ಮಣಿ, ವಿಜಯ, ಚನ್ನಪ್ಪನಾಯಕ, ರಾಜೇಶ್ವರಿ, ನಾಗಮ್ಮ, ಸಿಇಓ ಗಣೇಶ್, ಗ್ರಾಮಸ್ಥರು ಹಾಜರಿದ್ದರು.

ಗ್ರಾಮೀಣಾಭಿವೃದ್ಧಿಗೆ ನರೇಗಾ ಸಹಕಾರಿ



ಮಲ್ಕುಂಡಿ, ಸೆ.1– ಗ್ರಾಮಗಳ ಅಭಿವೃದ್ಧಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಸಹಕಾರಿ ಎಂದು ತಾಪಂ ಇಓ ಶ್ರೀನಿವಾಸ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಾಡ್ಯದಲ್ಲಿ ರಾಜೀವ್ ಸೇವಾ ಕೇಂದ್ರ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರ ಗ್ರಾಮೀಣ ಜನರ ಅನುಕೂಲಕ್ಕಾಗಿ ಹಾಗೂ ಮಹಿಳೆ, ಪುರುಷ ಇಬ್ಬರಿಗೂ ಸಮಾನ ಕೂಲಿ ದೊರೆಯುವ ಉದೇಶದಿಂದ ನರೇಗಾ ಯೋಜನೆಯನ್ನು ಪ್ರತಿಯೊಬ್ಬರೂ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಈ ವೇಳೆ ತಹಸೀಲ್ದಾರ್ ಶಿವಮೂರ್ತಿ, ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷ ಹರೀಶ್ ಕುಮಾರ್, ಪಿಎಸಿಎಸ್ ಅಧ್ಯಕ್ಷ ಶಂಕರ, ಗ್ರಾಪಂ ಸದಸ್ಯರಾದ ಕೃಷ್ಣ, ದಿವ್ಯ, ಮಂಗಳಮ್ಮ, ಮಹದೇವಮ್ಮ, ಕೃಷ್ಣಮೂರ್ತಿ, ಸಾಕಮ್ಮ, ಮಹದೇವು, ಪಿಡಿಓ ಕರಿಯಪ್ಪ, ಕಾರ್ಯದರ್ಶಿ ನಂಜುಂಡಯ್ಯ ಸೇರಿದಂತೆ ಇತರರಿದ್ದರು.

ಲಿಜೊ ರಾಬಿನ್ ನಿಧನ



ಹುಣಸೂರು, ಸೆ.1– ತಾಲೂಕಿನ ರತ್ನಪುರಿ ದರ್ಗಾ ನಿವಾಸಿ, ಛಾಯಾಗ್ರಾಹಕ ಹಾಗೂ ರಾಬಿನ್ ಸ್ಟುಡಿಯೋ ಮಾಲೀಕ ಲಿಜೊ ರಾಬಿನ್ (32) ಬುಧವಾರ ನಿಧನರಾದರು. ಮೃತರು ತಾಯಿ, ಸಹೋದರಿ, ಪತ್ನಿ, ಮಗು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ರತ್ನಪುರಿಯಲ್ಲಿ ಕ್ರೈಸ್ತ ಸಂಪ್ರದಾಯದಂತೆ ನೆರವೇರಿತು.

ಯಶ್ವಂತ್



ಹೆಚ್.ಡಿ.ಕೋಟೆ, ಸೆ.1– ಪಟ್ಟಣದ ವಿಶ್ವನಾಥ ಕಾಲೋನಿ ನಿವಾಸಿ ಜಗದೀಶ್ ಮೂರ್ತಿ ಅವರ ಪುತ್ರ ಚಾಲಕ ಯಶ್ವಂತ್(38) ಗುರುವಾರ ನಿಧನರಾದರು. ಮೃತರು ತಂದೆ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದ್ದು, ಯಶ್ವಂತ್ ನಿಧನಕ್ಕೆ ಪಟ್ಟಣದ ಶ್ರೀಮಂಜುನಾಥ ಕಾರು ಚಾಲಕರು ವಾಹನ ಮಾಲೀಕರ ಸಂಘ ಸಂತಾಪ ಸೂಚಿಸಿದೆ.

ಇಂದು ವಾಲಿಬಾಲ್ ಪಂದ್ಯಾವಳಿ

ಭೇರ್ಯ, ಸೆ.1– ಹೊಸ ಅಗ್ರಹಾರ ಹೋಬಳಿ ಮಂಡಿಗನಹಳ್ಳಿಯಲ್ಲಿ ಸೆ.2ರಂದು ದೋಸ್ತಿ ದರ್ಬಾರ್ ವಾಲಿಬಾಲ್ ಲೀಗ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದ್ದು, ಗ್ರಾಮದ ಹಳೆ ಸರ್ಕಾರಿ ಶಾಲೆ ಆವರಣದಲ್ಲಿ ಮಧ್ಯಾಹ್ನ 2 ಗಂಟೆಗೆ ಪಂದ್ಯಾವಳಿಗೆ ಶಾಸಕ ಸಾ.ರಾ.ಮಹೇಶ್ ಚಾಲನೆ ನೀಡುವರು. ಜೆಡಿಎಸ್ ಯುವ ನಾಯಕ ಸಾ.ರಾ.ಜಯಂತ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ಮತ್ತು ಟ್ರೋಫಿ ವಿತರಣೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಬುಧವಾರ ತಮ್ಮ 40ನೇ ಹುಟ್ಟುಹಬ್ಬ ಆಚರಿಸಿಕೊಂಡ ವಸತಿ ಯೋಜನೆ ಜಾಗೃತ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಅವರನ್ನು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಅಭಿನಂದಿಸಿದರು. ಈ ವೇಳೆ ಲಕ್ಷ್ಮೀನಾರಾಯಣ, ಸುಹಾಸ್ ಕೆ.ವಿ. ಗೌಡ, ನವೀನ್, ಮಹದೇವು, ಶ್ರೀನಿವಾಸ್, ರಾಮು ಇದ್ದರು.

ಹೆಚ್1 ಎನ್1ಗೆ ಗರ್ಭಿಣಿ ಬಲಿ

ಹುಣಸೂರು, ಸೆ.1– ಗರ್ಭಿಣಿಯೊಬ್ಬರು ಹೆಚ್1 ಎನ್1ಗೆ ಬಲಿಯಾದ ಬಗ್ಗೆ ಹುಣಸೂರು ತಾಲೂಕು ಹನಗೋಡು ಹೋಬಳಿಯ ಕೋಣನಹೊಸಹಳ್ಳಿ ಗ್ರಾಮದಿಂದ ವರದಿಯಾಗಿದೆ.



ಈ ಗ್ರಾಮದ ಸ್ವಾಮಿನಾಯಕ ಎಂಬುವವರ ಪುತ್ರಿ ಛಾಯಾ(35) ಹೆಚ್1 ಎನ್1ಗೆ ಬಲಿಯಾದವರಾಗಿದ್ದು, ಇವರಿಗೆ ಈಗಾಗಲೇ 4 ವರ್ಷದ ಪುತ್ರನಿದ್ದು, 2ನೇ ಮಗುವಿನ ನಿರೀಕ್ಷೆಯಲ್ಲಿದ್ದರು.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಪತಿ ಮನೆಯಿಂದ ಹಬ್ಬಕ್ಕಾಗಿ ಕೋಣನಹೊಸಹಳ್ಳಿ ಗ್ರಾಮಕ್ಕೆ ಬಂದಿದ್ದ ಛಾಯಾ ಅವರಿಗೆ ಜ್ವರ ಕಾಣಿಸಿಕೊಂಡಿದ್ದು, ಹನಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಜ್ವರ ಕಡಿಮೆಯಾಗದೇ ಜೊತೆಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿದ್ದರಿಂದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ವೈದ್ಯಕೀಯ ಪರೀಕ್ಷೆ ವೇಳೆ ಛಾಯಾ ಅವರಿಗೆ ಹೆಚ್1 ಎನ್1 ಖಾಯಿಲೆ ಉಲ್ಬಣವಾಗಿರುವುದು ಪತ್ತೆಯಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ನಿಧನರಾದರು.

ಗರ್ಭಿಣಿ ಮಹಿಳೆ ಹೆಚ್1 ಎನ್1ನಿಂದ ಮೃತಪಟ್ಟಿರುವುದನ್ನು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ಮತ್ತು ಹುಣಸೂರು ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿ ಕುಮಾರ್ ಧೃಡಪಡಿಸಿದ್ದಾರೆ. ಮೃತಪಟ್ಟಿರುವ ಛಾಯಾ ಕುಟುಂಬಸ್ಥರು ಅವರ ಸಂಪರ್ಕ ಹೊಂದಿದ್ದವರನ್ನು ಪರೀಕ್ಷೆಗೆ ಒಳಪಡಿಸುವಂತೆ ಹನಗೋಡು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಜೋಗೇಂದ್ರನಾಥ್ ಅವರಿಗೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿ ಕುಮಾರ್, ತಾಲೂಕಿನ ಬೇರೆ ಯಾವುದೇ ಭಾಗದಲ್ಲೂ ಹೆಚ್1 ಎನ್1 ಲಕ್ಷಣಗಳು ಕಾಣಿಸಿಕೊಂಡಿಲ್ಲ. ಜ್ವರ ಬಂದ ತಕ್ಷಣ ಸಾರ್ವಜನಿಕರು ಸ್ವಯಂ ಚಿಕಿತ್ಸೆ ಪಡೆಯದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಬಟ್ಟೆ ಒಗೆಯಲು ಹೋದ ಮಹಿಳೆ ನಾಲೆಗೆ ಬಿದ್ದು ಸಾವು

ಹಿರೀಕ್ಯಾತನಹಳ್ಳಿ, ಸೆ.1– ನಾಲೆಗೆ ಬಟ್ಟೆ ಒಗೆಯಲು ಹೋದ ಮಹಿಳೆಯೊಬ್ಬರು ತಲೆ ಸುತ್ತು ಬಂದು ನಾಲೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶಿವಣ್ಣನಾಯಕರ ಪತ್ನಿ ಜಯಮ್ಮ (61) ಮೃತಪಟ್ಟವರು. ಗ್ರಾಮದ ಬಳಿ ತುಂಬಿ ಹರಿಯುತ್ತಿರುವ ಹಾರಂಗಿ ನಾಲೆ ಉಪಕಾಲುವೆಯಲ್ಲಿ ಗಣೇಶ ಹಬ್ಬದ ದಿನದಂದು ಬಟ್ಟೆ ಒಗೆಯಲು ಹೋಗಿದ್ದ ವೇಳೆ ಜಯಮ್ಮ ತಲೆಸುತ್ತಿನಿಂದ ನೀರಿಗೆ ಬಿದ್ದು ಅಲ್ಲೇ ಸಾವನ್ನಪ್ಪಿದ್ದಾರೆ. ಸಂಜೆ ವೇಳೆಗೆ ದಾರಿಹೋಕರು ನಾಲೆಯಲ್ಲಿ ಬಟ್ಟೆ ತೇಲುತ್ತಿದ್ದ ಬಗ್ಗೆ ಗ್ರಾಮಸ್ಥರಿಗೆ ತಿಳಿಸಿದ ಮೇರೆಗೆ ಮನೆಯವರು ಹೋಗಿ ನೋಡಿದ ವೇಳೆ ಜಯಮ್ಮನವರ ಶವ ತೇಲುತ್ತಿತ್ತು. ಗ್ರಾಮಸ್ಥರ ನೆರವಿನಿಂದ ಕುಟುಂಬದವರು ಶವ ಮೇಲೆತ್ತಿದ ನಂತರ ಅಂತ್ಯ ಸಂಸ್ಕಾರ ನಡೆಸಿದರು.



ಆಕ್ರಂದನ: ಹಬ್ಬಕ್ಕೆ ಬಂದಿದ್ದ ನೆಂಟರಿಷ್ಟರು ಹಾಗೂ ಗ್ರಾಮಸ್ಥರು ಜಯಮ್ಮ ಸಾವಿಗೆ ಕಣ್ಣೀರು ಹಾಕಿದರು. ಗಣಪತಿ ಹಬ್ಬದ ಸಡಗರದಲ್ಲಿದ್ದ ಮನೆಮಂದಿಯ ಆಕ್ರಂದನ ಮುಗಿಲು ಮುಟ್ಟಿತ್ತು. ಮೃತರಿಗೆ ಪತಿ, ಓರ್ವ ಪುತ್ರ ಇಬ್ಬರು ಪುತ್ರಿಯರಿದ್ದಾರೆ.

ಸೇವಾ ಕಾರ್ಯಗಳೊಂದಿಗೆ ಗಣೇಶ್ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ

● ಬೃಹತ್ ಆರೋಗ್ಯ, ಕಣ್ಣಿನ ತಪಾಸಣೆ, ರಕ್ತದಾನ ಶಿಬಿರ ● ಆಶ್ರಮವಾಸಿಗಳಿಗೆ ಉಪಾಹಾರ ವಿತರಣೆ

ಹುಣಸೂರು, ಸೆ.1– ಉಚಿತ ಬೃಹತ್ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಸೇರಿದಂತೆ ವಿವಿಧ ಸೇವಾ ಕಾರ್ಯಗಳೊಂದಿಗೆ ಹುಡಾ ಅಧ್ಯಕ್ಷ, ಬಿಜೆಪಿ ನಗರಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಅವರ 49ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಹುಟ್ಟುಹಬ್ಬದ ಅಂಗವಾಗಿ ಮುಂಜಾನೆಯೇ ನಗರದ ಗಣಪತಿ ದೇವಾಲಯಕ್ಕೆ ಭೇಟಿ ನೀಡಿದ ಗಣೇಶ್ ಕುಮಾರಸ್ವಾಮಿ, ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಬ್ರಾಹ್ಮಣರ ಬೀದಿಯಲ್ಲಿರುವ ವೃದ್ಧಾಶ್ರಮಕ್ಕೆ ತೆರಳಿ ಗೋ ಪೂಜೆ ನೆರವೇರಿಸಿ, ಅಲ್ಲಿನ ನಿವಾಸಿಗಳಿಗೆ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಿ ಸಿಹಿ ಹಂಚಿ ಸಂಭ್ರಮಿಸಿದರು.

ನಂತರ ನಗರದ ಮೈಸೂರು ರಸ್ತೆಯಲ್ಲಿರುವ ಆಂಜನೇಯಸ್ವಾಮಿ ಸ್ವಾಮಿ ದೇವಾಲಯಕ್ಕೆ ತೆರಳಿದ ಅವರು, ಗಿಡಗಂಟಿಗಳಿಂದ ಮುಚ್ಚಿ ಹೋಗಿ ತಾವೇ ನಿಂತು ಕ್ಲೀನ್ ಮಾಡಿಸಿದ್ದ ಕಲ್ಯಾಣಿಗೆ ಪೂಜೆ ಸಲ್ಲಿಸಿದರು. ಬಳಿಕ ಕುಣೌಡರ ಬೀದಿಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಆಧಾರ್ ಸೇವಾ ಕೇಂದ್ರವನ್ನು ಉದ್ಘಾಟಿಸಿದರು.

ಅರಸು ಪುತ್ಥಳಿಗೆ ಮಾಲಾರ್ಪಣೆ: ನಗರದ ಎಪಿಎಂಸಿ ಬಳಿ ಇರುವ ಮಾಜಿ ಸಿಎಂ ದಿ.ಡಿ.ದೇವರಾಜ ಅರಸು ಪುತ್ಥಳಿಗೆ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಅವರೊಂದಿಗೆ ಗಣೇಶ್ ಕುಮಾರಸ್ವಾಮಿ ಮಾಲಾರ್ಪಣೆ ಮಾಡಿದರು.

ಕಾರು, ಬೈಕ್ ರ್‍ಯಾಲಿ: ಹುಟ್ಟುಹಬ್ಬ ಅಂಗವಾಗಿ ಗಣೇಶ್ ಕುಮಾರಸ್ವಾಮಿ ಅಭಿಮಾನಿಗಳು ನಗರದ ಎಪಿಎಂಸಿಯಿಂದ ಅಂಬೇಡ್ಕರ್ ಭವನದವರೆಗೆ ಕಾರು ಹಾಗೂ ಬೈಕ್ ರ್‍ಯಾಲಿ ನಡೆಸಿದರು. 150ಕ್ಕೂ ಹೆಚ್ಚು ಬೈಕ್, 25ಕ್ಕೂ ಹೆಚ್ಚು ಕಾರುಗಳು ಭಾಗವಹಿಸಿದ್ದವು.

ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ: ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರವನ್ನು ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ ಉದ್ಘಾಟಿಸಿದರು.



ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರವನ್ನು ಗಾವಡಗೆರೆಯ ನಟರಾಜ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಹಿರಿಯರು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಗಣೇಶ್ ಕುಮಾರಸ್ವಾಮಿ ಅವರು ಭವಿಷ್ಯದ ನಾಯಕರಾಗಿ ಹೊರ ಹೊಮ್ಮಲಿದ್ದಾರೆ ಎಂದರು.

ಗಣೇಶ್ ಅವರ ತಾತ ಮೈಲಾರಯ್ಯ, ತಂದೆ ಕುಮಾರಸ್ವಾಮಿ ಅವರು ಮಾಡಿದ ಜನಪರ ಕಾರ್ಯಗಳೇ ಗಣೇಶ್ ಅವರಿಗೆ ಪ್ರೇರಣೆ ಎಂದರು.

ಮಾದಳ್ಳಿ ಮಠದ ಸಾಂಬಸದಾಶಿವ ಸ್ವಾಮೀಜಿ ಮಾತನಾಡಿದರು. ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ತಪಾಸಣೆಗೊಳಪಟ್ಟರು. ನೇತ್ರ ತಪಾಸಣಾ ಶಿಬಿರದಲ್ಲಿ 320 ಮಂದಿ ಭಾಗವಹಿಸಿದ್ದರು. ಈ ಪೈಕಿ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದ 42 ಮಂದಿಯನ್ನು ಕೊಯಮುತ್ತೂರಿನ ಕಣ್ಣಿನ ಆಸ್ಪತ್ರೆಗೆ ಕಳುಹಿಸಲಾಯಿತು. 52 ಮಂದಿ ಕನ್ನಡಕ ಪಡೆದರು. ಎಲ್ಲರಿಗೂ ಉಚಿತ ಔಷಧಿ ವಿತರಿಸಲಾಯಿತು.


ರಕ್ತದಾನ ಶಿಬಿರದಲ್ಲಿ ಗಣೇಶ್ ಕುಮಾರಸ್ವಾಮಿ ಪತ್ನಿ ಹರಿಣಿ, ಪುತ್ರಿ ಭೂಮಿಕಾ ಸೇರಿದಂತೆ 39 ಮಂದಿ ಭಾಗವಹಿಸಿದ್ದರು. ಅಲ್ಲದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾವಿರಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸಗೌಡ, ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಕಾವೇರಿ ಆಸ್ಪತ್ರೆಯ ಡಾ.ಲೋಹಿತ್, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಸಿಪಿಐ ಶ್ರೀನಿವಾಸ್, ಮುಖಂಡರಾದ ಸೂರ್ಯ ಕುಮಾರ್, ರಾಮೇಗೌಡ, ವೆಂಕಟೇಶ್, ಬಿಜೆಪಿ ಮಹಿಳಾಧ್ಯಕ್ಷೆ ವೆಂಕಟಮ್ಮ, ನಗರ ಮಹಿಳಾ ಘಟಕದ ಕಮಲಮ್ಮ, ಯಶೋಧಮ್ಮ, ಗಣಪತಿ, ನಗರಸಭಾ ಸದಸ್ಯರಾದ ಹರೀಶ್, ವಿವೇಕ್, ಕಸಬ ಸಹಕಾರ ಸಂಘದ ಅಧ್ಯಕ್ಷ ವಾಸೇಗೌಡ, ರವಿಕುಮಾರ್, ಮುದ್ದುರಾಮ್, ಮಧು, ನಂಜುಂಡ, ರಮೇಶ್, ಕರವೇ ಅಧ್ಯಕ್ಷ ಪುರುಷೋತ್ತಮ್, ಶಿವಾನಂದ, ನವೀದ್ ಸೇರಿದಂತೆ ಇನ್ನಿತರರಿದ್ದರು.

ಇ–ಕೆವೈಸಿಗೆ ಸೆ.7 ಕೊನೆ ದಿನ

ಹಿರೀಕ್ಯಾತನಹಳ್ಳಿ, ಸೆ.1– ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಗೆ ಇ–ಕೆವೈಸಿ ಮಾಡಿಸಲು ಸೆ.7 ಕೊನೆ ದಿನ ಎಂದು ಗಾವಡಗೆರೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಶ್ರೀಕಾಂತ್ ತಿಳಿಸಿದ್ದಾರೆ.

ನಿನ್ನೆ ನಡೆದ ಕೇಂದ್ರ ಸರ್ಕಾರದ ವೀಡಿಯೋ ಸಂವಾದದಲ್ಲಿ ಸೆ.7ರೊಳಗೆ ಇ–ಕೆವೈಸಿ ಮಾಡಿಸಿಕೊಂಡ ರೈತರಿಗೆ ಮಾತ್ರ ಸೆ.15 ರಂದು ಮುಂದಿನ ಕಂತು ಬಿಡುಗಡೆ ಮಾಡಲಾಗುವುದು. ಗಾವಡಗೆರೆ ಹೋಬಳಿಯಲ್ಲಿ 3600 ರೈತರಲ್ಲಿ ಈಗಾಗಲೇ 1500 ರೈತರು ಇ–ಕೆವೈಸಿ ಮಾಡಿಸಿದ್ದಾರೆ. ಇನ್ನೂ 2000ಕ್ಕೂ ಹೆಚ್ಚು ರೈತರು ಇ–ಕೆವೈಸಿ ಪೂರ್ತಿಗೊಳಿಸಲು ಬಾಕಿ ಇದ್ದು ಗ್ರಾಮವಾರು ರೈತರ ಪಟ್ಟಿಯನ್ನು ಗ್ರಾಪಂ, ಹಾಲಿನ ಡೈರಿ ಹಾಗೂ ವಾಟ್ಸಾಪ್ ಗುಂಪಿನಲ್ಲಿ ಹಾಕಲಾಗಿದೆ. ಆದ್ದರಿಂದ ಸೆ.7 ರೊಳಗೆ ಬಾಕಿ ಇರುವ ಎಲ್ಲಾ ರೈತರು ತಮ್ಮ ಹತ್ತಿರದ ಗ್ರಾಮ ಒನ್ ಕೇಂದ್ರ/ಧರ್ಮಸ್ಥಳ ಗ್ರಾಮೀಣ ಸೇವಾ ಕೇಂದ್ರ/ ಸಾಮಾನ್ಯ ಸೇವಾ ಕೇಂದ್ರ ಅಥವಾ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಇ–ಕೆವೈಸಿ ಮಾಡಿಸುವಂತೆ ಮನವಿ ಮಾಡಿದ್ದಾರೆ.



ಹುಣಸೂರಿನ ಮುನೇಶ್ವರ ಕಾವಲ್ ಮೈದಾನದಲ್ಲಿ ನಡೆದ ಗಣಪತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್, ನಗರಸಭೆ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ವಿಶೇಷ ಪೂಜೆ ಸಲ್ಲಿಸಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೋಬ್ರಾ (ತ): ಬೆ.10.15ಕ್ಕೆ, ಮ.1.45ಕ್ಕೆ, ಬೀಸ್ಟ್ (ಇಂ): ಸಂ.5.35ಕ್ಕೆ, ರಾ.7.50ಕ್ಕೆ, ಗಾಳಿಪಟ –2 (ಕ): ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ಇಂ): ಬೆ.11ಕ್ಕೆ, ತಿರುಚಿಟ್ರಂಬಲಂ (ತ): ಮ.1.15ಕ್ಕೆ, ನಚ್ಚತಿರಂ ನಗರಗಿರಧು (ತ): ಸಂ.4ಕ್ಕೆ, ಕಾರ್ತಿಕೇಯ 2(ತೆ): ರಾ.7.20ಕ್ಕೆ, ಲವ್ 360 (ಕ): ರಾ.10ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.9.55ಕ್ಕೆ, ಗಾಳಿಪಟ 2(ಕ): ಮ.1ಕ್ಕೆ, ಮ.3.55ಕ್ಕೆ, ಕೋಬ್ರಾ (ತ): ಸಂ.6.40ಕ್ಕೆ, ಪಲ್ತು ಜನ್ವರ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಗಾಳಿಪಟ 2 (ಕ): ಬೆ.11.35ಕ್ಕೆ, ರಾ.7.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಮ್ (ಇಂ): ಮ.1.30ಕ್ಕೆ, ಸಂ.4.20ಕ್ಕೆ, ರಂಗ ರಂಗ ವೈಭವಂಗ (ತೆ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕೋಬ್ರಾ (ಇಂ): ಬೆ.10ಕ್ಕೆ, ಮ.1.40ಕ್ಕೆ, ಸಂ.5.20ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಬೆ.11.20ಕ್ಕೆ, ಬೀಸ್ಟ್ (ಇಂ): ಮ.2.10ಕ್ಕೆ, ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಸಂ.4.30ಕ್ಕೆ, ಕೋಬ್ರಾ (ಇಂ): ರಾ.10ಕ್ಕೆ
ಸ್ಕ್ರೀನ್ 3	ಗಾಳಿಪಟ 2(ಕ): ಬೆ.10.45ಕ್ಕೆ, ಮ.1.45ಕ್ಕೆ, ಫ್ಯಾಂಟಸಿ (ಕ): ಸಂ.4.50ಕ್ಕೆ, ಪಲ್ತು ಜನ್ವರ್ (ಮ): ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಬೀಸ್ಟ್ (ಇಂ): ಬೆ.10.50ಕ್ಕೆ, ಲವ್ 360 (ಕ): ಮ.1.10ಕ್ಕೆ, ಗಾಳಿಪಟ 2(ಕ): ಸಂ.4ಕ್ಕೆ, ರಾ.7.05ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ.
ಸ್ಕ್ರೀನ್ 2	ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ.
ಸ್ಕ್ರೀನ್ 3	ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
ಸ್ಕ್ರೀನ್ 4	ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೋಬ್ರಾ (ತ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೋಬ್ರಾ (ತ)	4 ಪ್ರದರ್ಶನಗಳು
ಸಂಗಂ	
ರಂಗ ರಂಗ ವೈಭವಂಗ (ತೆ)	4 ಪ್ರದರ್ಶನಗಳು
ಲಿಡೋ	
ಧಮಾಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೋಬ್ರಾ (ತ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022



3ನೇ ದಿನ, ಶುಕ್ರವಾರ 2–9–2022

ಇಂದಿನ ರೇಸಿಗೆ ನಮ್ಮ ಆಂಕ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಶಿವಕಾಸಿ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ಮಿರಾಕ್ಯೂಲಸ್ ಗರ್ಲ್ 2. ಸ್ಟಾರ್ ಸ್ಟೆಕ್ 3. ರ್‍ಯಾಪ್ಟರ್

II. Lt.Col. D.K. ಮಿಸ್ತ್ರಿ ಮೆಮೋರಿಯಲ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಮಾರ್ವೆಲ್ ಪ್ರಿನ್ಸಸ್ 2. ಡಿ ಪೈರ್ 3. ವಿಜಯ ಸಾರಥಿ

III. M.S.ಸುರೇಶ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ರಿಂದ 85. ಮ.3.00ಕ್ಕೆ
1 ಬ್ರೂನ್ ಹಿಲ್ಡ್ 2 ಕಿಂಗ್ ಟಿ ಚೆಲ್ಲಾ 3 ವೈಲ್ಡ್ ಸ್ಪೆಲ್

IV. K.T. ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ ಡಿ1–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ನೈಸ್ ಕ್ಯಾನ್ ಬಿಸ್ 2. ಅಸ್ಟ್ರಾಲಜರ್ 3. ಪರ್ಫೆಕ್ಟ್ ಇಮ್ಯಾಜಿನೇಷನ್

V. H.H. ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1400 ಮೀ. 4 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಮೈ ಒಪೀನಿಯನ್ 2. ಪ್ರೈಸ್‌ಲೆಸ್ ಗೋಲ್ಡ್ 3. ಬೆಲ್ಲಾಟರ್

VI. K.T. ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ ಡಿ2–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಪಾರ್ಕರ್ 2. ಇಂಪೀರಿಯಸ್ 3. ಡಾಲ್‌ಹೌಸಿ

VII. ಸ್ಟ್ಯಾಂಡರರ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ನೊಟೋರಿಟಿ 2. ಗ್ಯಾಲರಿಕ್ವೀನ್ 3. ಫ್ಲೆಮಿಂಗೊ ಡ್ಯಾನ್ಸರ್

ದಿನದ ಅತ್ಯುತ್ತಮ	: ಪಾರ್ಕರ್
ಡಬ್ಬಲ್	: ಮಿರಾಕ್ಯೂಲಸ್ ಗರ್ಲ್, ಬ್ರೂನ್ ಹಿಲ್ಡ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ